ವೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಮೈಸೂರು ಮಿತ್ರ 46

ಜುಲೈ 9 ಬುಧವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 83 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಶೀಘ್ರವೇ 20 ಸಾವಿರ ಶಿಕ್ಷಕರ ನೇಮಕ

ಶಿಕ್ಷಣ ಸಚಿವ ಮಧು ಬಂಗಾರಪ್ಪ ಮಾಹಿತಿ



ಬೈಲಹೊಂಗಲ (ಬೆಳಗಾವಿ ಜಿಲ್ಲೆ): 'ಒಳಮೀಸಲಾತಿ ಸಮೀಕ್ಷೆ ವರದಿ ಬಂದ ತಕ್ಷಣ ಶಾಲೆಗಳಿಗೆ ಮತ್ತು ಅನುದಾನಿತ ಶಾಲೆಗಳಿಗೆ, ಕಾಲೇಜುಗಳಿಗೆ ಒಟ್ಟು 20 ಸಾವಿರ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗುವುದು' ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ಹೇಳಿದರು.

ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಮಂಗಳವಾರ ನಡೆದ ನೂತನ ಕೊಠಡಿಗಳ ಉದ್ಘಾಟನೆ ಮತ್ತು 2025–26ನೇ ಸಾಲಿನ ಕ್ರೀಡೆ, ಸಾಂಸ್ಕೃತಿಕ ಹಾಗೂ ಎನ್‌ಎಸ್‌ಎಸ್ ಚಟುವಟಿಕೆಗಳ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ನನ್ನ ಮೇಲೆ ವಿಶ್ವಾಸ ಇಟ್ಟು ಸಿಎಂ, ಡಿಸಿಎಂ ಅವರು ನನಗೆ ಮಹತ್ವದ ಇಲಾಖೆ ಕೊಟ್ಟಿದ್ದಾರೆ. ಶಿಸ್ತುಬದ್ಧವಾಗಿ ಕೆಲಸ ಮಾಡುತ್ತಿದ್ದೇನೆ. ಧಾರ್ಮಿಕ ಕಾರ್ಯಕ್ರಮಗಳಿಗೆ, ದೇವಸ್ಥಾನಗಳ ಅಭಿವೃದ್ಧಿಗೆ ನಾನು ದೇಣಿಗೆ, ಅನುದಾನ ಕೊಡುವುದು ಕಡಿಮೆ. ಶಿಕ್ಷಣಕ್ಕೆ ಶಾಲಾ–ಕಾಲೇಜುಗಳಿಗೆ, ವಿದ್ಯಾರ್ಥಿಗಳಿಗೆ ಹೆಚ್ಚು ಅನುದಾನ ಕೊಡುತ್ತೇನೆ. 46 ಸಾವಿರ ಶಾಲೆಗಳ ಪೈಕಿ, 57 ಲಕ್ಷ ಮಕ್ಕಳಿಗೆ ಮೊಟ್ಟೆ, ಬಾಳೆಹಣ್ಣು ಕೊಡಲಾಗುತ್ತಿದೆ. ಮಕ್ಕಳಲ್ಲಿ ಪೌಷ್ಟಿಕತೆ ಮುಖ್ಯ, ಆರೋಗ್ಯ ಚೆನ್ನಾಗಿದ್ದರೆ ವಿದ್ಯೆ ತಲೆಗೆ ಹತ್ತುತ್ತದೆ ಎಂದರು.

ನೀಟ್, ಸಿಇಟಿ, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಬಡ ವಿದ್ಯಾರ್ಥಿಗಳನ್ನು ತಯಾರು ಮಾಡುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ 25 ಸಾವಿರ ಮಕ್ಕಳಿಗೆ ಉಚಿತ ಕೋಚಿಂಗ್ ನೀಡುತ್ತಿದೆ. ಇದು ದೇಶದಲ್ಲಿಯೇ ಇತಿಹಾಸವಾಗಿದೆ. ಮುಂಬರುವ ದಿನಗಳಲ್ಲಿ ಎಲ್ಲ ವಿದ್ಯಾರ್ಥಿಗಳಿಗೆ ತರಬೇತಿ ನೀಡಲು ಕ್ರಮ ಕೈಗೊಳ್ಳಲಾಗುವುದು. ಮಕ್ಕಳ ಕಲಿಕೆಗೆ ಅನುಕೂಲ ಮಾಡುವ ನಿಟ್ಟಿನಲ್ಲಿ ಸರ್ಕಾರಿ ಶಾಲೆಗಳಿಗೆ ಉಚಿತ ವಿದ್ಯುತ್ ಪೂರೈಕೆ ಮಾಡಲಾಗುತ್ತಿದೆ. ಬಡ ಮಕ್ಕಳ ಏಳ್ಗೆಗೆ ರಾಜ್ಯ ಸರಕಾರ ಹಗಲಿರುಳು ಶ್ರಮಪಡುತ್ತಿದೆ. ಬೆಳಗಾವಿ ಜಿಲ್ಲೆಯಲ್ಲಿ ಬೈಲಹೊಂಗಲ ಸರಕಾರಿ ಪದವಿ ಪೂರ್ವ ಕಾಲೇಜು ಮಾದರಿಯಾಗಿದೆ. ಈ ಭಾಗದಲ್ಲಿ ಶಿಕ್ಷಣ ಕ್ರಾಂತಿ ಮಾಡುತ್ತಿರುವ ಶಾಸಕ ■ 6ನೇ ಪುಟಕ್ಕೆ

ಅವಧಿ ಮುಗಿದ ಅಪಾಯಕಾರಿ ಔಷಧಗಳ ಶೌಚಾಲಯಕ್ಕೆ ಹಾಕಿ ಫ್ಲಷ್ ಮಾಡಿ!

ಸಿಡಿಎಸ್‌ಸಿಒ ಸಲಹೆ



ನವದೆಹಲಿ: ಸಾಕುಪ್ರಾಣಿಗಳು ಹಾಗೂ ಜನರಿಗೆ ಹಾನಿ ಉಂಟುಮಾಡುವುದನ್ನು ತಪ್ಪಿಸಲು ಅವಧಿ ಮುಗಿದ ಅಥವಾ ಬಳಸದ 17 ಬಗೆಯ ಔಷಧಗಳನ್ನು ಕಸದ ಬುಟ್ಟಿಗೆ ಎಸೆಯುವ ಬದಲಾಗಿ ಅವುಗಳನ್ನು ಶೌಚಾಲಯಕ್ಕೆ ಹಾಕಿ ಫ್ಲಷ್ ಮಾಡಬೇಕು ಎಂದು ಕೇಂದ್ರ ಔಷಧ ನಿಯಂತ್ರಣ ಗುಣಮಟ್ಟ ಸಂಸ್ಥೆ (ಸಿಡಿಎಸ್‌ಸಿಒ) ಸೂಚನೆ ನೀಡಿದೆ.

ಇದರಲ್ಲಿ **ಟ್ರಾಮಡಾಲ್, ಟಪೆಂಟಡಾಲ್, ಡಯಾಜೆಪಮ್, ಆಕ್ಸಿಕೊಡೋನ್** ಹಾಗೂ **ಫೆಂಟಾನೈಲ್** ಔಷಧಗಳು ಹಾನಿಕರವಾಗಿದ್ದು, ವೈದ್ಯರ ಸಲಹೆ ಪಡೆಯದೆ ಅವನ್ನು ಸೇವಿಸಿದರೆ, ಪ್ರಾಣ ಹಾನಿ ಸಂಭವಿಸುವ ಸಾಧ್ಯತೆಯೂ ಇದೆ ಎಂದು ತಿಳಿಸಿದೆ. ಈ ಎಲ್ಲಾ ಔಷಧಗಳನ್ನು ಹೆಚ್ಚಾಗಿ ನೋವು ನಿವಾರಣೆಗೆ, ಒತ್ತಡ ನಿವಾರಣೆಗೆ ಅಥವಾ ಇನ್ನಿತರ ಪರಿಸ್ಥಿತಿಗಳಲ್ಲಿ ಬಳಸಲಾಗುತ್ತದೆ.

ಅವಧಿ ಮುಗಿದ ಹಾಗೂ ಬಳಸದ ಔಷಧಗಳನ್ನು ಸುರಕ್ಷಿತ ರೀತಿಯಲ್ಲಿ ಹಾಗೂ ಸರಿಯಾಗಿ ವಿಲೇವಾರಿ ಮಾಡುವುದು ಪರಿಸರ ಸಂರಕ್ಷಣೆ ಹಾಗೂ ಸಾರ್ವಜನಿಕರ ಆರೋಗ್ಯದ ನಿಟ್ಟಿನಲ್ಲಿ ಮಹತ್ವದ್ದಾಗಿದ್ದು, ಈ ಕುರಿತು ಮಾರ್ಗದರ್ಶಿಗಳನ್ನು ಬಿಡುಗಡೆಗೊಳಿಸಿದೆ.

ಈ ಉತ್ಪನ್ನಗಳ ಗುಣಮಟ್ಟ, ಸುರಕ್ಷತೆ ಹಾಗೂ ಪರಿಣಾಮಕಾರಿ ತತ್ವವನ್ನು ಖಾತರಿಪಡಿಸಿ, ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಈ ಕ್ರಮ ■ 6ನೇ ಪುಟಕ್ಕೆ

ಕೆಆರ್‌ಎಸ್ ಹಿನ್ನೀರಲ್ಲಿ ಪುಂಡ-ಪೋಕರಿಗಳು, ಕುಡುಕರು, ಹೇಸಿಗೆ ಮಾಡುವವರಿಗೆ ಬ್ರೇಕ್

ಮಿತ್ರನ ಫಲಶ್ರುತಿ

ಇಲವಾಲ ಪೊಲೀಸರ ಕಾರ್ಯಾಚರಣೆ: ಐವರ ಬಂಧನ

■ ಸಾರ್ವಜನಿಕ ಸ್ಥಳದಲ್ಲಿ ಮದ್ಯ ಸೇವನೆ ಮಾಡುತ್ತಿದ್ದ ನಾಲ್ವರು, ಅಕ್ರಮವಾಗಿ ಮದ್ಯ ಪೂರೈಸುತ್ತಿದ್ದ ಓರ್ವ ಅರೆಸ್ಟ್ ■ ಇದು ಬರೀ ಕಣ್ಣೊರೆಸುವ ತಂತ್ರವಾಗದೇ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಮೀನಾಕ್ಷಿಪುರವೂ ಸೇರಿದಂತೆ ಸುತ್ತಮುತ್ತಲ ಗ್ರಾಮಸ್ಥರ ಆಗ್ರಹ




ಮೈಸೂರು ತಾಲೂಕಿನ ಮೀನಾಕ್ಷಿಪುರದ ಕೆಆರ್‌ಎಸ್ ಹಿನ್ನೀರಿನ ಪ್ರದೇಶದಲ್ಲಿ ಮದ್ಯಪಾನ ಮಾಡುತ್ತಿದ್ದವರನ್ನು ಇಲವಾಲ ಪೊಲೀಸರು ಬಂಧಿಸಿದರು. ಬಲಚಿತ್ರದಲ್ಲಿ ವಾಹನ ತಪಾಸಣೆ ನಡೆಸುತ್ತಿರುವುದನ್ನು ಕಾಣಬಹುದು.

ಮೈಸೂರು, ಜು.8(ಎಂಟಿವೈ)– ಮೈಸೂರು ತಾಲೂಕಿನ ಇಲವಾಲ ಹೋಬಳಿಯ ಮೀನಾಕ್ಷಿಪುರದ ಬಳಿ ಕೆಆರ್‌ಎಸ್ ಹಿನ್ನೀರಿನಲ್ಲಿ ಪುಂಡಾಟಿಕೆ, ಕುಡುಕರ ಹಾವಳಿಗೆ ಬ್ರೇಕ್ ಹಾಕಲು ಪೊಲೀಸರು ಮುಂದಾಗಿದ್ದು, ಇಲ್ಲಿಗೆ ಬರುವ ಪುಂಡ–ಪೋಕರಿಗಳಿಗೆ ಮದ್ಯ ಪೂರೈಸುತ್ತಿದ್ದ ಓರ್ವ, ಸಾರ್ವಜನಿಕ ಸ್ಥಳದಲ್ಲಿ ಮದ್ಯ ಸೇವಿಸುತ್ತಿದ್ದ ನಾಲ್ವರು ಸೇರಿದಂತೆ ಐವರನ್ನು ಬಂಧಿಸಿದ್ದಾರೆ.

ತುಂಬಿ ತುಳುಕುತ್ತಿರುವ ಕೆಆರ್‌ಎಸ್ ಜಲಾಶಯ ನೋಡಲು ಆಗಮಿಸುವ ಪ್ರವಾಸಿಗರ ಸಂಖ್ಯೆ ಹೆಚ್ಚಾಗುತ್ತಿದೆ. ಈ ಮಧ್ಯೆ ಹಿನ್ನೀರಿನ ಪ್ರದೇಶದಲ್ಲಿ ಪ್ರವಾಸಿಗರ ಸಂಖ್ಯೆ ದಿನೇ ದಿನೆ ಹೆಚ್ಚಾಗುತ್ತಿದೆ. ಅದರಲ್ಲೂ ಮೈಸೂರು ತಾಲೂಕಿನ ಇಲವಾಲ ಹೋಬಳಿಯ ಮೀನಾಕ್ಷಿಪುರದ ಬಳಿ ಹೀಗೆ ಬರುವಂತಹ ಪ್ರವಾಸಿಗರಲ್ಲಿ ಬಹುತೇಕರು ಮೋಜು–ಮಸ್ತಿಗಿಳಿಯುತ್ತಾರೆ. ಪುಂಡರಂತೂ ಮದ್ಯದ ಬಾಟಲಿ ಕೈಗೆ ಬಂದರೆ ಮುಗಿಯಿತು, ಅಟ್ಟಹಾಸ ಮೆರೆಯುತ್ತಾರೆ. ಹಾಗಾಗಿ ಕುಟುಂಬ ಸದಸ್ಯರೊಂದಿಗೆ ಹಿನ್ನೀರಿಗೆ ಬರುವ ಪ್ರವಾಸಿಗರು ಹಾಗೂ ಸ್ಥಳೀಯರು ತೀವ್ರ ಮುಜುಗರ ಅನುಭವಿಸುವಂತಾಗಿತ್ತು. ಜು.7ರ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳಲ್ಲಿ ಪುಂಡ– ಪೋಕರಿಗಳ ಹುಚ್ಚಾಟ–ರಂಪಾಟ ಚಿತ್ರ ಸಹಿತ ವಿಶೇಷ ವರದಿ ಪ್ರಕಟವಾಗಿತ್ತು.


ಇದರಿಂದ ಎಚ್ಚೆತ್ತುಕೊಂಡ ಇಲವಾಲ ಪೊಲೀಸರು ಮೀನಾಕ್ಷಿಪುರದ ಬಳಿ ಕೆಆರ್‌ಎಸ್ ಹಿನ್ನೀರು ಪ್ರದೇಶದಲ್ಲಿ ಕಾರ್ಯಾಚರಣೆ ನಡೆಸಿ, ಪ್ರವಾಸಿಗರಿಗೆ ಮದ್ಯ ಮಾರಾಟ ಮಾಡುತ್ತಿದ್ದ ಮೈಸೂರಿನ ಪಡುವಾರಹಳ್ಳಿ ನಿವಾಸಿ ಪ್ರೇಮ್(24) ಹಾಗೂ ಮದ್ಯ ಸೇವಿಸುತ್ತಿದ್ದ ಪಡುವಾರಹಳ್ಳಿಯ ರಾಘವೇಂದ್ರ, ನೆಲಮಂಗಲದ ರಾಹುಲ್(27), ಮಧು (26), ಗಾಂಧಿನಗರದ ಗೌತಮ್(24) ಎಂಬುವರನ್ನು ಬಂಧಿಸಿದ್ದಾರೆ. ಬಂಧಿತರನ್ನು ಇಲವಾಲ ಠಾಣೆಗೆ ಕರೆದೊಯ್ದು ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. ಗ್ರಾಮಾಂತರ ಠಾಣೆಯ ಸರ್ಕಲ್ ಇನ್ಸ್‌ಪೆಕ್ಟರ್ ಶಿವನಂಜಶೆಟ್ಟಿ, ಸಬ್‌ಇನ್ಸ್‌ಪೆಕ್ಟರ್ ಬಿ.ಮಹೇಂದ್ರ, ಸಿಬ್ಬಂದಿಗಳಾದ ಮಹೇಶ್, ಅಭಿಷೇಕ್, ಜೀಪ್ ಚಾಲಕ ಹರೀಶ್ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು. ಮೀನಾಕ್ಷಿಪುರದ ಬಳಿ ಹಿನ್ನೀರಿನಲ್ಲಿ ಅಕ್ರಮ ಚಟುವಟಿಕೆ ಕಂಡು ಬಂದರೆ ಮಾಹಿತಿ ನೀಡುವಂತೆ ಸ್ಥಳೀಯರಿಗೆ ಸಲಹೆ ನೀಡಿದರು.

ಗಸ್ತು ಮುಂದುವರೆಸಬೇಕು: ಮೀನಾಕ್ಷಿಪುರ, ಕಲ್ಲೂರು, ಆನಂದೂರು ಗ್ರಾಮದ ಗ್ರಾಮಸ್ಥರು 'ಮೈಸೂರು ಮಿತ್ರ' ನೊಂದಿಗೆ ಮಾತನಾಡಿ, ಪತ್ರಿಕೆಯಲ್ಲಿ ಅಕ್ರಮ ಚಟುವಟಿಕೆ ತಾಣದ ಬಗ್ಗೆ ಸುದ್ದಿ ಪ್ರಕಟವಾದ ಹಿನ್ನೆಲೆಯಲ್ಲಿ ಸೋಮವಾರ ಸಂಜೆಯಿಂದಲೇ ಇಲವಾಲ ಪೊಲೀಸರು ಹಿನ್ನೀರಿನ ■ 6ನೇ ಪುಟಕ್ಕೆ



ಮೈಸೂರು ಮಿತ್ರ ಬುಧವಾರ 9 ಜುಲೈ 2025

ಇಂದು ವಿಶ್ವ ಬ್ರಾಹ್ಮಣ ಮಹಾ ಸಂಸ್ಥಾನ ಮಠದ ಶ್ರೀಶಿವ ಸುಜ್ಞಾನ ತೀರ್ಥ ಶ್ರೀಗಳ ಪುರ ಪ್ರವೇಶ



ಶ್ರೀ ಶಿವಸುಜ್ಞಾನ ತೀರ್ಥ ಸ್ವಾಮೀಜಿ

43ನೇ ಚಾತುರ್ಮಾಸ್ಯ ವ್ರತಾನುಷ್ಠಾನದಲ್ಲಿ ಭಾಗಿ

ಮೈಸೂರು, ಜು.8(ಜಿಎ)–ಅರಕಲಗೂಡು ತಾಲೂಕು ಅರೇಮಾದನಹಳ್ಳಿ ವಿಶ್ವ ಬ್ರಾಹ್ಮಣ ಮಹಾಸಂಸ್ಥಾನ ಮಠದ ಶ್ರೀ ಶಿವಸುಜ್ಞಾನ ತೀರ್ಥ ಸ್ವಾಮೀಜಿ ಅವರ 43ನೇ ಚಾತುರ್ಮಾಸ್ಯ ವ್ರತಾನುಷ್ಠಾನ ಹಾಗೂ ಪುರಪ್ರವೇಶವನ್ನು ಜು.9ರಂದು ಏರ್ಪಡಿಸಲಾಗಿದೆ ಎಂದು ಅರೇಮಾದನಹಳ್ಳಿ ವಿಶ್ವಕರ್ಮ ಸುಜ್ಞಾನಪ್ರಭು (ಜೆಎಸ್‌ಪಿ) ಟ್ರಸ್ಟ್‌ನ ಲೋಕೇಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ತಿ.ನರಸೀಪುರ ರಸ್ತೆಯ ಚಿಕ್ಕಹಳ್ಳಿಯಲ್ಲಿರುವ ವಿಶ್ವ ಬ್ರಾಹ್ಮಣ ಮಹಾಸಂಸ್ಥಾನ ಶಾಖಾ ಮಠದ ಸಮುದಾಯ ಭವನದಲ್ಲಿ ಧಾರ್ಮಿಕ ಕಾರ್ಯಕ್ರಮ ನಡೆಸಲಾಗುತ್ತದೆ. ಪೂರ್ಣಕುಂಭದೊಂದಿಗೆ ಶ್ರೀ ಶಿವಸುಜ್ಞಾನ ತೀರ್ಥ ಸ್ವಾಮೀಜಿ ಅವರನ್ನು ಮೆರವಣಿಗೆಯಲ್ಲಿ ಚಿಕ್ಕಹಳ್ಳಿ ಶಾಖಾ ಮಠಕ್ಕೆ ಕರೆತರಲಾಗುವುದು. ಜು.10ರಂದು ಪಂಚಾಯತನ ಪೂಜಾ, ವ್ಯಾಸ ಪೂಜಾ ಹಾಗೂ ಗುರು ಪರಂಪರ ಪೂಜಾ ಸಂಕಲ್ಪದೊಂದಿಗೆ ಚಾತುರ್ಮಾಸ್ಯ ವ್ರತ ಪ್ರಾರಂಭಿಸಲಾಗುವುದು. ಸೆ.9ರವರೆಗೆ ನಿತ್ಯ ಸ್ವಾಮೀಜಿಯವರಿಂದ ಚಾತುರ್ಮಾಸ್ಯ ವ್ರತಾನುಷ್ಠಾನ ಪೂಜೆ ನಡೆಯಲಿದೆ ಎಂದು ತಿಳಿಸಿದರು.

ಎರಡು ತಿಂಗಳು ವೇದಘೋಷ, ಪುರಾಣ ವಾಚನ, ಹರಿಕಥೆ, ಭರತನಾಟ್ಯ, ಸಂಗೀತ, ಗಾಯನ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ ಹಾಗೂ ನಿತ್ಯ ಭಕ್ತಾದಿಗಳಿಗೆ ಮಧ್ಯಾಹ್ನ ಮತ್ತು ರಾತ್ರಿ ಭೋಜನ ವ್ಯವಸ್ಥೆ ಮಾಡಲಾಗಿದೆ. ಸಹಸ್ರಾರು ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ಧಾರ್ಮಿಕ ಕಾರ್ಯವನ್ನು ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ರೋಹಿತೇಶ್ ಶರ್ಮ ಸ್ವಾಮೀಜಿ, ಚಿನ್ನ ಬೆಳ್ಳಿ ಕೆಲಸಗಾರರ ಸಂಘದ ಜಿಲ್ಲಾಧ್ಯಕ್ಷ ಗೋಲ್ಡನ್ ಟಿ.ಸುರೇಶ್, ಆಭರಣ ವ್ಯಾಪಾರಿ ರಮೇಶ್, ಪ್ರಮಿಳಾ, ಶಾರದಮ್ಮ ಇದ್ದರು.

ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ, ಮಹಿಳಾ ಮುಖಂಡರ ಮೇಲೆ ಹಲ್ಲೆ ನಡೆಸಿದವರ ಬಂಧನಕ್ಕೆ ಆಗ್ರಹಿಸಿ ಮೈಸೂರಲ್ಲಿ ಪ್ರತಿಭಟನೆ

ಮೈಸೂರು,ಜು.8(ಜಿಎ)–ಎಸ್‌ಸಿ, ಎಸ್‌ಟಿ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಜಿ.ಪಲ್ಲವಿ ಹಾಗೂ ಕೊರಮ ಸಮುದಾಯದ ಮಹಿಳಾ ಮುಖಂಡರಾದ ಪ್ರಭಾವತಿ ಅವರ ಮೇಲೆ ದೈಹಿಕವಾಗಿ ಹಲ್ಲೆ ನಡೆಸಿರುವ ದುಷ್ಕರ್ಮಿ ಬಂಧಿಸುವಂತೆ ಒತ್ತಾಯಿಸಿ ಮೈಸೂರು ಜಿಲ್ಲಾ ಕುಳುವ ಮಹಾಸಂಘ(ಕೊರಮ–ಕೊರಚ ಸಮುದಾಯ ಒಕ್ಕೂಟ)ದ ವತಿಯಿಂದ ಪ್ರತಿಭಟನೆ ನಡೆಸಲಾಯಿತು.



ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಹಾಗೂ ಕೊರಮ ಸಮುದಾಯದ ಮಹಿಳಾ ಮುಖಂಡರ ಮೇಲೆ ಹಲ್ಲೆ ನಡೆಸಿರುವ ಕಿಡಿಗೇಡಿಗಳನ್ನು ಬಂಧಿಸುವಂತೆ ಒತ್ತಾಯಿಸಿ ಮೈಸೂರು ಜಿಲ್ಲಾ ಕುಳುವ ಮಹಾಸಂಘ (ಕೊರಮ–ಕೊರಚ ಸಮುದಾಯ ಒಕ್ಕೂಟ)ದ ವತಿಯಿಂದ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು ಜಿಲ್ಲಾಧಿಕಾರಿಗಳ ಕಚೇರಿ ಎದುರು ಜಮಾವಣೆಗೊಂಡ ಸಂಘದ ಪದಾಧಿಕಾರಿಗಳು, ಕೊರಮ ಹಾಗೂ ಕೊರಚ ಸಮುದಾಯ ಮುಖಂಡರು, ಹಲ್ಲೆ ನಡೆಸಿರುವ ಘಟನೆಯನ್ನು ತೀವ್ರವಾಗಿ ಖಂಡಿಸಿದರು.

ರಾಜ್ಯದಲ್ಲಿ 101 ಪರಿಶಿಷ್ಟ ಜಾತಿಗಳಲ್ಲಿ 51 ಅಲೆಮಾರಿ ಜಾತಿಗಳಿದ್ದು, ಅವುಗಳಲ್ಲಿ ಕೊರಮ ಹಾಗೂ ಕೊರಚ ಸಮುದಾಯವು ಸೇರಿದೆ. ಒಳ ಮೀಸಲಾತಿಯ ಹೋರಾಟದ ರೂವಾರಿ ಮತ್ತು ತನ್ನ ರಾಜಕೀಯ ಅಸ್ತಿತ್ವದ ಉಳಿವಿಗಾಗಿ ಹೋರಾಡುತ್ತಿರುವ ಮಾಜಿ ಸಚಿವ ಹೆಚ್.ಆಂಜನೇಯ ಅವರು ರಾಜಕೀಯ ದುರುದ್ದೇಶಕ್ಕಾಗಿ ಅಲೆಮಾರಿಗಳ ಗುಂಪಿನ ಒಗ್ಗಟ್ಟು ಒಡೆದು ತಮ್ಮ ಬೇಳೆ ಬೇಯಿಸಿಕೊಳ್ಳಲು ಜು.5ರಂದು ಬೆಂಗಳೂರಿನ ಗಾಂಧಿಭವನದಲ್ಲಿ ಕೊರಮ ಹಾಗೂ ಕೊರಚ ಸಮುದಾಯವನ್ನು ಬಿಟ್ಟು ಪರಿಶಿಷ್ಟ ಜಾತಿಯ ಕೇವಲ 49 ಅಲೆಮಾರಿ ಜಾತಿಗಳ ಮುಖಂಡರನ್ನು ಮಾತ್ರ ಕರೆದು ರಾಜ್ಯಮಟ್ಟ ಸಮಾವೇಶ ನಡೆಸಲು ಪೂರ್ವಭಾವಿ ಸಭೆ ನಡೆಸುತ್ತಿದ್ದರು ಎಂದು ಪ್ರತಿಭಟನಾಕಾರರು ದೂರಿದರು.

ಈ ಸಭೆಯಲ್ಲಿ ಗಲಾಟೆ ತೆಗೆದ ಬಿಜೆಪಿ ಪಕ್ಷದ ಅಲೆಮಾರಿ ಜನಾಂಗದ ಲೋಹಿತಾಕ್ಷ, ವೀರೇಶ, ಶಿವ, ಲೋಕೇಶ, ಶಾಂತಕುಮಾರ, ಬಸವರಾಜ ಮತ್ತು ಸುಭಾಶ್ ಚವಾಣ ಸೇರಿದಂತೆ ಕೆಲವರು ನಿಗಮದ ಅಧ್ಯಕ್ಷೆಯನ್ನು ಏಕಾಏಕಿ ಇಲ್ಲಿಗೆ ಏಕೆ ಬಂದೆ ಎಂದು ಏಕವಚನದಲ್ಲಿ ಅಶ್ಲೀಲ ಪದಬಳಕೆ ಮಾಡಿ, ಅವಾಚ್ಯ ಶಬ್ದಗಳಿಂದ ನಿಂದಿಸಿ, ಮನಬಂದಂತೆ ಎಳೆದಾಡಿ, ಹಲ್ಲೆ ಮಾಡಿ ಒಬ್ಬ ಸರ್ಕಾರದ ಪ್ರತಿನಿಧಿಯ ರಕ್ಷಣೆಗೆ ಧಾವಿಸಿದ ಅಲೆಮಾರಿ ಕೊರಮ ಜನಾಂಗದ ಜಿಲ್ಲಾಧ್ಯಕ್ಷೆ ಶ್ರೀಮತಿ ಪ್ರಭಾವತಿರವರಿಗೂ ರಕ್ತ ಬರುವಂತೆ ಮೈಕೈ ಪರಚಿ ಗೂಂಡಾವರ್ತನೆ ತೋರಿದ್ದಾರೆ ಎಂದು ಅವರು ವಿಷಾದಿಸಿದರು.

ಈ ಸಂಬಂಧ ಬಿಜೆಪಿ ಪಕ್ಷದ ವಕ್ತಾರ ಸೇರಿ 7 ಜನರ ವಿರುದ್ಧ ಹೈಗ್ರೌಂಡ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯ ಎಸಗಿರುವ ಆರೋಪಿಗಳನ್ನು ಕೂಡಲೆ ಬಂಧಿಸಬೇಕು ಮತ್ತು ಕಣ್ಣೆದುರಿಗೇ ನಡೆಯುತ್ತಿದ್ದ ನೀಚ ಕೃತ್ಯದ ಬಗ್ಗೆ ತುಟಿ ಬಿಚ್ಚದೆ ಮೌನವಹಿಸಿ ಇಷ್ಟೆಲ್ಲಾ ಅವಾಂತರಕ್ಕೆ ಪ್ರೋತ್ಸಾಹಿಸಿದ ಹೆಚ್.ಆಂಜನೇಯ ವಿರುದ್ಧ ಕಾಂಗ್ರೆಸ್ ಹೈಕಮಾಂಡ್ ಕರ್ನಾಟಕ ರಾಜ್ಯ ಪ್ರದೇಶ ಕಾಂಗ್ರೆಸ್ ಸಮಿತಿ ಉಪಾಧ್ಯಕ್ಷ ಸ್ಥಾನದಿಂದ ಉಚ್ಚಾಟನೆ ಮಾಡಿ ಪಕ್ಷದಿಂದ ಶಿಸ್ತು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ, ಮುಂದಿನ ದಿನಗಳಲ್ಲಿ ಮುಂದೆ ರಾಜ್ಯಾದ್ಯಾಂತ ಉಗ್ರ ಹೋರಾಟ ನಡೆಸಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ಮೈಸೂರು ಜಿಲ್ಲಾ ಕುಳುವ ಮಹಾಸಂಘದ ಜಿಲ್ಲಾಧ್ಯಕ್ಷೆ ವೇದಾವತಿ, ಉಪಾಧ್ಯಕ್ಷರಾದ ಮಹೇಂದ್ರ, ಪುರುಷೋತ್ತಮ್, ರಾಜಣ್ಣ, ಪ್ರಧಾನ ಕಾರ್ಯದರ್ಶಿ ಮೋಹನ್ ಕಾಯಕ, ಜಂಟಿ ಕಾರ್ಯದರ್ಶಿ ರವಿಕುಮಾರ್, ಖಜಾಂಚಿ ಸೋಮಣ್ಣ, ಸಂಘಟನಾ ಕಾರ್ಯದರ್ಶಿಗಳಾದ ಹಾರೋಹಳ್ಳಿ ರಾಮಕೃಷ್ಣ, ಬನ್ನೂರ್ ದೊರೆಸ್ವಾಮಿ, ತಾಲೂಕು ಮುಖಂಡರಾದ ಶ್ರೀನಿವಾಸ್, ಗೋವಿಂದ, ವಿಶ್ವಾಥ್, ಸತೀಶ್ ಬಸಲಾಪುರ, ದೇವರಾಜ್, ವೆಂಕಟಸ್ವಾಮಿ, ರಾಮು ದಟ್ಟೇಹಳ್ಳ, ಜಿ.ಶ್ರೀನಿವಾಸ್ ಮತ್ತಿತರರರು ಪಾಲ್ಗೊಂಡಿದ್ದರು.

ನಾಳೆಯಿಂದ ಮೈಸೂರಲ್ಲಿ ಹಿರಿಯ ನಾಗರಿಕರ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ಕಾಗ್ನಿಸನ್ಸ್ ಕಾರ್ಯಕ್ರಮ

ಮೈಸೂರು,ಜು.8(ಜಿಎ)–ಜೆಎಸ್‌ಎಸ್ ವೈದ್ಯಕೀಯ ಕಾಲೇಜು, ಕಾಲೇಜಿನ ನಾನಾ ವಿಭಾಗಗಳು ಮತ್ತು ಜೆಎಸ್‌ಎಸ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ವತಿಯಿಂದ ಜು.10 ಮತ್ತು 11ರಂದು ಹಿರಿಯ ನಾಗರಿಕರ ಆರೋಗ್ಯ ಕಾಪಾಡುವ ಉದ್ದೇಶದಿಂದ ಕಾಗ್ನಿಸೆನ್ಸ್ ಪ್ಲಸ್ 2025 ಎಂಬ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಕಾಲೇಜಿನ ಪ್ರಾಂಶುಪಾಲ ಡಾ.ಡಿ.ನಾರಾಯಣಪ್ಪ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ (ಜೆಎಸ್‌ಎಸ್ ಎಚ್‌ಇಆರ್) ಸಂಸ್ಥೆಯ ಸಭಾಂಗಣದಲ್ಲಿ ಜು.10ರಂದು ಬೆಳಗ್ಗೆ 10.30ಕ್ಕೆ ನಡೆಯಲಿರುವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಡಿಮೆನ್ಷಿಯಾ ಇಂಡಿಯಾ ಅಲಯನ್ಸ್ ಅಧ್ಯಕ್ಷ ಡಾ.ರಾಧಮೂರ್ತಿ, ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ ಸ್ಟಡೀಸನ್ ಟಿವಿ ರಾಮನ್ ಪೈ ಚೇರ್‌ನ ಡಾ.ದೀಪ್ತಿ ನವರತ್ನ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಉಪನಿರ್ದೇಶಕಿ ಡಾ.ಪಿ.ರಜನಿ ಆಗಮಿಸುವರು ಎಂದರು.

ಅಮೆರಿಕಾದ ಯೂನಿವರ್ಸಿಟಿ ಆಫ್ ಜಾರ್ಜಿಯಾ, ಒಹಿಯೊ ಯೂನಿವರ್ಸಿಟಿ, ಒಕ್ಲಹೊಮ ಸ್ಟೇಟ್ ಯೂನಿವರ್ಸಿಟಿ, ಬರ್ಮಿಂಗ್‌ಹ್ಯಾಮ್ ಯೂನಿಟಿ ಸಿಟಿ ಪ್ರಾಧ್ಯಾಪಕರು ಸೇರಿದಂತೆ ದೇಶದ ನಾನಾ ರಾಜ್ಯಗಳಿಂದ ಸೇರಿದಂತೆ ರಾಷ್ಟ್ರಮಟ್ಟದಲ್ಲಿ ಹೆಸರು ಮಾಡಿರುವ 17 ತಜ್ಞರು ವಿಷಯ ಮಂಡನೆ ಮಾಡಲಿದ್ದಾರೆ. ಜು.11ರಂದು ಬೆಳಗ್ಗೆ 8ಕ್ಕೆ ತಜ್ಞರು ವಿಷಯ ಮಂಡನೆ ಆರಂಭಿಸಿದರೆ, ಸಂಜೆ 4.15ರವರೆಗೆ ನಾನಾ ವಿಷಯಗಳ ಪರಿಣತರು, ವಿಷಯ ಮಂಡನೆ ಮಾಡಲಿದ್ದಾರೆ. ಹಿರಿಯ ನಾಗರಿಕರಿಗೆ ಬುದ್ಧಿಮಟ್ಟ ಹಾಗೂ ಜ್ಞಾನ ಕಡಿಮೆಯಾಗುವ ವೃದ್ಧ ಕಾಲದ ಸಮಸ್ಯೆಗಳು ನಾನಾ ವಿಷಯಗಳನ್ನು ಮಂಡಿಸಲಾಗುವುದು. ಎರಡು ದಿನಗಳ ಕಾಲ ಮಂಡನೆಯಾಗುವ ಮಾಸಿಕ ಹಾಗೂ ಬೌದ್ಧಿಕ, ಆರೋಗ್ಯದ ಬಗ್ಗೆ ರಾಜ್ಯ ಸರ್ಕಾರಕ್ಕೆ ವರದಿ ನೀಡಲಾಗುವುದು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಡಾ.ಅನಿಲ್ ಬಿಳಿಮಲೆ, ಡಾ.ಋತ್ವಿಕ್ ಕಶ್ಯಪ್ ಮತ್ತಿತರರು ಉಪಸ್ಥಿತರಿದ್ದರು.

ಸಂಸದ ಯದುವೀರ್ ಒಡೆಯರ್‌ಗೆ ಸನ್ಮಾನ...



ಕೆ.ಆರ್.ನಗರ ಪಟ್ಟಣದ ಪಿ.ಎಲ್.ಡಿ.ಬ್ಯಾಂಕ್ ಸಮುದಾಯ ಭವನದಲ್ಲಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಕೆ.ಆರ್.ನಗರ ಮತ್ತು ಸಾಲಿಗ್ರಾಮ ತಾಲೂಕಿನ ನಾಗರಿಕ ವೇದಿಕೆ ಪರವಾಗಿ ಮಾಜಿ ಸಚಿವ ಸಾ.ರಾ.ಮಹೇಶ್ ಅವರು ಸುತ್ತೂರು ಶ್ರೀಗಳ ಸಾನ್ನಿಧ್ಯದಲ್ಲಿ ಚಾಮುಂಡೇಶ್ವರಿಯ ಬೆಳ್ಳಿ ವಿಗ್ರಹ ನೀಡಿ ಸನ್ಮಾನಿಸಿದರು. ಈ ವೇಳೆ ವಿಧಾನಪರಿಷತ್ ಸದಸ್ಯರಾದ ಅಡಗೂರು ಹೆಚ್.ವಿಶ್ವನಾಥ್, ಸಿ.ಎನ್.ಮಂಜೇಗೌಡ, ಜಿಲ್ಲಾ ಪಂಚಾಯತಿ ಮಾಜಿ ಉಪಾಧ್ಯಕ್ಷ ಅಡಗೂರು ಚನ್ನಬಸಪ್ಪ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಬೆಂಗಳೂರು, ಕೋಲಾರದಲ್ಲಿ ಮೂವರು ಶಂಕಿತ ಉಗ್ರರ ಬಂಧನ




ಬೆಂಗಳೂರು: ಬೆಂಗಳೂರು ಮತ್ತು ಕೋಲಾರದಲ್ಲಿ ದಾಳಿ ನಡೆಸಿದ ರಾಷ್ಟ್ರೀಯ ತನಿಖಾ ದಳವು (ಎನ್‌ಐಎ) ಉಗ್ರರಿಗೆ ನೆರವು ನೀಡುತ್ತಿದ್ದ ಆರೋಪದಡಿ ಮೂವರು ಶಂಕಿತ ಉಗ್ರರನ್ನು ಬಂಧಿಸಿದ್ದಾರೆ. ಬೆಂಗಳೂರು ಹಾಗೂ ಕೋಲಾರದ ಐದು ಕಡೆಗಳಲ್ಲಿ ದಾಳಿ ಮಾಡಿದ್ದು, ಪರಪ್ಪನ ಅಗ್ರಹಾರ ಜೈಲಿನ ಮನೋವೈದ್ಯ ಡಾ. ನಾಗರಾಜ್, ಅದೇ ಜೈಲಿನ ಎಎಸ್‌ಐ ಆಗಿದ್ದ ಚಾಂದ್ ಪಾಷಾ ಅನೀಸ್ ಮತ್ತು ಫಾತಿಮಾ ಅವರನ್ನು ರಾಷ್ಟ್ರೀಯ ತನಿಖಾ ದಳವು ಬಂಧಿಸಿದೆ. ದಾಳಿ ವೇಳೆ 2 ವಾಕಿಟಾಕಿ, ಚಿನ್ನಾಭರಣ ವಶಕ್ಕೆ ಪಡೆದಿದ್ದಾರೆ.

ಭಾಷಣ ಕಲೆ ತರಬೇತಿ ಶಿಬಿರ

ಮೈಸೂರು, ಜು.8–ಮೈಸೂರು ಸಾವರ್ಕರ್ ಪ್ರತಿಷ್ಠಾನದ ವತಿಯಿಂದ ಯುವ ಸಮುದಾಯದ ವ್ಯಕ್ತಿತ್ವ ವಿಕಾಸ ಹಾಗೂ ದೇಶಭಕ್ತಿಯ ಮೌಲ್ಯಗಳನ್ನು ಬೆಳೆಸುವ ಉದ್ದೇಶದಿಂದ ಜು.13ರಂದು ಭಾಷಣ ಕಲೆ ತರಬೇತಿ ಶಿಬಿರ ಆಯೋಜಿಸಲಾಗಿದೆ. ಶಿಬಿರದಲ್ಲಿ ಲೇಖಕ, ಭಾಷಣಕಾರ ಚಕ್ರವರ್ತಿ ಸೂಲಿಬೆಲೆ ಯುವಕರಿಗೆ ಮಾರ್ಗದರ್ಶನ ನೀಡಲಿದ್ದಾರೆ. ಶಿಬಿರವು 18ರಿಂದ 40 ವರ್ಷದೊಳಗಿನ ಆಸಕ್ತ ಯುವಕರಿಗೆ ಅವಕಾಶವಿದೆ. ಭಾಗವಹಿಸುವವರಿಗೆ ಪ್ರಮಾಣ ಪತ್ರ ನೀಡಲಾಗುವುದು.

ಸರಗಳ್ಳತನ ಜಾಗ್ರತೆಗಾಗಿ ಮನೆ ಮನೆಗೆ ಕರಪತ್ರ ವಿತರಣೆ

ಮೈಸೂರು, ಜು.8–ಮೈಸೂರಿನ ವಿದ್ಯಾರಣ್ಯಪುರಂನಲ್ಲಿ ಕಳೆದ ಎರಡು ತಿಂಗಳಿಂದ 4 ಸರಗಳ್ಳತನಗಳು ನಡೆದಿವೆ. ಈ ಹಿನ್ನೆಲೆಯಲ್ಲಿ ವಿದ್ಯಾರಣ್ಯಪುರಂ ಸುತ್ತಮುತ್ತ ಮನೆ ಮನೆಗೆ ತೆರಳಿ ಮಹಿಳೆಯರು, ವೃದ್ಧರು ಹಾಗೂ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಕಾರ್ಯ ಆರಂಭಿಸಿದ್ದಾರೆ.



ವಿದ್ಯಾರಣ್ಯಪುರಂ ಪೊಲೀಸ್ ಠಾಣೆ, ಮಾ.ವಿ. ರಾಮಪ್ರಸಾದ್ ಸ್ನೇಹ ಬಳಗದ ವತಿಯಿಂದ ವಿದ್ಯಾರಣ್ಯಪುರಂ ಬಡಾವಣೆಯಲ್ಲಿ ಸರಗಳ್ಳತನ ಜಾಗೃತಿ ಕುರಿತ ಕರಪತ್ರಗಳನ್ನು ವಿತರಿಸಲಾಯಿತು.


ವಿದ್ಯಾರಣ್ಯಪುರಂ ಪೊಲೀಸ್ ಠಾಣೆ ಮತ್ತು ಮಾ.ವಿ.ರಾಮಪ್ರಸಾದ್ ಸ್ನೇಹ ಬಳಗದಿಂದ ಕರಪತ್ರಗಳನ್ನು ವಿತರಿಸಿದರು. ಅಲ್ಲದೇ, ಜನರು ಹೆಚ್ಚಾಗಿ ಸೇರುವ ಉದ್ಯಾನ, ಯೋಗ ಕೇಂದ್ರಗಳು, ವಾಯು ವಿಹಾರ ಮಾಡುವ ಸ್ಥಳಗಳ ಬಳಿ ತೆರಳಿ ಸರಗಳ್ಳತನದಿಂದ ಪಾರಾಗುವುದು ಹೇಗೆ ಎಂಬುದರ ಬಗ್ಗೆ ಮಾಹಿತಿ ನೀಡಿದರು.

ನಗರಪಾಲಿಕೆ ಮಾಜಿ ಸದಸ್ಯ ಮಾ.ವಿ.ರಾಮ್‌ಪ್ರಸಾದ್ ಮಾತನಾಡಿ, ಸರಗಳ್ಳರು ಹೆಚ್ಚಾಗಿ ಬೆಳಗ್ಗೆ ಹಾಗೂ ಸಂಜೆ ವೇಳೆಯೇ ಸಕ್ರಿಯವಾಗುವ ಕಾರಣ ಮಹಿಳೆಯರು ಹಾಗೂ ವೃದ್ಧರು ಹೊರಗೆ ಓಡಾಡುವಾಗ ಆಭರಣ ಪ್ರದರ್ಶನವನ್ನು ಮಾಡಬಾರದು. ಹಾಗೆ ಮಾಡುವುದರಿಂದ ಸರಗಳ್ಳರಿಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಯಾರಾದರೂ ಅನುಮಾನಾಸ್ಪದವಾಗಿ ಓಡಾಡುತ್ತಿದ್ದರೆ ಪೊಲೀಸ್ ಸಹಾಯವಾಣಿ 100ಕ್ಕೆ ಕರೆ ಮಾಡಬೇಕು. ಒಂಟಿಯಾಗಿ ಓಡಾಡದೆ ಇಬ್ಬರಿಗಿಂತ ಹೆಚ್ಚಿನ ಜನರ ಗುಂಪಿನಲ್ಲಿ ಓಡಾಡಬೇಕು. ವಾಯುವಿಹಾರ ಮಾಡುವಾಗ ನೆರೆಹೊರೆಯವರ ಜತೆ ಹೋಗಬೇಕು ಎಂದು ಜಾಗೃತಿ ಮೂಡಿಸಿ ಕರಪತ್ರಗಳನ್ನು ಹಂಚಲಾಗಿದೆ. ಜಾಗೃತಿ ಮೂಡಿಸುವ ಕೆಲಸ ನಿರಂತರವಾಗಿ ನಡೆಯುತ್ತಿದೆ. ಆದರೂ, ಅದನ್ನು ಮಹಿಳೆಯರು ಸರಿಯಾಗಿ ಅರ್ಥ ಮಾಡಿಕೊಳ್ಳದ ಕಾರಣ ಸರಗಳ್ಳತನ ನಿಯಂತ್ರಣ ಕಷ್ಟವಾಗುತ್ತಿದೆ. ಕಳ್ಳರಿಗೆ ಹಣ ಮಾಡಲು ಸರ ಅಪಹರಣ ಸುಲಭದ ದಾರಿಯಾಗಿದೆ ಹೇಳಿದರು.

ಈ ಜಾಗೃತಿ ಅಭಿಯಾನವು ಮುಂದಿನ ದಿನಗಳಲ್ಲಿ ಚಾಮುಂಡಿಪುರಂ, ವಿದ್ಯಾರಣ್ಯಪುರಂ ಸೇರಿದಂತೆ ಪ್ರತಿಯೊಂದು ಪ್ರಮುಖ ವೃತ್ತದಲ್ಲಿ ಬೀದಿ ನಾಟಕ ಮಾಡುವ ಮೂಲಕ ಜನರಲ್ಲಿ ಜಾಗೃತಿ ಮೂಡಿಸಲಾಗುವುದು ಎಂದು ಹೇಳಿದರು.


ಸರಗಳ್ಳರ ವಿರುದ್ಧ ಕಠಿಣ ಕಾನೂನು ಶಿಕ್ಷೆ ವಿಧಿಸಬೇಕು. ಹಾಗೆಯೇ ಪೊಲೀಸ್ ಇಲಾಖೆ ಮೊಹಲ್ಲಾಗಳಲ್ಲಿ ಹೆಚ್ಚಿನ ಭದ್ರತೆಗಳನ್ನು ನೀಡಬೇಕು. ಪೊಲೀಸ್ ಇಲಾಖೆ ಪ್ರತಿ ಮೊಹಲ್ಲಾಗಳಲ್ಲಿ ಸರಗಳ್ಳತನದ ಬಗ್ಗೆ ಜಾಗೃತಿ ಮೂಡಿಸಬೇಕು ಎಂದರು. ವಿದ್ಯಾ ಅರಸು, ಮಂಜುನಾಥ್, ಸೋಮೇಶ್, ಧರ್ಮೇಂದ್ರ ಶಿವು, ಮಂಜುಳಾ, ದೇವೇಂದ್ರ ಸ್ವಾಮಿ, ದೇವಲಾಂಬಿಕ, ಸೂರ್ಯ, ಮುರುಗೇಶ್, ಮಹೇಶ್, ದ್ರಾಕ್ಷಾಯಿಣಿ, ಮಧುಕುಮಾರ್, ಗುರುಮಲ್ಲಪ್ಪ, ರವಿಶಂಕರ್ ಇನ್ನಿತರರು ಭಾಗವಹಿಸಿದ್ದರು.

ನಾಳೆಯಿಂದ ರಾಜಗುರು ಪರಕಾಲ ಮಠದ ಶ್ರೀಗಳಿಂದ ಚಾತುರ್ಮಾಸ್ಯ ಸಂಕಲ್ಪ ಪ್ರಾರಂಭ



ಮೈಸೂರು, ಜು.8–ಮೈಸೂರು ಪರಕಾಲ ಮಠದಲ್ಲಿ ವಿಶ್ವಾಸನಾಮ ಸಂವತ್ಸರದ ಆಷಾಢ ಹುಣ್ಣಿಮೆ, ಗುರುವಾರದಂದು ಬೆಳಿಗ್ಗೆ 10:30 ಗಂಟೆಗೆ ರಾಜಗುರುಗಳಾದ ಪರಕಾಲ ಮಠದ 36ನೇ ಪೀಠಾಧಿಪತಿಗಳಾದ ಪರಮಪೂಜ್ಯ ಶ್ರೀ ಶ್ರೀ ಲಕ್ಷ್ಮಿ ಹಯಗ್ರೀವ ದಿವ್ಯ ಪಾದುಕಾ ಸೇವಕ ಶ್ರೀ ಶ್ರೀಮದ್ ಅಭಿನವ ವಾಗೀಶ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಸ್ವಾಮಿಗಳ 34ನೇ ಚಾತುರ್ಮಾಸ್ಯ ಸಂಕಲ್ಪವನ್ನು ಪ್ರಾರಂಭಿಸಲಿದ್ದಾರೆ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಜಂಟಿ ಕಾರ್ಯದರ್ಶಿ ಹಾಗೂ ಶ್ರೀ ರಾಮಾನುಜ ಸಹಕಾರ ಸಂಘದ ನಿರ್ದೇಶಕ ಟಿ.ಎಸ್.ಅರುಣ್ ತಿಳಿಸಿದ್ದಾರೆ.

ಬಾಬೂಜಿಗೆ ಪುಷ್ಪ ನಮನ...



ಡಾ ಬಾಬು ಜಗಜೀವನರಾಮ್‌ರವರ 39ನೇ ಪುಣ್ಯಸ್ಮರಣೆ ಅಂಗವಾಗಿ ಮಾಲಾರ್ಪಣೆ ಮಾಡಲಾಯಿತು. ಮಾಜಿ ಮೇಯರ್ ಪುರುಷೋತ್ತಮ್, ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಪರಿಶಿಷ್ಟ ಜಾತಿ ವಿಭಾಗದ ಸದಸ್ಯ ಕನಕ ಮೂರ್ತಿ ಹಡಜನ, ಸೊರಬ, ರಾಜಪ್ಪ ಚಿಟ್ಟಿಹುಂಡಿ ಉಪಸ್ಥಿತರಿದ್ದರು.

ಕಾಣೆಯಾದ ಮಹಿಳೆ ಪತ್ತೆಗೆ ಮನವಿ



ಮೈಸೂರು,ಜು.8– ಜೂನ್ 28 ರಂದು ಸುಮಾರು 54 ವರ್ಷದ ಮಹದೇವಮ್ಮ ಎಂಬುವವರು ಕಾಣೆಯಾಗಿದ್ದು, ಕುವೆಂಪುನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಹರೆ: ಮಹದೇವಮ್ಮ ಸುಮಾರು 54 ವರ್ಷ ವಯಸ್ಸಾಗಿದ್ದು, 5.6 ಅಡಿ ಎತ್ತರ, ಕನ್ನಡ ಭಾಷೆ ಮಾತನಾಡುತ್ತಾರೆ. ಗೋಧಿ ಮೈಬಣ್ಣ, ಕೋಲುಮುಖ, ಕಪ್ಪು ತಲೆ ಕೂದಲು ಇರುತ್ತದೆ. ಕಾಣೆಯಾದಾಗ ಹಳದಿ ಬಣ್ಣದ ಸೀರೆ ಹಾಗೂ ರವಿಕೆ ಧರಿಸಿರುತ್ತಾರೆ. ಮುಖದಲ್ಲಿ ಅಪರೇಷನ್ ಮಾಡಿರುವ ಗುರುತು ಇರುತ್ತದೆ. ಕಾಣೆಯಾದ ಮಹಿಳೆಯ ಬಗ್ಗೆ ಮಾಹಿತಿ ಕಂಡುಬಂದಲ್ಲಿ ದೂ.ಸಂ: 0821–2418324, 9480802247 ಅನ್ನು ಸಂಪರ್ಕಿಸಬಹುದು ಎಂದು ಕುವೆಂಪುನಗರ ಪೊಲೀಸ್ ಠಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ

ಎಂ.ಬಿ.ಮಹೇಂದ್ರಕುಮಾರ್



ಮೈಸೂರು, ಜು.8–ಮೈಸೂರಿನ ಬನುಮಯ್ಯ ರಸ್ತೆ 4ನೇ ಕ್ರಾಸ್ ನಿವಾಸಿ ಎಂ.ಬಿ.ಮಹೇಂದ್ರಕುಮಾರ್ (81) ತೀವ್ರ ಹೃದಯಾಘಾತದಿಂದ ಮಂಗಳವಾರ ಬೆಳಗಿನ ಜಾವ ನಿಧನರಾದರು. ಕಳೆದ ವರ್ಷ ಇದೇ ದಿನಾಂಕದಂದು ಅವರ ಪತ್ನಿ ನಿಧನರಾಗಿದ್ದರೆ, 10 ತಿಂಗಳ ಹಿಂದೆ ಹಿರಿಯ ಪುತ್ರಿ ನಿಧನರಾಗಿದ್ದರು. ಮೃತರ ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಲಕ್ಷ್ಮಮ್ಮ



ಮೈಸೂರು,ಜು.8– ವಿನಾಯಕನಗರದ ನಿವಾಸಿ, ದಿವಂಗತ ಉಗ್ರಯ್ಯನವರ ಪತ್ನಿ ಲಕ್ಷ್ಮಮ್ಮ (76) ಮಂಗಳವಾರ ನಿಧನರಾದರು. ಮೃತರು ನಾಲ್ವರು ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ (ಜು.9) ಮಧ್ಯಾಹ್ನ 12 ಗಂಟೆಗೆ ಗೋಕುಲಂನ ಸ್ಮಶಾನದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

9.07.2025 ಬುಧವಾರ, ಮಳೆ ನಕ್ಷತ್ರ: ಪುನರ್ವಸು, 6.07.2025 ರಿಂದ 19.07.2025 ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಶುಕ್ಲ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಮೂಲಾ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ವೆರಿಕೋಸ್ ವೇನ್ಸ್ ಮತ್ತು ವೆರಿಕೋಸ್ ಅಲ್ಸರ್‌ಗಳ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ.
- **ಶ್ರೀ ಸತ್ಯ ಸಾಯಿ ಸೇವಾ ಸಂಘ:** ವಾಹಿನಿ ಮಹೋತ್ಸವ, ಭಗವದ್ ಗೀತಾ ಎಕ್ಸಿಬಿಷನ್, ಸ್ಥಳ: ಶ್ರೀ ಸತ್ಯ ಸಾಯಿಬಾಬಾ ಶಾಲೆ, ಜಯಲಕ್ಷ್ಮಿಪುರಂ, ಬೆಳಗ್ಗೆ 10ರಿಂದ.
- **ಕಾವೇರಿ ಆಯುರ್ವೇದ ಆಸ್ಪತ್ರೆ :** ಕಣ್ಣಿನ ಪೊರೆ, ದೃಷ್ಟಿದೋಷ, ಮಧುಮೇಹದಿಂದ ಉಂಟಾಗುವ ಕಣ್ಣಿನ ಕಾಯಿಲೆ, ರಾತ್ರಿ ಕುರುಡುತನ ಉಚಿತ ಚಿಕಿತ್ಸಾ ಶಿಬಿರ, ಕುತ್ತಿಗೆ ನೋವು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್.
- **ಮರಿಮಲ್ಲಪ್ಪನವರ ವಿದ್ಯಾಸಂಸ್ಥೆ, ಮರಿಮಲ್ಲಪ್ಪ ಪ್ರೌಢಶಾಲೆ :** ವಿದ್ಯಾರ್ಥಿ ಸಂಘದ ಉದ್ಘಾಟನಾ ಸಮಾರಂಭ, ಪ್ರತಿಭಾ ಪುರಸ್ಕಾರ, ಅಧ್ಯಕ್ಷತೆ : ಮರಿಮಲ್ಲಪ್ಪ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಪ್ರೊ. ಕೆ.ಎನ್. ಪಂಚಾಕ್ಷರಸ್ವಾಮಿ, ಮುಖ್ಯ ಆಹ್ವಾನಿತರು : ನಿವೃತ್ತ ಪ್ರಾಧ್ಯಾಪಕ ಡಾ.ಕೆ.ಎಸ್. ಮಲ್ಲೇಶ್, ಸನ್ಮಾನಿತರು : ಡಾ. ಜಿ.ಸಿದ್ದೇಶ್, ಉಪಸ್ಥಿತರು : ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಸ್.ಟಿ.ಜವರೇಗೌಡ, ಶೈಕ್ಷಣಿಕ ಅಧಿಕಾರಿ ಶ್ರೀಮತಿ ಮಂಗಳ ಮುದ್ದುಮಾದಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ ಬಸವರಾಜು, ಮುಖ್ಯೋಪಾಧ್ಯಾಯಿನಿ ಶ್ರೀಮತಿ ಎಸ್. ಮಮತ, ಸ್ಥಳ: ಕಲಾಮಂದಿರ, ವಿನೋಬ ರಸ್ತೆ, ಬೆಳಗ್ಗೆ 9.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಭಾವ ಸೇತು ಭಾಷೆ ಬದಲಾದರು ಭಾವ ಬದಲಾಗ ದಿರಲಿ ಬಾನುಲಿ ಸರಣಿ, ಪ್ರಸ್ತುತಿ–ಸಿ.ಎಸ್. ಪೂರ್ಣಿಮಾ, 6.40 ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿಸರಣಿ, ಗಾಯನ–ಜಿ. ಪುಷ್ಪಲತಾ ಹಾಗೂ ಸಿ. ವಿಶ್ವನಾಥ್, ವ್ಯಾಖ್ಯಾನ– ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಚಿತ್ರಗೀತೆಗಳು, 9.00 ಮನೋನಂದನ, 9.30 ಚಿತ್ರಗೀತೆಗಳು, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ–ಪಂಡಿತ್ ಉಸ್ತಾದ್ ಅಲಿ ಅಹಮದ್ ಹುಸೇನ್–ಶಹನಾಯಿ ವಾದನ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ–ರಾಜಮ್ಮ ಮತ್ತು ಸಂಗಡಿಗರಿಂದ ಶಂಭುಲಿಂಗೇಶ್ವರನ ಹಾಡು, 1.00 ಪ್ರಗತಿಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಯು. ಶ್ರೀನಿವಾಸ್–ಮ್ಯಾಂಡೋಲಿನ್ ವಾದನ, 4.00 ಮಹಿಳಾ ರಂಗ, 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ, ಪ್ರಸ್ತುತಿ–ಡಾ. ಜಯಂತಿ ಪ್ರಸಾದ್ ನೌಟಿಯಾಲ್, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಪ್ರಾಯೋಜಿತ ನೇರ ಫೋನ್–ಇನ್ ಕಾರ್ಯಕ್ರಮ, ಪ್ರಾಯೋಜಕರು–ಕೃಷಿ ಇಲಾಖೆ, ಕರ್ನಾಟಕ ಸರ್ಕಾರ, ವಿಷಯ–ಜಾನುವಾರುಗಳಲ್ಲಿ ಲಸಿಕಾ ಕಾರ್ಯಕ್ರಮ, ಭಾಗವಹಿಸುತ್ತಾರೆ–ಪಶುಪಾಲನೆ ಹಾಗೂ ಪಶುವೈದ್ಯಕೀಯ ಸೇವಾ ಇಲಾಖೆಯ ನಿರ್ದೇಶಕರಾದ ಡಾ. ಮಂಜುನಾಥ್ ಪಾಳೇಗಾರ್, ಬಾನುಲಿ ಬೇಸಾಯ–ದಣಿವರಿಯದ ಕೃಷಿಗೆ ನಮ್ಮ ಸಹಾಯ, ಪ್ರಸ್ತುತಿ –ಆರ್.ಲೋಕೇಶ್ವರಿ, 7.35 ಕನ್ನಡದಲ್ಲಿ ವಾರ್ತೆಗಳು, 7.45 ಕನ್ನಡ ಚಿತ್ರಗೀತೆಗಳು, 8.00 ಮೈಸೂರು ಆಕಾಶವಾಣಿಯ 90ರ ಸಂಭ್ರಮದ ಅಂಗವಾಗಿ ವಿಶೇಷ ಕಾರ್ಯಕ್ರಮ ಸರಣಿ, ನುಡಿನಾದ ಸಂಗಮ–8.30 ಹಿಂದಿ ಚಿತ್ರಗೀತೆಗಳು, 9.30 ಕ್ರೀಡಾಲೋಕ, 10.00 ಜನಪದ ಸಂಗೀತ–ಜವರಯ್ಯ ಮತ್ತು ಸಂಗಡಿಗರಿಮ್ದ ತತ್ವಪದಗಳು

ಕೊಹ್ಲಿಗಾಗಿ ಆರ್‌ಸಿಬಿಯ ಆತುರವೇ ಕಾಲ್ತುಳಿತಕ್ಕೆ ಕಾರಣ

ಸಿಐಡಿ ತನಿಖೆಯಲ್ಲಿ ಸ್ಫೋಟಕ ವಿಚಾರ ಬಯಲು

ಬೆಂಗಳೂರು: ಚಿನ್ನಸ್ವಾಮಿ ಸ್ಟೇಡಿಯಂ ಬಳಿ ಕಾಲ್ತುಳಿತ ಪ್ರಕರಣ ಸಂಬಂಧ ಸಿಐಡಿ ಬಹುತೇಕ ತನಿಖೆ ಮುಗಿಸಿದ್ದು, ವಿರಾಟ್ ಕೊಹ್ಲಿಗಾಗಿ ಆರ್‌ಸಿಬಿ ಮ್ಯಾನೇಜ್‌ಮೆಂಟ್ ತೆಗೆದುಕೊಂಡ ಆತುರದ ನಿರ್ಧಾರವೇ 11 ಜನರ ಸಾವಿಗೆ ಕಾರಣ ಎಂದು ವರದಿ ಸಿದ್ಧಪಡಿಸಿದೆ.

ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಉಂಟಾದ ಕಾಲ್ತುಳಿತ ಪ್ರಕರಣ ಸಂಬಂಧ ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಮೂರು ಎಫ್‌ಐಆರ್‌ಗಳ ಬಗ್ಗೆ ತನಿಖೆ ನಡೆಸಿದ್ದ ಸಿಐಡಿ ಕಾಲ್ತುಳಿತಕ್ಕೆ ಕಾರಣವಾದ ಅಂಶಗಳನ್ನು ಪತ್ತೆ ಮಾಡಿದೆ.

ಸಾವಿರಾರು ವಿಡಿಯೋಗಳು, ಸಿಸಿಟಿವಿ ಕ್ಯಾಮೆರಾ, ಚಿನ್ನಸ್ವಾಮಿ ಸ್ಟೇಡಿಯಂನ 13 ಗೇಟ್‌ಗಳಲ್ಲಿ ಅವ್ಯವಸ್ಥೆ, ಪೊಲೀಸರ ನಿಯೋಜನೆ, ನೂಕುನುಗ್ಗಲು ಉಂಟಾಗಲು ಕಾರಣವೇನು ಎಂಬುದರ ಬಗ್ಗೆ ತನಿಖೆ ನಡೆಸಿ, ಸಿಐಡಿ ವರದಿ ಸಿದ್ಧಪಡಿಸಿದೆ.

ವರದಿಯಲ್ಲೇನಿದೆ: ಆರ್‌ಸಿಬಿ ಸಿಇಓ ರಾಜೇಶ್ ಮೆನನ್, ಮಾರ್ಕೆಟಿಂಗ್ ಹೆಡ್ ನಿಖಿಲ್ ಸೋಸಲೆಯಿಂದ ಕಾರ್ಯಕ್ರಮ ಆಯೋಜನೆ ನಿರ್ಧಾರ ಮಾಡಲಾಗಿತ್ತು. ವಿರಾಟ್ ಕೊಹ್ಲಿಯ ಕಾರಣ ಕೊಟ್ಟು ಕೊಹ್ಲಿ ಆಪ್ತ ನಿಖಿಲ್ ಸೋಸ್ಲೆ ಕೆಎಸ್‌ಸಿಎ ಮೇಲೆ ಅತಿಯಾದ ಒತ್ತಡ ಹಾಕಿ ಕಾರ್ಯಕ್ರಮ ಆಯೋಜಿಸಿದ್ದರು.

ಕಾರ್ಯಕ್ರಮ ಮುಂದೂಡಿಕೆ ಬಗ್ಗೆ ಪೊಲೀಸ್ ಇಲಾಖೆ ಹಾಗೂ ಕೆಎಸ್‌ಸಿಎ ಅಭಿಪ್ರಾಯ ನೀಡಿತ್ತು. ಆದರೆ ಕೊಹ್ಲಿ ಕಾರಣ ಹೇಳಿ ನಾಳೆಯೇ ಕಾರ್ಯಕ್ರಮ ಆಯೋಜನೆ ಆಗಬೇಕು ಎಂದು ನಿಖಿಲ್ ಸೋಸಲೆ ಒತ್ತಡ ಹಾಕಿದ್ದರು. ಕೊಹ್ಲಿ ಯುಕೆಗೆ ಹೋಗಬೇಕು. ಮುಂದೂಡಿದರೆ ಕೊಹ್ಲಿ ಬರುವುದಿಲ್ಲ ಎಂದಿದ್ದರು. ನಿಖಿಲ್ ಸೋಸಲೆ ಒತ್ತಡಕ್ಕೆ ಕಾರ್ಯಕ್ರಮ ಆಯೋಜನೆ ನಡೆದಿತ್ತು.

ಟಿಕೆಟ್ ಗೊಂದಲ, ಟ್ವೀಟ್ ಹಿಂದೆಯೂ ನಿಖಿಲ್ ಸೋಸಲೆ ಕಾರಣ. ಟ್ವೀಟ್ ನಿಂದಲೇ ಸಾಕಷ್ಟು ಜನ ಸೇರಿರುವುದು ತನಿಖೆಯಲ್ಲಿ ಪತ್ತೆಯಾಗಿದೆ. ಅಲ್ಲದೇ ಫ್ರೀ ಟಿಕೆಟ್ ಅನೌನ್ಸ್ ಮಾಡಿದ್ದರಿಂದಲೇ ಜನ ಹೆಚ್ಚು ಸೇರಿದ್ದರು. ಪೊಲೀಸ್ ಬಂದೋಬಸ್ತ್‌ನಲ್ಲಿ ಎಡವಟ್ಟಾಗಿತ್ತು ಕಾಲ್ತುಳಿತದ ವೇಳೆ ಗೇಟ್‌ಗಳ ಬಳಿ ಪೊಲೀಸರೇ ಇರಲಿಲ್ಲ. ಚಿನ್ನಸ್ವಾಮಿ ಸ್ಟೇಡಿಯಂ ಬಳಿ ಹೆಚ್ಚಿನ ಬಂದೋಬಸ್ತ್ ಆಗಿರಲಿಲ್ಲ. ವಿಧಾನಸೌಧದ ಬಳಿಯೇ ಪೊಲೀಸ್ ಇಲಾಖೆ ಹೆಚ್ಚು ಗಮನಹರಿಸಿತ್ತು

ಪ್ರಮಾಣ ಪತ್ರ

[illegible] (Elizabeth Rani E.) [illegible] (No. 3763 0511 7748) [illegible] (Elizabeth Rani E.) [illegible] (WYQ3287760) [illegible] (Eliza Beth Rani E.) [illegible] (Eliza Beth Rani E.) [illegible] (Rani E.) [illegible] (Vinay Sukumar J.) [illegible] (Vinay Kumar J.) [illegible] (Eliza Beth Rani E.) [illegible] (Vinay Sukumar J.) [illegible] 1-7-2025 [illegible]

ಸಹಿ/- ಎಲಿಜಬೆತ್ ರಾಣಿ. ಈ

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರು ಈ ಕೆಳಗೆ ಉದಾಹರಿಸಿರುವ ಷೆಡ್ಯೂಲ್ ಸ್ವತ್ತನ್ನು ಅಂದರೆ ನಂಜನಗೂಡು ತಾ., ದೊಡ್ಡಕೌಲಂದೆ ಹೋಬಳಿ, ಬಾಣೂರು ಗ್ರಾಮದ ಸರ್ವೇ ನಂ: 40/1, 2 ಎಕರೆ 25 ಗುಂಟೆ ಮತ್ತು 40/2, 2 ಎಕರೆ 16 ಗುಂಟೆ ಜಮೀನನ್ನು ಬೆಂಗಳೂರು ನಗರ, ಬಿ.ವಿ.ಕಾರಂತ್ ಅಂಚೆ, ಸೈಂಟ್ ಮೈಕಲ್ ಶಾಲೆಯ ಹಿಂಭಾಗ, ಗೆದ್ದನಹಳ್ಳಿ, ಕೊತನೂರು, ಬಿ.ಡಿ.ಎಸ್ ಗಾರ್ಡನ್ ಮನೆ ನಂ. 254/1ರಲ್ಲಿ ವಾಸವಾಗಿರುವ ದಿವಂಗತ ಎಸ್. ಸುಪುತ್ರಯ್ಯ @ ಸುಪುತ್ರಪ್ಪ ಮತ್ತು ಇವರ ಮಗನಾದ ಎಸ್. ವಸಂತಕುಮಾರ್ ಮತ್ತು ಇವರ ಅಣ್ಣ ಮತ್ತು ತಂಗಿಯರಾದ ರಾಜು, ರತ್ನ ಎಸ್., ನಳಿನಾ ಚಂದ್ರಶೇಖರ್, ಸಂಪತ್ ಕುಮಾರ್ ಎಸ್., ಎಲೀಜಬೇತ್ ಮನೋಹರ, ಲಿಲ್ಲಿ ಪ್ರಭಾಮಣಿ ರವರಿಂದ ಕ್ರಯಕ್ಕೆ ಪಡೆಯಲು ಇಚ್ಚಿಸಿರುತ್ತಾರೆ. ಮೂಲತಃ ಅನುಸೂಚಿ ಸ್ವತ್ತನ್ನು ಎಸ್. ಸುಪುತ್ರಯ್ಯ ರವರು 29/03/1942ನೇ ಇಸವಿಯಲ್ಲಿ ಚಿನ್ನೂರಪ್ಪ ಮತ್ತು ಇವರ ತಮ್ಮ ಮಲ್ಲಪ್ಪ ರವರಿಂದ ಕ್ರಯಕ್ಕೆ ಪಡೆದು, ಸದರಿ ಪತ್ರವು 1ನೇ ಪುಸ್ತಕದ ಪುಟ, 55ರಿಂದ 57ರ ಸಂಪುಟ 49ರ ದಾಖಲೆ ಸಂಖ್ಯೆ: 1979ರಂತೆ ನೋಂದಣಿ ಆಗಿ ಅವರ ಮಾಲೀಕತ್ವಕ್ಕೆ ಬಂದ ಸ್ವತ್ತಾಗಿದ್ದು, ಸದರಿ ಸುಪುತ್ರಯ್ಯ ದಿನಾಂಕ: 09/12/91 ರಂದು ಮರಣ ಹೊಂದಿದ್ದು, ನಂತರದಲ್ಲಿ ಮೇಲೆ ಹೇಳಿದ ಪಕ್ಷಕಾರರ ಹೆಸರುಗಳಲ್ಲಿ, MR-H-18/2023-24ರ ದಿನಾಂಕ: 13/02/2024 ರಂತೆ ವರ್ಗಾಹಿಸಲ್ಪಟ್ಟು ಸ್ವಾಧೀನದಲ್ಲಿರುವ ಸ್ವತ್ತಾಗಿರುತ್ತದೆ.

ಮೇಲೆ ಹೇಳಿದ ಕ್ರಯಕ್ಕೆ ಸುಪುತ್ರಯ್ಯ @ ಸುಪುತ್ರಪ್ಪ ರವರ ವಾರಸುದಾರರಾಗಲಿ ಯಾ ಇತರೆ ಸಾರ್ವಜನಿಕರಾಗಲಿ, ಬೇರೆ ಯಾರಾದರೂ ಆಸಕ್ತಿ ಮತ್ತು ಕ್ರಯದ ಕರಾರು, ಜಪ್ತಿ, ಆದೇಶಗಳು ಇದ್ದಲ್ಲಿ ಈ ಕೆಳಗೆ ನಮೂದಿಸಿರುವ ವಕೀಲರ ಕಛೇರಿಗೆ ತಕರಾರನ್ನು ಪತ್ರಿಕಾ ಪ್ರಕಟಣೆಯಾದ 7 ದಿನಗಳೊಳಗಾಗಿ ಸಂಬಂಧಪಟ್ಟ ದಾಖಲೆಯೊಂದಿಗೆ ಕಳುಹಿಸಿ ಕೊಡಬೇಕಾಗಿ ನೀಡಿರುವ ಪ್ರಕಟಣೆ. ಒಂದು ವೇಳೆ ಯಾವುದೇ ತಕರಾರು ಬಾರದಿದ್ದಲ್ಲಿ ನಮ್ಮ ಕಕ್ಷಿದಾರರು ಸ್ವತ್ತನ್ನು ಕ್ರಯಕ್ಕೆ ಪಡೆಯುತ್ತಾರೆ. ನಂತರದಲ್ಲಿ ಬರುವ ತಕರಾರನ್ನು ಮಾನ್ಯ ಮಾಡುದಿಲ್ಲವೆಂದು ತಿಳಿಯಬಯಸುತ್ತೇವೆ.

ಅನುಸೂಚಿ

ನಂಜನಗೂಡು ತಾಲ್ಲೂಕು, ದೊಡ್ಡಕೌಲಂದೆ ಹೋಬಳಿ, ಬಾಣೂರು ಗ್ರಾಮದ ಸರ್ವೆ ಸಂಖ್ಯೆ 40/1ರ ವಿಸ್ತೀರ್ಣ 2 ಎಕರೆ 28 ಗುಂಟೆ ಪೈಕಿ 3 ಗುಂಟೆ ಬಿ ಖರಾಬ್ ಹೊರತುಪಡಿಸಿ 2 ಎಕರೆ 25 ಗುಂಟೆ ಮತ್ತು ಸರ್ವೆ ಸಂಖ್ಯೆ 40/2ರ ವಿಸ್ತೀರ್ಣ 2 ಎಕರೆ 24 ಗುಂಟೆ ಪೈಕಿ 2 ಎಕರೆ 8 ಗುಂಟೆ ವಿಸ್ತೀರ್ಣದ ಸ್ವತ್ತಿಗೆ ಚೆಕ್ಕುಬಂಧಿ; ಪೂರ್ವಕ್ಕೆ: ಸರ್ವೆ ಸಂಖ್ಯೆ 34ರ ಜಮೀನು, ಪಶ್ಚಿಮಕ್ಕೆ: ಸರ್ವೆ ಸಂಖ್ಯೆ 49, 50/1 ಜಮೀನು, ದಕ್ಷಿಣಕ್ಕೆ: ದಾರಿ, ಉತ್ತರಕ್ಕೆ: ಸರ್ವೆ ಸಂಖ್ಯೆ 41/2, 186/30ರ ಜಮೀನು

ಸಹಿ/- **ಸುಬ್ರಮಣ್ಯ. ಜೆ, ವಕೀಲರು**
ಕಛೇರಿ: 890/4, ಮೊದಲನೇ ಮಹಡಿ,
ಮೂರನೇ ಹಂತ, 1ನೇ ಮೈನ್, ಲಕ್ಷ್ಮೀಪುರಂ,
ಮೈಸೂರು – 570004
ಮೊ: 9844154581

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು – 570 006

ಅಧ್ಯಯನ ಸಾಮಗ್ರಿ ವಿಭಾಗ

ಸಂಖ್ಯೆ: ಕರಾಮುವಿ/ಅಸಾವಿ/06-59/2025-26, ದಿನಾಂಕ: 03.07.2025

ಬಾಕ್ಸ್ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಕಿರುಹೊತ್ತಿಗೆ (Brochure)ಗಳನ್ನು ಮುದ್ರಿಸಿ ಸರಬರಾಜು ಮಾಡಿಕೊಳ್ಳುವ ಸಂಬಂಧ ಬಾಕ್ಸ್ ಟೆಂಡರ್ ಮುಖಾಂತರ (ಅಂದಾಜು ರೂ.5.00 ಲಕ್ಷ) ದರಪಟ್ಟಿ ಅನ್ನು ಆಹ್ವಾನಿಸಲಾಗಿದ್ದು, ಹೆಚ್ಚಿನ ವಿವರಗಳಿಗಾಗಿ ವಿ.ವಿ. ನಿಲಯದ ವೆಬ್‌ಸೈಟ್ www.ksoumysuru.ac.in ಅನ್ನು ನೋಡುವುದು.

DIPR/DDMYS/597/KSMCA/352/2025-26 ಸಹಿ/– ಕುಲಸಚಿವ

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ) ಕೆ.ಪಿ.ಪಿ–ಪೋರ್ಟಲ್ ನಲ್ಲಿ ಮಾತ್ರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ನಂ.2 ವರುಣಾ ನಾಲಾ ನಿರ್ಮಾಣ ವಿಭಾಗ, ಕಾವೇರಿ ನೀರಾವರಿ ನಿಗಮ ನಿಯಮಿತ, ಕಾವೇರಿ ಭವನ ಸಂಕೀರ್ಣ, ಗೋಕುಲಂ ನಾಲ್ಕನೇ ಹಂತ, ಯಾದವಗಿರಿ ಅಂಚೆ, ಮೈಸೂರು – 570020
Ph. 0821-2515598 Email: eevccdn2@gmail.com

ಅಲ್ಪಾವಧಿ ಇ-ಟೆಂಡರ್ ಸಂಖ್ಯೆ: 05/2025-26 ದಿನಾಂಕ: 07.07.2025

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕಾ.ನೀ.ನಿ.ನಿ., ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ನಂ.2, ವರುಣಾ ನಾಲಾ ನಿರ್ಮಾಣ ವಿಭಾಗ, ಮೈಸೂರು ಇವರು ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಐಟಂವಾರು ಅಲ್ಪಾವಧಿ ಟೆಂಡರ್‌ಗಳನ್ನು ಕೆಪಿಪಿ–ಪೋರ್ಟಲ್ ಮೂಲಕ ಮರುಟೆಂಡರ್ (3ನೇ ಕರೆ) ಆಹ್ವಾನಿಸಲಾಗಿದೆ. ಅರ್ಹತೆಗೆ ಬೇಕಾಗುವ ಎಲ್ಲಾ ಅವಶ್ಯಕ ಪ್ರಮಾಣ ಪತ್ರಗಳನ್ನು ಮತ್ತು ದಾಖಲೆಗಳನ್ನು ಸ್ಕ್ಯಾನ್ ಮಾಡಿ ಆನ್‌ಲೈನ್ ಮೂಲಕ ಟೆಂಡರ್‌ಗಳ ಜೊತೆಗೆ ಸಲ್ಲಿಸುವುದು. ಕಾಮಗಾರಿಗಳಟ್ಟ ಕನಿಷ್ಠ ಅಂದಾಜು ಮೊತ್ತ ರೂ.12.50 ಲಕ್ಷದಿಂದ ರೂ.24.00 ಲಕ್ಷದವರೆಗಿನ 04 ಸಂಖ್ಯೆಯ ಮಾನವ ಸಂಪನ್ಮೂಲ ಒದಗಿಸುವ ಕಾಮಗಾರಿಗಳ (3ನೇ ಕರೆ) ಕೈಗೊಳ್ಳಲು ಐಟಂವಾರು ಟೆಂಡರ್ ಕರೆಯಲಾಗಿದ್ದು, ಸದರಿ ಕಾಮಗಾರಿಗಳ ವಿವರ, ಟೆಂಡರ್ ಕ್ವಾರಿಸ್/ಕ್ಲ್ಯಾರಿಫಿಕೇಷನ್ ಕೊನೆಯ **ದಿನಾಂಕ: 14-07-2025 ಸಾಯಂಕಾಲ 04.30 ಗಂಟೆ** ಆನ್‌ಲೈನ್ ಮೂಲಕ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ.ಎಂ.ಡಿಯೊಂದಿಗೆ ಸಲ್ಲಿಸಲು ಕೊನೆಯ **ದಿನಾಂಕ: 15-07-2025 ಸಾಯಂಕಾಲ 05.00 ಗಂಟೆ**ಯವರೆಗೆ ಹಾಗೂ ಟೆಂಡರ್ ಬಿಡ್‌ಗಳನ್ನು ತೆರೆಯುವ **ದಿನಾಂಕ: 17-07-2025 ಬೆಳಿಗ್ಗೆ 11.00 ಗಂಟೆ**, ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಹಾಗೂ ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ: **www.kppp.karnataka.gov.in** ರಲ್ಲಿ ಪಡೆಯಬಹುದು. ಯಾವುದೇ ತಿದ್ದುಪಡಿ/ಮಾರ್ಪಾಡುಗಳನ್ನು ಇ–ಪೋರ್ಟಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ನಂ.2 ವರುಣಾ ನಾಲಾ ನಿರ್ಮಾಣ ವಿಭಾಗ, ಮೈಸೂರು

सीएसबी - केन्द्रीय रेशम उत्पादन अनुसंधान एवं प्रशिक्षण संस्थान

CSB - Central Sericultural Research & Training Institute

[केन्द्रीय रेशम बोर्ड - वस्त्र मंत्रालय - भारत सरकार] मानंदवाडी रोड, श्रीरामपुरा, मैसूर - 570 008

[Central Silk Board - Min. of Textiles – Govt. of India] Manandavadi road, Srirampura Mysore 5780008

सं. सीएसबी/आरटीआई/ सीम/पीए/2025-26 दि:Date: 08/07/2025

WALK-IN-INTERVIEW FOR THE POST OF PROJECT ASSISTANT

A Walk-in-Interview will be held on 24/07/2025 at CSB - Central Sericultural Research and Training Institute, Srirampura, Mysuru - 570 008 as shown below:

'A' 01 (One) Project Assistant (PA) purely on contract basis under CSB approved Project "Vulnerability of Sericulture to Climate change in India" (Proj. Code MOE 02022MIC) for a period Up to August 2026 or completion of project whichever is earlier under CSB Terms and Conditions.

Qualifications for Project Assistant (PA):

1. Three years full time B.Sc. in relevant subject (Sericulture/ Agriculture/ Zoology/ Life Sciences), with minimum/equivalent to 60% marks (50% for SC/ST candidates).

Desirable qualifications: Candidate with knowledge in the sericultural aspects, experience in conducting survey from farmers, Extension Communication Programmees and having higher qualification.

Walk in- Interview will be held on 24/07/2025, time 10:30 AM (candidates should reach the venue by 9:30 AM for verification of documents, other recruitment procedures).

Interested can also visit our website www.csrtimys.res.in, https://csb.gov.in/ for details.

Sd/- Director
CSB CSR &TI, Mysore

ನಕ್ಕರೆ ಅದೇ ಸ್ವರ್ಗ

ಗಂಡ : ನಿನಗೆ ಮಾಂಸಾಹಾರ ಇಷ್ಟನಾ, ಶಾಖಾಹಾರ ಇಷ್ಟನಾ...
ಹೆಂಡತಿ : ನನಗೆ ಮುತ್ತಿನ ಹಾರ, ವಜ್ರಗಳ ಹಾರ,
ರತ್ನಗಳ ಹಾರ ಅಂದ್ರೆ ಇಷ್ಟ!

ಮೈಸೂರು ಮಿತ್ರ

ಬುಧವಾರ, 9 ಜುಲೈ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಕೊಟ್ಟು ಕೆಟ್ಟವರಿಲ್ಲ, ತಿಂದು ಬದುಕಿದವರಿಲ್ಲ,
ಕೊಟ್ಟು ಕದಿಯಲು ಬೇಡ, ಕೊಟ್ಟಾಡಿಕೊಳ್ಳಬೇಡ
– ಸರ್ವಜ್ಞ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಸತ್ಯಕ್ಕೆ ಸಾವಿಲ್ಲ, ಸುಳ್ಳಿಗೆ ಸುಖವಿಲ್ಲ.

ನಿಮ್ಮ ಪತ್ರಗಳು

■ ವಸ್ತ್ರ ಸಂಹಿತೆಗಿಂತ ಮೂಲ ಸೌಕರ್ಯ ಕಲ್ಪಿಸಿ

ಮಾನ್ಯರೆ,

ಮೈಸೂರು– ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು, ಚಾಮುಂಡಿಬೆಟ್ಟಕ್ಕೆ ಬರುವ ಭಕ್ತಾದಿಗಳಿಗೆ ಧರ್ಮಸ್ಥಳ ಮತ್ತು ಇತರೆ ದೇವಾಲಯ ಗಳಲ್ಲಿರುವಂತೆ ವಸ್ತ್ರ ಸಂಹಿತೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವಂತೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ರಾಜ್ಯದಲ್ಲಿ ಎರಡು – ಮೂರು ದೇವಸ್ಥಾನಗಳನ್ನು ಹೊರತುಪಡಿಸಿ ಬಹುತೇಕ ದೇವಸ್ಥಾನಗಳಲ್ಲಿ ಭಕ್ತಾದಿಗಳಿಗೆ, ವಸ್ತ್ರಸಂಹಿತೆ ಜಾರಿಯಲ್ಲಿ ಇಲ್ಲ. ಸಮಸ್ಯೆ ಎಂದರೆ, ಚಾಮುಂಡಿಬೆಟ್ಟ ಪ್ರವಾಸಿ ತಾಣವು ಆಗಿರುವುದರಿಂದ ದೇಶ ವಿದೇಶಗಳಿಂದ, ಸಾವಿರಾರು ಮಂದಿ ಭಕ್ತರು ಭೇಟಿ ನೀಡುತ್ತಾರೆ. ಇಲ್ಲಿಗೆ ಬರುವ ಪ್ರವಾಸಿಗರಿಗೆ ವಸ್ತ್ರ ಸಂಹಿತೆ ಜಾರಿ ಕಷ್ಟ ಸಾಧ್ಯ, ಅದರ ಬದಲು ದೇವಿ ದರ್ಶನಕ್ಕೆ ಬರುವ ಭಕ್ತಾದಿಗಳು, ಮೈ ಮುಚ್ಚುವಂತೆ ಶುಭ್ರವಾದ ಉಡುಪಿನೊಂದಿಗೆ ಬರುವಂತೆ ವಸ್ತ್ರ ಸಂಹಿತೆ ಜಾರಿಗೆ ತಂದರೆ ಸಾಕು. ಎಲ್ಲಕ್ಕಿಂತ ಮುಖ್ಯವಾಗಿ ಚಾಮುಂಡಿಬೆಟ್ಟದಲ್ಲಿ ಸಾರ್ವಜನಿಕರಿಗೆ ಮೊದಲು ಕನಿಷ್ಠ ಮೂಲಸೌಕರ್ಯ ಕಲ್ಪಿಸಲಿ. ಜೊತೆಗೆ ಧಾರ್ಮಿಕ ಪಾವಿತ್ರ್ಯತೆ ಕಾಪಾಡಿಕೊಳ್ಳುವತ್ತ ಗಮನಹರಿಸಲಿ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.

■ ನೋಡುಗರಿಗೆ ಎಚ್ಚರಿಕೆ ಜೊತೆಗೆ ಭದ್ರತೆ ಕಲ್ಪಿಸಿ

ಮಾನ್ಯರೆ,



ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನಲ್ಲಿರುವ ವಿಶ್ವದಾದ್ಯಂತ ಪ್ರವಾಸಿಗರ ಆಕರ್ಷಿಸುವ ಕೃಷ್ಣರಾಜಸಾಗರ (ಕೆಆರ್‌ಎಸ್) ದಲ್ಲಿರುವ ಅಣೆಕಟ್ಟು 93 ವರ್ಷಗಳ ಬಳಿಕ ವಿಪರೀತ ಮಳೆಯ ಅಬ್ಬರದಿಂದ ಅಣೆಕಟ್ಟು ಪೂರ್ಣ ಪ್ರಮಾಣದಲ್ಲಿ ನೀರಿನಮಟ್ಟ ತುಂಬಿರುವ ಹಿನ್ನೆಲೆಯಲ್ಲಿ ನೀರಿನ ಒಳಹರಿವು ಹೆಚ್ಚಾಗಿದೆ. ಇದನ್ನು ನೋಡಲು ಪ್ರವಾಸಿಗರು ಹೊಲಗದ್ದೆಗಳ ಕೊನೆಯಲ್ಲಿ ಹಾಗೂ ನೀರಿನ ಒಳಹರಿವನ್ನು ನೋಡುವ ಸ್ಥಳಗಳಲ್ಲಿ ಯಾವುದೇ ರಕ್ಷಣೆ ಇಲ್ಲದಿದ್ದರೂ ಸಹ ಯುವಕ ಯುವತಿಯರು ಹಾಗೂ ಚಿಕ್ಕ ವಯಸ್ಸಿನ ಮಕ್ಕಳು ನೀರಿನ ಹರಿವನ್ನು ನೋಡಲು ಹತ್ತಿರಕ್ಕೆ ಹೋಗುತ್ತಿದ್ದಾರೆ. ಈ ಸ್ಥಳಗಳ ಪೈಕಿ ಕೆಲವು ಕಡೆ ಹೊಲಗದ್ದೆಗಳು ಮಣ್ಣಿನಿಂದ ಕೂಡಿದ್ದು, ಒದ್ದೆಯಾಗಿ ಕಾಲು ಜಾರುವುದುಂಟು. ಯುವ ಸಮೂಹ ಮತ್ತು ಇಲ್ಲಿಗೆ ಬರುವವರು ಎಚ್ಚರಿಕೆಯಿಂದ ಇರಬೇಕಾಗಿದೆ. ಈಗಾಗಲೇ ಇಂತಹ ನೀರು ಹರಿಯುವ ಸ್ಥಳಗಳಲ್ಲಿ ಮೊಬೈಲ್ ಫೋನ್‌ನಲ್ಲಿ ನೀರಿನ ಸಮೀಪ ಹೋಗಿ ಫೋಟೋ, ಸೆಲ್ಫಿ ತೆಗೆಯಲು ಹೋಗಿ ಆಕಸ್ಮಿಕವಾಗಿ ಅನೇಕ ಸಾವು–ನೋವುಗಳು ಸಂಭವಿಸಿದೆ. ಇದರ ಬಗ್ಗೆ ಸಂಬಂಧಪಟ್ಟ ಮಂಡ್ಯ ಜಿಲ್ಲೆಯ ಅಧಿಕಾರಿಗಳು ಕೂಡಲೇ ಸೂಕ್ತ ಕ್ರಮದೊಂದಿಗೆ ಭದ್ರತೆ ಒದಗಿಸಲು ಮುಂದಾಗಬೇಕೆಂದು ಈ ಮೂಲಕ ಮನವಿ.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು.

■ ಮಣಿಶಂಕರ್ ಅಯ್ಯರ್‌ಗೆ ಮಾಹಿತಿ ಕೊರತೆ ಇರಬಹುದು

ಮಾನ್ಯರೆ,

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ನೀಡಿದಷ್ಟು ಮನ್ನಣೆ ಟಿಪ್ಪು ಸುಲ್ತಾನ್ ಹಾಗೂ ಮಿರ್ಜಾ ಇಸ್ಮಾಯಿಲ್ ಬೇಗ್ ಅವರಿಗೆ ನೀಡಿಲ್ಲ ಎಂದು ಮೈಸೂರು ಸಾಹಿತ್ಯ ಸಂಭ್ರಮದ 9ನೇ ಆವೃತ್ತಿ ಕಾರ್ಯಕ್ರಮದಲ್ಲಿ ಕೇಂದ್ರದ ಮಾಜಿ ಸಚಿವ ಮಣಿಶಂಕರ್ ಅಯ್ಯರ್ ಹೇಳಿರುವುದು ಸೋಜಿಗವೇ ಸರಿ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ಕನ್ನಡಿಗರಾದ ನಾವು ಕೃಷ್ಣರಾಜ ಭೂಪ, ಮನೆ ಮನೆ ದೀಪ ಹಾಗೂ ಆಡು ಮುಟ್ಟದ ಸೊಪ್ಪಿಲ್ಲ, ಕೃಷ್ಣರಾಜ ಒಡೆಯರ್ ಮಾಡದ ಕೆಲಸವಿಲ್ಲ ಎಂಬ ಮಾತುಗಳನ್ನು ಆಗಿಂದಾಗ್ಗೆ ಕೇಳುತ್ತಾ ಇರುತ್ತೇವೆ. ಮಹಾತ್ಮ ಗಾಂಧೀಜಿ ಅವರು ನಮ್ಮ ದೇಶದ ರಾಜಮಹಾರಾಜರುಗಳ ಅಭಿವೃದ್ಧಿ ಕೆಲಸವನ್ನು ನೋಡಿ ಹಾಗೂ ನಮ್ಮ ರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್, ಊಹೆಗೆ ನಿಲುಕದಷ್ಟು ಮಾಡಿದ ಅಭಿವೃದ್ಧಿ ಕಾರ್ಯಗಳನ್ನು ನೋಡಿ ಅವರನ್ನು ಮಾತ್ರ "ರಾಜರ್ಷಿ" ಎಂದು ಕರೆದಿರುವುದು ಮಣಿಶಂಕರ್ ಅಯ್ಯರ್ ಅವರಿಗೆ ತಿಳಿದಿದೆಯೋ ಇಲ್ಲವೋ ಗೊತ್ತಿಲ್ಲ. ನಾಲ್ವಡಿ ಅವರು ಮಾಡಿದ ಅಭಿವೃದ್ಧಿ ಕೆಲಸಗಳ ಬಗ್ಗೆ ಬಹುಶಃ ಮಣಿಶಂಕರ್ ಅಯ್ಯರ್ ಅವರಿಗೆ ಮಾಹಿತಿ ಕೊರತೆ ಇರಬಹುದು. ಟಿಪ್ಪುಸುಲ್ತಾನ್ ಹಾಗೂ ಮಿರ್ಜಾ ಇಸ್ಮಾಯಿಲ್ ಅವರ ಕೊಡುಗೆಯನ್ನು ಕನ್ನಡಿಗರು ಇಂದಿಗೂ ಸ್ಮರಿಸಿಕೊಳ್ಳುತ್ತೇವೆ. ಕನ್ನಡಿಗರಾದ ನಾವು ಪ್ರತಿಯೊಬ್ಬರಿಗೂ ಅವರ ಕೆಲಸ, ಕಾರ್ಯ, ದಕ್ಷತೆ ಮತ್ತು ಅಭಿವೃದ್ಧಿಯನ್ನು ನೋಡಿ ಅವುಗಳಿಗೆ ತಕ್ಕಂತೆ ಮನ್ನಣೆ ನೀಡುತ್ತೇವೆ ಎಂದರೆ ಅತಿಶಯೋಕ್ತಿಯಲ್ಲ.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

■ ಹೃದಯಾಘಾತವಾದಾಗ ಪ್ರಥಮ ಚಿಕಿತ್ಸೆ ಬಗ್ಗೆ ಅರಿವು ಅಗತ್ಯ

ಮಾನ್ಯರೆ,

ಹೃದಯಾಘಾತದಿಂದ ಅನೇಕರು ಸಾವನ್ನಪ್ಪಿರುವ ಹಿನ್ನೆಲೆಯಲ್ಲಿ ಎಲ್ಲೆಡೆ ಹೃದಯದ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ. ಶಾಲೆಗಳಲ್ಲಿ ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳಲ್ಲಿ ವರ್ಷಕ್ಕೊಮ್ಮೆ ತಪಾಸಣೆ ಯೋಜನೆ ಕ್ರಮ ಸರಿಯಾಗಿದೆ. ಆದರೆ ಆಟೋ, ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಬಸ್ ಚಾಲಕರು ಹಾಗೂ ಭಾರಿ ವಾಹನಗಳ ಚಾಲಕರು, ವಿಮಾನ ಹಾಗೂ ರೈಲು ಪೈಲಟ್‌ಗಳ ತಪಾಸಣೆ ಆಗಾಗ ಮಾಡಿಸಬೇಕು. ಏಕೆಂದರೆ ಇವರ ಕೈಯ್ಯಲ್ಲಿ ನೂರಾರು ಜನರ ಜೀವವಿರುತ್ತದೆ. ಇವರು ಆರೋಗ್ಯದಿಂದಿದ್ದರೆ ನಮ್ಮೆಲ್ಲರ ಪ್ರಯಾಣ ಸುಖವಾಗಿರುತ್ತದೆ. ದೂರದರ್ಶನದಲ್ಲಿ ಹೃದಯಾಘಾತದ ಬಗ್ಗೆ ಕಾರಣ ತಿಳಿಸಿದರೆ ಎಲ್ಲರನ್ನೂ ಜಾಗೃತಿಗೊಳಿಸಲು ಅನುಕೂಲವಾಗುತ್ತದೆ. ಆದರೆ ಹೃದಯಾಘಾತವಾದಾಗ ಪ್ರಥಮ ಚಿಕಿತ್ಸೆಯನ್ನು ಹೇಗೆ ನೀಡಬೇಕೆಂದು ತಿಳಿಸುವುದಿಲ್ಲ. ಇದನ್ನು ಸೂಕ್ತ ಸಾಮಾಜಿಕ ವೇದಿಕೆಯಲ್ಲಿ ತಿಳಿಸಿದರೆ ಅಗತ್ಯವಿರುವವರಿಗೆ ಸಹಾಯ ಮಾಡಲು ಸಾರ್ವಜನಿಕರಿಗೆ ಅನುಕೂಲವಾಗುತ್ತದೆ. ಪ್ರಥಮ ಚಿಕಿತ್ಸೆಯನ್ನು ಹೇಗೆ ನೀಡಬೇಕೆಂದು ತಿಳಿಸುವುದು ಒಳ್ಳೆಯದು. ಹಲವು ಜೀವಗಳನ್ನು ರಕ್ಷಿಸಿದಂತಾಗುತ್ತದೆ.

–ಎಂ. ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ಮನ್ನಣೆಯ ದಾಹ ನಮಗೆ ಬೇಡ

ಎಲ್ಲಾ ಜೀವಿಗಳಿಗೆ ಸಹಜವಾದ ಹಸಿವು, ಬಾಯಾರಿಕೆಗಳು ತೀರಿದ ಮೇಲೆ, ಶಾರೀರವಾದ ಕಾಮಕ್ರೋಧಗಳು ತಣಿದ ಮೇಲೆ, ಹಣದ, ಅಧಿಕಾರದ ಬಯಕೆಯೂ ಈಡೇರಿದ ಮೇಲೆ ಮನುಷ್ಯರನ್ನು ಕಾಡುವ ಪಿಶಾಚಿ ಎಂದರೆ ಮನ್ನಣೆಯ ದಾಹ, ಕೀರ್ತಿ ಕಾಮನೆ. ಇದು ಮನುಷ್ಯರನ್ನು ಬಿಟ್ಟು ಬೇರೆ ಯಾವ ಪ್ರಾಣಿಯಲ್ಲೂ ಇದ್ದಂತಿಲ್ಲ. ಮನುಷ್ಯರಿಗೆ ಮಾತ್ರ ಕೀರ್ತಿವಂತರಾಗುವ ಗೀಳು ಅಂಟಿಕೊಂಡಿದೆ. ಹಿಂದಿನ ರಾಜರು ಕೀರ್ತಿ ಸ್ತಂಭಗಳನ್ನೂ ನೆಟ್ಟರು. ತಮ್ಮ ಕೀರ್ತಿ ಶಾಶ್ವತವಾಗಿ ಹರಡಬೇಕೆಂದು ಕವಿಗಳನ್ನು ಸಾಕಿ ಅವರಿಂದ ತಮ್ಮ ಬಗೆಗೆ ಕಾವ್ಯಗಳನ್ನು ಬರೆಸಿ ಶಾಸನಗಳಲ್ಲಿ ಕೆತ್ತಿಸಿದರು. ಕಾವ್ಯಗಳನ್ನು ಬರೆದ ಕವಿಗಳೂ ಕೀರ್ತಿಯೇ ಅದರ ಪರಮ ಪ್ರಯೋಜನ ಎಂದು ಭಾವಿಸುತ್ತಿದ್ದರು. ಆಧುನಿಕ ಕಾಲದಲ್ಲಂತೂ ಜನರು ಪ್ರಶಸ್ತಿಗಳಿಗಾಗಿ ಹಂಬಲಿಸುವುದು, ಅದಕ್ಕಾಗಿ ಶಿಫಾರಸ್ಸುಗಳನ್ನು ತೆಗೆದುಕೊಂಡು ಹೋಗಿ ಬೇಡುವುದು, ಕಾಡುವುದು ಮಾಮೂಲಾಗಿದೆ. ಏನಾದರೂ ಮಾಡಿ ದೊಡ್ಡ ಸಭೆಯಲ್ಲಿ ಹಾರ ಹಾಕಿಸಿಕೊಳ್ಳಬೇಕು. ಶ್ರೇಷ್ಠ ಭಾಷಣಕಾರರ ಕೈಯಲ್ಲಿ ಶಾಲು ಹಾಕಿಸಿಕೊಂಡು ಹೊಗಳಿಸಿಕೊಳ್ಳಬೇಕು, ಮರುದಿನ ಪತ್ರಿಕೆಗಳಲ್ಲಿ ನನ್ನ ಭಾವಚಿತ್ರ ದೊಡ್ಡದಾಗಿ ವರ್ಣಮಯವಾಗಿ ಮುದ್ರಿತವಾಗಬೇಕು – ಎಂಬ ಆಶೆಯಿಂದ ಜನರು ಏನೇನನ್ನೋ ಮಾಡುತ್ತಾರೆ. ಆದ್ದರಿಂದಲೇ ಡಿವಿಜಿ ಹೇಳಿದ್ದು –

ಮನ್ನಣೆಯ ದಾಹವದು ಎಲ್ಲಕಿಂ ತೀಕ್ಷ್ಣತಮ
ತಿನ್ನುವುದದಾತ್ಮವನೆ ಮಂಕುತಿಮ್ಮ

ಇದರ ಬಗೆಗೆ ಮುದ್ದುರಾಮನ ಬದುಕಿನಲ್ಲಿ ಕವಿ ಕೆ.ಸಿ. ಶಿವಪ್ಪನವರು ಹೇಳಿರುವ ಕೆಲವು ನುಡಿಗಳನ್ನು ನೋಡೋಣ :

ಪೋಗದಿರುವ ಬೆನ್ನಟ್ಟಿ ಕೀರ್ತಿ ಕಾಮನೆ ಹಿಂದೆ
ಹಿಂಡಿ ಅದು ಚೇತನವ ಗುಜ್ಜು ಮಾಡುವುದೊ!
ಮದಿರೆ ಪಾನಕುಮಿಗಿಲು ಇದರ ಮತ್ತಿನ ಭೋಗ
ಕ್ಷೋಭೆಯಾಗರ ಕೀರ್ತಿ ಮುದ್ದುರಾಮ॥

ಕೀರ್ತಿ ತಾನಾಗಿ ಬಂದರೆ ಒಳ್ಳೆಯದೇ. ಆದರೆ ಕೀರ್ತಿಯ ಬೆನ್ನಟ್ಟಿ ಮನುಷ್ಯನು ಓಡಬಾರದು. ಸ್ವಯಂ ಬಂದ ಪ್ರಶಸ್ತಿಯನ್ನು ಸ್ವೀಕರಿಸುವುದು ಬೇರೆ. ಅದಕ್ಕಾಗಿ ಪ್ರಶಸ್ತಿ ಕೊಡುವವರ ಮನೆಯ ಬಾಗಿಲನ್ನು ತಟ್ಟುವುದು ಬೇರೆ. ಯಾರೋ ಸಮಾರಂಭವನ್ನೇರ್ಪಡಿಸಿ ಗೌರವಿಸುವುದು ಬೇರೆ, ಸಮಾರಂಭವನ್ನು ಮಾಡಿ ನನ್ನನ್ನು ಗೌರವಿಸಿ ಎಂದು ದುಂಬಾಲು ಬೀಳುವುದು ಬೇರೆ. ಹಾಗೆ ಪ್ರಸಿದ್ಧಿಯನ್ನು ಅರಸಿ ಹೋಗದಿರು ಎನ್ನುವುದು ಕವಿಯ ಎಚ್ಚರಿಕೆಯ ಮಾತು. ಏಕೆಂದರೆ ಹಾಗೆ ಕೀರ್ತಿಯನ್ನೋ ಪ್ರಶಸ್ತಿಯನ್ನೋ ಗಳಿಸುವುದು ಚೈತನ್ಯವನ್ನೇ ಹಿಂಡಿ ನಜ್ಜು ಗುಜ್ಜು ಮಾಡುತ್ತದೆ. ಈ ಕೀರ್ತಿಯು ತರುವ ಮತ್ತು ಹೆಂಡ ಸಾರಾಯಿ ಕುಡಿದಾಗ ಏರುವ ಮತ್ತಿಗಿಂತ ಮಿಗಿಲು. ತಾನು ಸಾಮಾನ್ಯ ಮನುಷ್ಯನಲ್ಲ, ನನ್ನ ಸಾಧನೆ ಸಾಧಾರಣವಾದುದಲ್ಲ ಎಂಬ ಭ್ರಾಂತಿಗೆ ಕೀರ್ತಿ ಇಂಬು ಕೊಡುತ್ತದೆ. ಇದು ಸಿಕ್ಕಿತು. ಆದರೆ ನಾನು ಇದಕ್ಕಿಂತ ದೊಡ್ಡ ಪ್ರಶಸ್ತಿಗಳಿಗೂ ಅರ್ಹ ಎಂಬ ಅಹಂಕಾರಕ್ಕೆ ಮಾನವನು ಪಕ್ಕಾಗುತ್ತಾನೆ.

ಮುಂದಿನ ಪದ್ಯದಲ್ಲಿರುವ ಎಚ್ಚರಿಕೆ ಇನ್ನೂ ಹೆಚ್ಚು ಅರ್ಥಗರ್ಭಿತವಾಗಿದೆ.

ಕೀರ್ತಿ ಹುಲಿ ಬೆನ್ನೇರಿ ಯಾರು ಸಂಚರಿಸುವರೊ
ಇಳಿಯಲಾರರು ಅವರು. ಆ ನಿಟ್ಟಿನಿಂದ
ಕೆಳಗಿಳಿದರೋ ಒಮ್ಮೆ ಹುಲಿಯ ಬಾಯಿಗೆ ತುತ್ತು
ಕುತ್ತು ಮನ್ನಣೆ ದಾಹ ಮುದ್ದುರಾಮ.

ಕೀರ್ತಿ ಎಂಬುದೊಂದು ಹುಲಿ. ಅದನ್ನೇರಿ ಸವಾರಿ ಮಾಡಲು ಹೊರಟವನು ಇಳಿಯುವಂತಿಲ್ಲ. ಒಂದು ಪ್ರಶಸ್ತಿ ಬಂದಿತೆಂದು ಕೊಳ್ಳೋಣ. ಅಭಿನಂದಿಸಲು ಬಂದ ಬಂಧು ಮಿತ್ರರು 'ನಿಮಗೆ ಈ ಪ್ರಶಸ್ತಿ ಬಂದಿದ್ದು ಸಂತೋಷ. ಆದರೆ ಇದೇನು ಮಹಾ! ನಮ್ಮ ಬೀದಿಯಲ್ಲೊಬ್ಬರಿಗೆ ರಾಷ್ಟ್ರ ಪ್ರಶಸ್ತಿ ಬಂದಿದೆ. ನಿಮಗೆ ಅದು ಬರ ಬೇಕಾಗಿತ್ತು.



ಅದಕ್ಕೆ ಟ್ರೈ ಮಾಡಿ ಎನ್ನುತ್ತಾರೆ. ಹೀಗೆ ಇದು ಮುಂದುವರಿಯುವುದರಿಂದ ಎಂದೂ ತೃಪ್ತಿಯೇ ಇಲ್ಲವಾಗುತ್ತದೆ. ಕೆಲವರಂತೂ 'ನಿಮಗೆ ಎಲ್ಲ ಈ ಚಿಕ್ಕ ಚಿಕ್ಕ ಪ್ರಶಸ್ತಿಗಳೇ, ಪಾಪ' ಎಂದು ಸಹಾನುಭೂತಿಯನ್ನು ವ್ಯಕ್ತಪಡಿಸುತ್ತಾರೆ. ಹೀಗೆ ಕೀರ್ತಿ ಹುಲಿಯ ಸವಾರಿ ಮಾಡುವವರು ಅದರ ಬಾಯಿಗೆ ತುತ್ತಾದಂತೆ. ಅದಕ್ಕೇ ಕವಿ ಹೇಳಿರುವುದು–ಕುತ್ತು ಮನ್ನಣೆದಾಹ–ಎಂದು

ಅವರ ಇನ್ನೊಂದು ಪದ್ಯ ಮನಮುಟ್ಟುವಂತಿದೆ–

ವೇದಿಕೆಯ ಭಾಷಣದ, ಪತ್ರಿಕಾ ಚಿತ್ರಗಳ
ಗೀಳು ಅಂಟಿದರೆದೆಗೆ ಕೊನೆ ಎನ್ನುವುದೆಲ್ಲಿ?
ಕಡಲ ಜನ ಕುಡಿದಂತೆ ನೀಗದೋ ಈ ದಾಹ
ಕಷ್ಟ ಮನ್ನಣೆದಾಹ ಮುದ್ದುರಾಮ॥

ವೇದಿಕೆಯ ಮೇಲೆ ಕಾಣಿಸಿಕೊಳ್ಳಬೇಕು, ಭಾಷಣ ಮಾಡಿ ಚಪ್ಪಾಳೆ ಹೊಡೆಸಿಕೊಳ್ಳಬೇಕು ಎನ್ನುವುದು ಕೆಲವರ ಗೀಳು. ಪ್ರತಿದಿನ ಒಂದು ಸವಾಲಾದರೂ ವೇದಿಕೆಯನ್ನು ಏರಿ ಕುಳಿತುಕೊಳ್ಳದಿದ್ದರೆ, ಭಾಷಣ ಮಾಡದಿದ್ದರೆ ನನಗೆ ಹುಚ್ಚು ಹಿಡಿದಂತಾಗುತ್ತದೆ ಎಂದು ಹಲುಬುವವರಿದ್ದಾರೆ. ನಾನು ಒಂದೇ ದಿನ ಮೂರು ಸಮಾರಂಭಗಳಲ್ಲಿ ಭಾಷಣ ಮಾಡಿದೆ ಎಂದು ಜಂಬ ಕೊಚ್ಚುವವರಿದ್ದಾರೆ. ಅಬ್ಬ, ಅವರಿಗೆ ಅಷ್ಟು ಡಿಮ್ಯಾಂಡ್ ಇದೆ ಎಂದು ಅವರನ್ನು ಹೊಗಳುವ ವಂದಿಮಾಗಧರೂ ಇದ್ದಾರೆ. ಈ ಗೀಳಿಗೆ ಕೊನೆಯಿಲ್ಲ. ಉಪ್ಪು ನೀರನ್ನು ಕುಡಿದಷ್ಟೂ ಬಾಯಾರಿಕೆ ಹೆಚ್ಚುವಂತೆ, ಎಷ್ಟು ಭಾಷಣ ಮಾಡಿದರೂ ಗೀಳು ತಗ್ಗುವುದಿಲ್ಲ. ದಾಹ ನೀಗುವುದಿಲ್ಲ. ಇದೊಂದು ದೊಡ್ಡ ಕಷ್ಟವೇ ಆಗಿ ಬಿಡುತ್ತದೆ.

ಮುದ್ದುರಾಮನ ಇನ್ನೊಂದು ನುಡಿ–

ಮನ್ನಣೆಗೆ ತುಡಿವ ಮನ ಪಂಜರದ ಗಿಳಿಯಂತೆ
ರಾತ್ರಿ ಸತ್ತಿಗೆಯಂತೆ ಈ ಕೀರ್ತಿ ವಾರ್ತೆ!
ಎಂದು ಅದು ಹದಗೆಟ್ಟು ಗಾಳಿಸೊಡರಾದೀತೊ
ಹೊನ್ನ ಶೂಲವೂ ಕೀರ್ತಿ ಮುದ್ದುರಾಮ ॥

ಮನ್ನಣೆಗಾಗಿ ಹಾತೊರೆಯುವ ಮನಸ್ಸು ಪಂಜರದ ಗಿಳಿಯಂತೆ ಸ್ವಾತಂತ್ರ್ಯವಿಲ್ಲದೆ ಬೇರೆಯವರು ಹೇಳಿದಂತೆ ಕುಣಿಯಬೇಕಾಗುತ್ತದೆ. ಯಾರು ಆಹ್ವಾನಿಸಿದ್ದಾರೋ ಅವರು ಸಾಮಾನ್ಯರಾದರೂ ಅವರನ್ನು ಅಸಾಮಾನ್ಯರೆಂದು ಹೊಗಳಬೇಕು. ದಾಕ್ಷಿಣ್ಯಕ್ಕೆ ಸಿಕ್ಕಿಕೊಂಡವರು ಸತ್ಯವನ್ನು ಹೇಳುವಂತಿಲ್ಲ.

ಈ ಕೀರ್ತಿ ವಾರ್ತೆ ರಾತ್ರಿ ಸತ್ತಿಗೆಯಂತೆ. ಸತ್ತಿಗೆ ಎಂದರೆ ಛತ್ರಿ ರಾತ್ರಿ ಯಾವ ಬಿಸಿಲೂ ಇಲ್ಲದಿದ್ದರೂ, ಕೇವಲ ಗೌರವಕ್ಕಾಗಿ, ಪ್ರತಿಷ್ಠೆಗಾಗಿ ಕೊಡೆಯನ್ನು ಹಿಡಿದುಕೊಂಡಂತೆ. ದೇವಸ್ಥಾನಗಳಲ್ಲಿ ಅಲಂಕಾರದ ಸತ್ತಿಗೆಗಳನ್ನು ಹಿಡಿದುಕೊಂಡಿರುತ್ತಾರೆ. ಅವು ಮಳೆಯನ್ನು ತಡೆಯಲು ಅಥವಾ ಬಿಸಿಲನ್ನು ನಿವಾರಿಸಲು ಅಲ್ಲ. ಅದೇ ರೀತಿ ಕೀರ್ತಿಯ ವಾರ್ತೆಯೂ ಕೇವಲ ಗೌರವಕ್ಕಾಗಿ ಹೇಳುವ ಮಾತು. ಅದನ್ನು ಮುಖಬೆಲೆಯಲ್ಲಿ ಯಾರೂ ನಂಬುವುದಿಲ್ಲ. ಈ ಕೀರ್ತಿ ಶಾಶ್ವತವೂ ಅಲ್ಲ. ಗಾಳಿಗೊಡ್ಡಿದ ಸೊಡರಿನಂತೆ ಅದು ಯಾವಾಗ ಬೇಕಾದರೂ ಆರಿ ಹೋಗಬಹುದು. ಆದ್ದರಿಂದಲೇ ಇದನ್ನು ನಿತ್ಯವೆಂದು ನಂಬಬಾರದು. ಇದು ಹೊನ್ನ ಶೂಲ, ಹೊನ್ನಿನಂತೆ ಆಕರ್ಷಕವಾದರೂ ಶೂಲದಂತೆ ಇರಿದು ಕೊಲ್ಲುತ್ತದೆ. ಹೊನ್ನ ಶೂಲ ಎಂಬ ಪದವನ್ನು ಬಸವಣ್ಣನವರು ಹನ್ನೆರಡನೆಯ ಶತಮಾನದಲ್ಲಿ ಬಳಸಿದ್ದರು.

ಸಮ್ಮಾನ ಸಮಾರಂಭಗಳಲ್ಲಿ ಸಮ್ಮಾನಿತರನ್ನು ಅತಿಶಯೋಕ್ತಿ ಉತ್ಪ್ರೇಕ್ಷೆಗಳನ್ನು ಉಪಯೋಗಿಸಿ ಹೊಗಳುತ್ತಾರೆ. ಅದನ್ನು ಸತ್ಯವೆಂದು ನಂಬಿ ಸಮ್ಮಾನಿತರು ತಾವು ನಿಜವಾಗಿ ಅಷ್ಟು ದೊಡ್ಡವರೆಂದು ಭ್ರಮಿಸಬಾರದು. ಇದನ್ನು ಮುದ್ದುರಾಮ ಹೀಗೆ ಹೇಳಿದ್ದಾನೆ–

ಯಾರೆ ಇಂದ್ರನೆನ್ನಲಿ, ಚಂದ್ರನೆನ್ನಲಿ ನಿನ್ನ
ಹಾರಾಡದಿರು ಉಬ್ಬಿ ಆಕಾಶದಲ್ಲಿ,
ಸಿಲುಕದಿರು ಹೊಗಳಿಕೆಯ ಸುಳಿಯಲ್ಲಿ ಪೆಚ್ಚಾಗಿ
ಕಾಪಾಡಿಕೋ ನಿನ್ನ ಮುದ್ದುರಾಮ॥


ಇಂದ್ರ, ಚಂದ್ರ, ಉಪೇಂದ್ರ ಎಂದೆಲ್ಲ ಹೊಗಳುವುದು ಹಿಂದಿನಿಂದ ನಡೆದು ಬಂದಿದೆ. ಎಂದೂ ಯುದ್ಧಭೂಮಿಯಲ್ಲಿ ಕತ್ತಿಯನ್ನು ಹಿಡಿಯದ ದೊರೆಯನ್ನು ಶೂರ, ವೀರ, ಧೀರ ಎಂದು ಕವಿಗಳು ವರ್ಣಿಸುತ್ತಿದ್ದರು. ಕುರೂಪಿಯನ್ನೂ ಮನ್ಮಥನೆಂದು ಬಣ್ಣಿಸುತ್ತಿದ್ದರು. ಈಗಲೂ ಆ ಪ್ರವೃತ್ತಿ ಮುಂದುವರಿದಿದೆ. ಹಾಗೆ ಯಾರೋ ತಮ್ಮ ಸ್ವಾರ್ಥದಿಂದ ನಿಮ್ಮನ್ನು ಹೊಗಳಿದರೆ ನೀವು ಬಲೂನಿನಂತೆ ಉಬ್ಬಿ ಆಕಾಶದಲ್ಲಿ ಹಾರಾಡಬೇಕಾಗಿಲ್ಲ. ಹೊಗಳಿಕೆ ಎಂಬುದು ನೀರಿನ ಸುಳಿ ಇದ್ದಂತೆ. ಅದರಲ್ಲಿ ಸಿಕ್ಕಿಕೊಂಡರೆ ಒಳಗೆ ಎಳೆದುಕೊಂಡು ಕೊಲ್ಲುತ್ತದೆ. ಪೆಚ್ಚಾಗಿದ್ದವರು ಸಿಕ್ಕಿ ಹಾಕಿಕೊಳ್ಳುತ್ತಾರೆ. ಹಾಗೆ ಸಿಕ್ಕಿ ಹಾಕಿಕೊಳ್ಳದೆ ನಿನ್ನನ್ನು ನೀನು ಕಾಪಾಡಿಕೋ ಎಂದು ಕವಿ ಎಚ್ಚರಿಸುತ್ತಿದ್ದಾರೆ. ಹೊಗಳಿ ಹೊಗಳಿ ಹೊನ್ನ ಶೂಲಕ್ಕೇರಿಸಿದರಯ್ಯಾ ಎಂಬ ಮಾತು ಇಂದು ಹೊಸ ಅರ್ಥವನ್ನು ಪಡೆದುಕೊಂಡಿದೆ. ಸ್ವಾರ್ಥಿಗಳು ತಮ್ಮ ಕೆಲಸವನ್ನು ಸಾಧಿಸಿಕೊಳ್ಳಲು ಮುಗ್ಧರನ್ನು ಹೊಗಳಿ ಅಪಾಯದಲ್ಲಿ ಸಿಕ್ಕಿಸಿ ತಾವು ತಪ್ಪಿಸಿಕೊಳ್ಳುವುದನ್ನು ಕಾಣುತ್ತೇವೆ. ಅಂತಹವರಿಂದ ನಮ್ಮನ್ನು ಕಾಪಾಡಿಕೊಳ್ಳಬೇಕು. ಹೊಗಳಿಕೆಗೆ ಮರುಳಾಗದಿರುವುದು ಎಷ್ಟು ಮುಖ್ಯವೋ ತೆಗಳಿಕೆಗೆ ತಲೆ ಬಾಗದಿರುವುದೂ ಅಷ್ಟೇ ಮುಖ್ಯ. ಮುದ್ದುರಾಮ ಹೇಳುತ್ತಾನೆ–

ಯಾರೊ ಹೊಗಳಿದರೆಂದು ಉಬ್ಬಿ ತೇಲಾಡದಿರು
ಯಾರೋ ತೆಗಳಿದರೆಂದು ನಿಲ್ಲದಿರು ಕುಗ್ಗಿ
ಇಲ್ಲಿ ಹುಟ್ಟಿದ ಮೇಲೆ ಸ್ತುತಿ ನಿಂದೆ ಸಾಮಾನ್ಯ
ನಗುತ ನೀ ನಡೆ ಮುಂದೆ ಮುದ್ದುರಾಮ.

ಹೊಗಳುವವರಿಗೆ ಹೇಗೆ ಸ್ವಾರ್ಥವಿರುವುದೋ ಹಾಗೆ ತೆಗಳುವವರಿಗೂ ನಾನಾ ಉದ್ದೇಶಗಳಿರುತ್ತವೆ. ಒಬ್ಬನನ್ನು ತುಳಿದು ಮತ್ತೊಬ್ಬನನ್ನು ಮೇಲೆತ್ತಲು ಈ ತಂತ್ರವನ್ನು ಕೆಲವರು ಬಳಸುತ್ತಾರೆ. ಇನ್ನು ಕೆಲವರಿಗೆ ಕೇವಲ ಖಂಡನೆಯಲ್ಲೇ ಸಂತೋಷ. ಅದಕ್ಕಾಗಿ ತೆಗಳುತ್ತಾರೆ, ಹಳಿಯುತ್ತಾರೆ. ಅಷ್ಟು ಮಾತ್ರಕ್ಕೆ ನಾವು ಕುಗ್ಗಬಾರದು, ನಮ್ಮ ಪ್ರಯತ್ನ ನಿಲ್ಲಬಾರದು. ಈ ಪ್ರಪಂಚದಲ್ಲಿ ಹುಟ್ಟಿದ ಮೇಲೆ ಕೆಲವು ಸಲ ಸ್ತುತಿ, ಕೆಲವು ಸಲ ನಿಂದೆ ಇದ್ದದ್ದೇ. ಸ್ತುತಿಯಿಂದ ಹಿಗ್ಗುವುದೂ ಬೇಡ, ನಿಂದೆಯಿಂದ ಕುಗ್ಗುವುದೂ ಬೇಡ. ಬೆಳಕು–ಕತ್ತಲುಗಳಂತೆ. ಇವು ಇದ್ದೇ ಇರುತ್ತವೆ. ಇವುಗಳಿಂದ ವಿಚಲಿತರಾಗಬಾರದು. ನಗುತ್ತಾ ಮುಂದೆ ನಡೆಯಬೇಕು. ತೆಗಳಿಕೆಯಲ್ಲಿ ದೋಷಾರೋಪಣೆಯಲ್ಲಿ ಸತ್ಯ ಇದ್ದರೆ, ತಪ್ಪನ್ನು ತಿದ್ದಿಕೊಳ್ಳಬೇಕು. ತಪ್ಪನ್ನು ತೋರಿಸಿದವರಿಗೆ ಕೃತಜ್ಞರಾಗಿರಬೇಕು. ತೆಗಳಿಕೆಗಿಂತ ಹೊಗಳಿಕೆಯೇ ಹೆಚ್ಚು ಅಪಾಯಕಾರಿ ಎಂಬುದನ್ನು ಮರೆಯಬಾರದು. ಆದ್ದರಿಂದ–

ಸ್ತುತಿಗಾಳಿ ಬೀಸಿದರೆ ಸರಿದತ್ತ ನಡೆ ಮೆಲ್ಲ
ಮನ್ನಣೆಯ ಭಾರದಲ್ಲಿ ಹೂತು ಹೋಗದಿರು.
ನೀ ಕುರುಡನಾಗು ಜನ ಹೂಮಳೆಯಗರೆದಂದು
ಕಿವುಡಾಗು ಹೊಗಳಿಕೆಗೆ ಮುದ್ದುರಾಮ॥

ಎಲ್ಲಾದರೂ ಹೊಗಳಿಕೆಯ ಗಾಳಿ ಬೀಸಿದರೆ ಸದ್ದಿಲ್ಲದೆ ಅಲ್ಲಿಂದ ದೂರ ಸರಿಯುವುದು ಉತ್ತಮ ಎಂದೂ ಮನ್ನಣೆಯ ಹಾರದ ಭಾರದಲ್ಲಿ ನಾವು ಹೂತು ಹೋಗಬಾರದು. ಹೊಗಳಿಕೆಯ ಹೂಮಳೆಯನ್ನು ಸುರಿಸಿದಾಗ ಕುರುಡನಂತೆ ಅದನ್ನು ನೋಡಿಯೂ ನೋಡದಂತೆ ಇರಬೇಕು. ಹೊಗಳಿಕೆಗೆ ನಾವು ಕಿವುಡಾಗಿರುವುದೇ ಲೇಸು. ಕೆ.ಸಿ.ಶಿವಪ್ಪನವರು ಇಲ್ಲಿ ಹೇಳಿರುವ ಮಾತುಗಳೆಲ್ಲ ಇಂದಿನ ಪ್ರಪಂಚದಲ್ಲಿ ಅತ್ಯಂತ ಪ್ರಸ್ತುತ.



ಗುರು ಸೇವೆ ದಾರಿ ಗುರಿ ಸಾಧನೆಗೆ ಹೆದ್ದಾರಿ



ಬನ್ನೂರು ಕೆ.ರಾಜು
ಸಾಹಿತಿ, ಪತ್ರಕರ್ತ
ಮೊ: 94815 33167

ನಾಳೆ (ಗುರುವಾರ) ಗುರುಪೂರ್ಣಿಮೆ. ತನ್ನಿಮಿತ್ತ ಈ ಲೇಖನ.

ಗುರುಪೂಜೆಯ ಹಬ್ಬವೇ 'ಗುರುಪೂರ್ಣಿಮೆ'. ವ್ಯಾಸ ಮಹರ್ಷಿಗಳ ಜನ್ಮೋತ್ಸವದ ಹೆಸರಿನಲ್ಲಿ ಇದು ನಡೆಯುವುದರಿಂದ ಇದನ್ನು 'ವ್ಯಾಸ ಪೂರ್ಣಿಮೆ' ಎಂದೂ ಕರೆಯಲಾಗುವುದು. ಗುರು ಇಲ್ಲದೆ ಗುರಿ ಸಾಧನೆ ಅಷ್ಟು ಸುಲಭವಲ್ಲ. ಹಾಗಾಗಿ 'ಗುರು ಏನ್ ಮಹಾ, ಎನ್ನದೆ 'ಗುರುವೇ ನಮಃ' ಎಂದು ಗುರು ಪರಂಪರೆಗಿಂದು ನಮಿಸಿ, ಈ ದಿನವಾದರೂ ಗುರುವಿನ ಮಹತ್ವ ಅರಿತು ಮುನ್ನಡೆಯೋಣ.

ಭಾರತೀಯ ಸಂಸ್ಕೃತಿಯಲ್ಲಿ ಗುರು–ಶಿಷ್ಯರ ಸಂಬಂಧ ಮಹೋನ್ನತವಾದುದು. ಅದರ ಗಾಢತೆ ಊಹಾತೀತ! ಗುರು–ಶಿಷ್ಯ ಪ್ರೀತಿಯ ಔನ್ನತ್ಯವನ್ನು, ಸಾಧನೆಯ ಉತ್ತುಂಗವನ್ನು, ಸಾರ್ಥಕತೆಯ ಬೆಳಕನ್ನು ಜಗತ್ತಿಗೆ ಚೆಲ್ಲಿ ಹೋಗಿರುವ ಅನೇಕ ಶ್ರೇಷ್ಠಾತಿಶ್ರೇಷ್ಠ ಗುರು–ಶಿಷ್ಯ ಪರಂಪರೆಯೇ ನಮ್ಮ ಸಂಸ್ಕೃತಿಯ ಬೇರಿನಲ್ಲಿದೆ.

ಪರಮಹಂಸ–ವಿವೇಕರ ಪವಿತ್ರ ಗುರು–ಶಿಷ್ಯ ಬಾಂಧವ್ಯದ ಬೆಳಕೊಂದೇ ಸಾಕು ಇವತ್ತಿಗೂ ಭಾರತವನ್ನು ಜ್ಞಾನ ಮಾರ್ಗದಲ್ಲಿ ಬೆಳಗುತ್ತಿದೆ. ತಂದೆ–ತಾಯಿಗಿಂತಲೂ ಗುರುವಿನ ಸ್ಥಾನ ಹಿರಿದು. ಅದನ್ನೇ ಸರ್ವಜ್ಞ 'ತಂದೆಗೂ–ಗುರುವಿಗೂ ಒಂದು ಅಂತರ ಉಂಟು, ತಂದೆ ತೋರುವನು ಸದ್ಗುರುವ, ಗುರುರಾಯ ಬಂಧನವ ಕಳೆವ ಸರ್ವಜ್ಞ' ಎಂದು ಹೇಳಿರುವ.

ತಂದೆ–ತಾಯಿ, ಬಂಧು–ಬಳಗ... ಹೀಗೆ ಎಲ್ಲ ಸಂಬಂಧಕ್ಕಿಂತಲೂ ಮಿಗಿಲಾದ ಗುರು–ಶಿಷ್ಯ ಸಂಬಂಧಕ್ಕೆ ಸಮ ಜಗದಲ್ಲಿ ಮತ್ತೊಂದಿಲ್ಲ. ಗುರು ಇದ್ದರೇನೇ ಸುಂದರ ಬಾಳು–ಭವಿಷ್ಯ. ಹಿಂದೆ ಗುರು, ಮುಂದೆ ಗುರಿ ಇದ್ದಾಗ ಮಾತ್ರ ಸಾಧನೆ ಸಾಧ್ಯ ಇಲ್ಲದಿರೆ ಬರೀ ಶೂನ್ಯ. ದೇವರಿಗಿಂತ ಗುರು, ಗುರುವಿಗಿಂತ ಗುರುಕೃಪೆ ದೊಡ್ಡದು. ಶ್ರೀರಾಮ, ಶ್ರೀ ಕೃಷ್ಣರೂ ವಶಿಷ್ಠ, ವಿಶ್ವಾಮಿತ್ರ, ಸಾಂದೀಪನಿಗಳಂಥ ಗುರುಗಳ ಸೇವೆ ಮಾಡಿ ಫಲ ಪಡೆದವರು. 'ಗುರುದೇವೋಭವ' ಎಂದು ಗುರುವನ್ನು ದೈವ ಸ್ವರೂಪದಲ್ಲಿಟ್ಟು ನಮ್ಮ ಸಂಸ್ಕೃತಿಯಲ್ಲಿ ಕರೆಯಲಾಗುತ್ತಿದೆ. ಭಗವಂತ ಅಂಥ ನಾವು ಹೆಸರಿಸಿ ಪೂಜಿಸುವ ವಿಶ್ವಚೈತನ್ಯ ಸಾಮಾನ್ಯ ಮನಸ್ಸಿಗೆ ಗೂಢ, ಅಗೋಚರ. ಆದರೆ ಗುರುದೇವ ಕಣ್ಣಿಗೆ ಕಾಣುವ ಸಾಕ್ಷಾತ್ ಪರಬ್ರಹ್ಮದೇವ. ಆದ್ದರಿಂದಲೇ ಆಚಾರ್ಯ ಓಶೋ ಗುರುವನ್ನು 'ಭಗವಂತನ ವಿಳಾಸ' ಎಂದಿದ್ದಾರೆ.

ಗುರುರ್ಬ್ರಹ್ಮಾ ಗುರುರ್ವಿಷ್ಣು
ಗುರುದೇವೋ ಮಹೇಶ್ವರ
ಗುರುಸಾಕ್ಷಾತ್ ಪರಬ್ರಹ್ಮಾ
ತಸ್ಮೈಶ್ರೀ ಗುರುವೇ ನಮಃ

ಗುರುವಿನ ಮಹತ್ವವೇ ಅಂಥಾದ್ದು! ಓರ್ವ ಶ್ರೇಷ್ಠಗುರು ಸಹಸ್ರಾರು ಶ್ರೇಷ್ಠ ಶಿಷ್ಯರನ್ನು ಸೃಷ್ಟಿಸಬಲ್ಲ. ಬ್ರಹ್ಮಜ್ಞಾನವನ್ನೇ ನೀಡಬಲ್ಲ. ಗುರುದೇವ ಮನಸ್ಸು ಮಾಡಿದಲ್ಲಿ ಏನು ಬೇಕಾದರೂ ಮಾಡಬಲ್ಲ. ಅಗಾಧ ಅರಿವಿನ ಹಣತೆಯನ್ನು ಪ್ರಜ್ವಲವಾಗಿ ಬೆಳಗಬಲ್ಲ. ಅದಕ್ಕೇನೇ ಗುರುವನ್ನು ಸೃಷ್ಟಿ ಕರ್ತನಾದ ಬ್ರಹ್ಮನಿಗೆ ಹೋಲಿಸಿ 'ಗುರುಬ್ರಹ್ಮಾ' ಎಂದು ನಮಿಸುವುದು.

ಸಾಮೃತೈಃ ಪಾಣಿಘ್ನಂತೆ ಗುರುವೋನ ವಿಷೋಕ್ಷಿತೈಃ। ಲಾಲನಾಶ್ರಯಿಣೋ ದೋಷಾಸ್ತಾಡನಾಶ್ರಯಿಣೋ ಗುಣಾಃ॥– ಅಂದರೆ ಗುರುಗಳು ಕೈಗೆ ಅಮೃತವನ್ನು ಹಚ್ಚಿಕೊಂಡು ಶಿಷ್ಯರನ್ನು ಹೊಡೆಯುತ್ತಾರೆ. ವಿಷವನ್ನು ಹಚ್ಚಿಕೊಂಡಲ್ಲ. ಮಕ್ಕಳನ್ನು ಮುದ್ದಿಸುವುದರಿಂದ ದೋಷಗಳು ಚಿಗುರಿಕೊಳ್ಳುತ್ತವೆ. ದಂಡಿಸುವುದರಿಂದ ಗುಣಗಳು ಕಾಣಿಸಿಕೊಳ್ಳುತ್ತವೆ. ದುರ್ಗುಣಗಳಿಂದ ದೂರವಿರಿಸಿ ಸದ್ಗುಣ ಸಂಪನ್ನರಾಗುವತ್ತ ಶಿಷ್ಯೋತ್ತಮರನ್ನು ತಮ್ಮ ಅಮೃತಕರಗಳಿಂದ ಗುರು ಸಂರಕ್ಷಿಸುವ. ಹಾಗಾಗಿ ಗುರುವನ್ನು ಸಂರಕ್ಷಕನಾದ ವಿಷ್ಣುವಿಗೆ ಹೋಲಿಸಿ 'ಗುರುರ್ವಿಷ್ಣು' ಎಂದು ಪೂಜಿಸುತ್ತೇವೆ.

ಗುರು ರುದ್ರನಂತೆ ಪ್ರಳಯಕಾರಿಯೂ ಹೌದು. ಲಯಕಾರಿಯೂ ನಿಜ. 'ಶಿವೇತರಕ್ಷತಯೇ' ಎಂಬಂತೆ, ಯಾವುದು ಮಂಗಳಕರವಲ್ಲದ್ದೋ ಅದನ್ನು ಗುರುವಾದವನು ನಾಶಗೊಳಿಸುತ್ತಾನೆ. ತನ್ಮೂಲಕ ಶಿಷ್ಯರ ಬದುಕನ್ನು ಮಂಗಳಮಯ ಮಾಡುತ್ತಾನೆ. ಮಾನವನಲ್ಲಿರುವ ಕೆಡಕನ್ನು ದಹಿಸಿ ಒಳಿತನ್ನು ಧಾರೆಯೆರೆದು ಉತ್ತಮೋತ್ತಮ ಶಿಷ್ಯ ಪರಂಪರೆಯನ್ನು ಬೆಳೆಸುವಲ್ಲಿ ಗುರುವೇ ದೀಪಧಾರಿ. ಆದ್ದರಿಂದಲೇ ಇಂಥ ಗುರುದೇವನನ್ನು ಲಯಕರ್ತನಾದ ರುದ್ರನಿಗೆ ಹೋಲಿಸಿ 'ಗುರುದೇವೋ ಮಹೇಶ್ವರ' ಎಂದು ಆರಾಧಿಸುವುದು.

ಗುರುವಿನ ಗುಣದ ಬೃಹತ್ತು ಮತ್ತು ಮಹತ್ತು ಹಾಗೂ ಮಹಾಶಕ್ತಿ ಎಷ್ಟೆಂಬುದನ್ನು, ಹಾಗೆಯೇ ಗುರು ಎಂಬುವ ಹೇಗಿರುವ ಎಂಬ ತತ್ವವನ್ನು ಸಾರುವ ಸುಭಾಷಿತವೊಂದು ಹೀಗಿದೆ–

'ಅಜ್ಞಾನ ತಿಮಿರಾಂಧಸ್ಯ ಜ್ಞಾನಾಂಜನ ಶಲಾಕಯಾ
ಚಕ್ಷುರುನ್ಮೀರಿತಂ ದೇವ ತಸ್ಮೈಶ್ರೀ ಗುರುವೇ ನಮಃ'

ಅಂದರೆ, ಶಿಷ್ಯನ ಅಜ್ಞಾನವೆಂಬ ಕಣ್ಣು ಬೇನೆಯನ್ನು ಜ್ಞಾನವೆಂಬ ಅಂಜನದ ಕಡ್ಡಿಯಿಂದ ಗುಣಪಡಿಸಿ ಅವನ ಕೀರ್ತಿ ಎಲ್ಲೆಡೆ ಹರಡುವಂತೆ ಮಾಡಿದ ಶ್ರೀ ಗುರುವಿಗೆ ನಮನಗಳು ಎಂದರ್ಥ.

ಆದರೆ ಇವತ್ತಿನ ದಿನಗಳಲ್ಲಿ ಅಧಃಪತನಕ್ಕಿಳಿಯುತ್ತಿರುವ ನಮ್ಮ ಸಮಾಜದ ಅರ್ಥಾತ್ ದೇಶದ ಪರಿಸ್ಥಿತಿ ನೋಡಿದಾಗ 'ಗುರು' ಆದವನು ನಿಜಕ್ಕೂ ತನ್ನ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ನಿಭಾಯಿಸುತ್ತಿದ್ದಾನೆಯೇ? ಹಾಗೆಯೇ ಆಧ್ಯಾತ್ಮಿಕ ಗುರು ಎನಿಸಿಕೊಂಡವರು ಕಾಯಾ ವಾಚಾ ಮನಸಾ ತಮ್ಮ ಕರ್ತವ್ಯದ ಕಾಯಕವನ್ನು ಮಾಡುತ್ತಿದ್ದಾರೆಯೇ? ಎಂಬ ಪ್ರಶ್ನೆಗಳು ಶ್ರೀಸಾಮಾನ್ಯನಲ್ಲಿ ಮೂಡದಿರದು!

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಮೈಸೂರಿನ ಚಾಮರಾಜ, ನರಸಿಂಹರಾಜ, ಚಾಮುಂಡೇಶ್ವರಿ ಕ್ಷೇತ್ರಕ್ಕೆ ಕೋಟಿ ಕೋಟಿ ಅನುದಾನ

ನಾನು ಬಿಜೆಪಿ ಶಾಸಕನಾಗಿರುವ ಕಾರಣ ಕೃಷ್ಣರಾಜ ಕ್ಷೇತ್ರಕ್ಕೆ ನಯಾಪೈಸೆ ನೀಡಿಲ್ಲ

ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಶಾಸಕ ಟಿ.ಎಸ್.ಶ್ರೀವತ್ಸ ಆಕ್ರೋಶ

- ಒಂದು ಕಣ್ಣಿಗೆ ಬೆಣ್ಣೆ, ಒಂದು ಕಣ್ಣಿಗೆ ಸುಣ್ಣ
- ತೇಪೆ ಹಾಕಲು ನಗರಪಾಲಿಕೆಯಲ್ಲಿ ಹಣವಿಲ್ಲ
- ಸಚಿವರು, ಮಠಗಳಿಂದಲೂ ಸುಲಿಗೆ ಮಾಡುತ್ತಿದ್ದಾರೆ
- ಮೈಸೂರು ಕಲಾವಿದರಿಗೆ 64 ಲಕ್ಷ ಬಾಕಿ ಬರಬೇಕು

ಮೈಸೂರು, ಜು.8(ಬಿಎಲ್‌ಯು)– ರಸ್ತೆಗಳ ಅಭಿವೃದ್ಧಿಗಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಮೈಸೂರಿನ ಚಾಮರಾಜ ಹಾಗೂ ನರಸಿಂಹರಾಜ ಕ್ಷೇತ್ರಕ್ಕೆ ತಲಾ 21 ಕೋಟಿ ಹಾಗೂ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರಕ್ಕೆ 16 ಕೋಟಿ ರೂ. ಅನುದಾನ ನೀಡಿದ್ದು, ಕೃಷ್ಣರಾಜ ವಿಧಾನಸಭಾ ಕ್ಷೇತ್ರಕ್ಕೆ ನಯಾಪೈಸೆ ನೀಡದೆ ಮಲತಾಯಿ ಧೋರಣೆ ತಳೆದಿದೆ ಎಂದು ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಆಕ್ರೋಶ ವ್ಯಕ್ತಪಡಿಸಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಶಾಸಕರಿರುವ ಪಕ್ಕದ ಎರಡು ಕ್ಷೇತ್ರಗಳಿಗೆ ಅನುದಾನ ನೀಡಿ, ನನ್ನ ಕ್ಷೇತ್ರಕ್ಕೆ ಹಣ ನೀಡಿಲ್ಲ. ನಾನು ಬಿಜೆಪಿ ಶಾಸಕನಾಗಿರುವ ಹಿನ್ನೆಲೆಯಲ್ಲಿ ಕಾಂಗ್ರೆಸ್ ಸರ್ಕಾರ ದ್ವೇಷ ಮನೋಭಾವ ಪ್ರದರ್ಶಿಸಿದೆ ಎಂದು ಆಪಾದಿಸಿದರು.

ರಾಜ್ಯದ ವಿವಿಧ ಗ್ರಾಮೀಣ ವಿಧಾನಸಭಾ ಕ್ಷೇತ್ರಗಳಲ್ಲಿ ಒಟ್ಟು 7,110 ಕಿಲೋ ಮೀಟರ್ ಉದ್ದದ ಗ್ರಾಮೀಣ ರಸ್ತೆಗಳನ್ನು ಅಭಿವೃದ್ಧಿ ಮಾಡಲು ಬಾಹ್ಯ ನೇರವಾಗಿ 3,633 ಕೋಟಿ ಹಾಗೂ ರಾಜ್ಯದ ಪಾಲು 1,557 ಕೋಟಿ ಸೇರಿ ಒಟ್ಟು 5,190 ಕೋಟಿ ರೂ.ಗಳನ್ನು 205 ಕ್ಷೇತ್ರಗಳಿಗೆ ಹಂಚಿಕೆ ಮಾಡಿದೆ ಎಂದು ತಿಳಿಸಿದರು.

ಇದರಲ್ಲಿ ಮೈಸೂರಿನ ಚಾಮರಾಜ ಕ್ಷೇತ್ರಕ್ಕೆ 21.87 ಕೋಟಿ, ನರಸಿಂಹರಾಜ ಕ್ಷೇತ್ರಕ್ಕೆ 21.67 ಕೋಟಿ, ಚಾಮುಂಡೇಶ್ವರಿ ಕ್ಷೇತ್ರಕ್ಕೆ 16.04 ಕೋಟಿ ನೀಡಲಾಗಿದೆ. ಆದರೆ ನಾನು ಪ್ರತಿನಿಧಿಸುತ್ತಿರುವ ಕೃಷ್ಣರಾಜ ಕ್ಷೇತ್ರಕ್ಕೆ ಹಣ ನೀಡದೆ ಕಾಂಗ್ರೆಸ್ ಸರ್ಕಾರ ಹಗೆತನ ಸಾಧಿಸುತ್ತಿದೆ ಎಂದು ಶಾಸಕ ಶ್ರೀವತ್ಸ ದೂರಿದರು.

ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಬಹಳಷ್ಟು ರಸ್ತೆಗಳು ಗ್ರಾಮೀಣ ಪ್ರದೇಶಕ್ಕೆ ಸೇರಿರುವ ಕಾರಣ ಅಲ್ಲಿನ ಶಾಸಕರು ವಿರೋಧ ಪಕ್ಷದಲ್ಲಿದ್ದರೂ ಅನುದಾನ ನೀಡಿದ್ದಾರೆ ಎಂದರು.



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಮಂಗಳವಾರ ಶಾಸಕ ಟಿ.ಎಸ್.ಶ್ರೀವತ್ಸ ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಅನ್ನಭಾಗ್ಯದ ಅಕ್ಕಿ ಸಾಗಾಟ ಮಾಡುವವರ ಅನ್ನವನ್ನೆ ಸರ್ಕಾರ ಕಿತ್ತುಕೊಂಡಿದೆ

ಅನ್ನಭಾಗ್ಯ ಯೋಜನೆಯ ಅಕ್ಕಿ ಸಾಗಾಟ ಮಾಡುವ ಲಾರಿ ಚಾಲಕರು, ಕ್ಲೀನರ್‌ಗಳ ಅನ್ನವನ್ನೆ ಈ ಸರ್ಕಾರ ಕಿತ್ತುಕೊಂಡಿದೆ ಎಂದು ಶಾಸಕ ಟಿ.ಎಸ್.ಶ್ರೀವತ್ಸ ಆರೋಪಿಸಿದರು.

ಅನ್ನಭಾಗ್ಯ ಯೋಜನೆಯ ಅಕ್ಕಿಯನ್ನು ಪಡಿತರ ಅಂಗಡಿಗಳಿಗೆ ಸಾಗಾಟ ಮಾಡುವ ಸುಮಾರು 4 ಸಾವಿರ ಲಾರಿ ಮಾಲೀಕರಿಗೆ ಸರ್ಕಾರ 250 ಕೋಟಿ ರೂಪಾಯಿ ನೀಡಬೇಕಿದೆ. ಬಾಕಿ ಪಾವತಿಗಾಗಿ ಕಾದು ತಾಳ್ಮೆ ಕಳೆದುಕೊಂಡ ಲಾರಿ ಮಾಲೀಕರು ಈಗ ಅಕ್ಕಿ ಸಾಗಾಟವನ್ನು ಸ್ಥಗಿತ ಮಾಡಿದ್ದಾರೆ ಎಂದು ಹೇಳಿದರು.

ಲಾರಿ ಚಾಲಕರು, ಕ್ಲೀನರ್‌ಗಳು ಸೇರಿದಂತೆ ಇತರೆ ಕೂಲಿ ಕಾರ್ಮಿಕರು ಇದರಲ್ಲೇ ಜೀವನ ಮಾಡುತ್ತಿದ್ದರು. ಆದರೆ ಈಗ ಲಾರಿ ಮಾಲೀಕರು ಮುಷ್ಕರ ನಡೆಸುತ್ತಿದ್ದು, ಈ ಸರ್ಕಾರ ಅನ್ನಭಾಗ್ಯ ಅಕ್ಕಿ ಸಾಗಾಟ ಮಾಡುವ ಶ್ರಮಜೀವಿಗಳ ಅನ್ನವನ್ನೆ ಕಿತ್ತುಕೊಂಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಾಂಗ್ರೆಸ್ ಸರ್ಕಾರದ ಸಚಿವ ಹಾಗೂ ಶಾಸಕರು ಯಾವ ರೀತಿ ದರ್ಪ ತೋರುತ್ತಾರೆ ಎಂಬುದಕ್ಕೆ ಶಾಸಕ ಬಸವರಾಜ ರಾಜರೆಡ್ಡಿ ಅವರ ಮಾತುಗಳೇ ಸ್ಪಷ್ಟ ನಿದರ್ಶನ. ರಸ್ತೆ, ಕುಡಿಯುವ ನೀರು ಸೇರಿ ಮೂಲ ಸೌಕರ್ಯ ಬೇಕು ಅಂದರೆ ಅನ್ನ ಭಾಗ್ಯ ಯೋಜನೆಯ ಅಕ್ಕಿ ಕೊಡಲು ಸಾಧ್ಯ ವಿಲ್ಲ. ಒಂದು ಕೊಟ್ಟರೆ ಮತ್ತೊಂದು ಕೊಡಲು ಸಾಧ್ಯವಿಲ್ಲ. ಯಾವುದು ಬೇಕೋ ಅದನ್ನು ನೀವೇ ಆಯ್ಕೆ ಮಾಡಿಕೊಳ್ಳಿ ಎಂದು ಬಸವರಾಜ ರಾಯರೆಡ್ಡಿ ಹೇಳಿದ್ದಾರೆ ಎಂದರು.

ಇನ್ನು 10 ದಿನದಲ್ಲಿ ಕರ್ನಾಟಕ ಬಿಜೆಪಿಗೆ ನೂತನ ಸಾರಥಿ

ಬಿಜೆಪಿ ವರಿಷ್ಠರು ಇನ್ನು ಹತ್ತು ದಿನದಲ್ಲಿ ಕರ್ನಾಟಕ ಬಿಜೆಪಿಗೆ ನೂತನ ರಾಜ್ಯಾಧ್ಯಕ್ಷರನ್ನು ನೇಮಕ ಮಾಡಲಿದ್ದಾರೆ ಎಂದು ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ ತಿಳಿಸಿದರು.

ಕೆಲವು ರಾಜ್ಯಗಳಲ್ಲಿ ನೂತನ ರಾಜ್ಯಾಧ್ಯಕ್ಷರನ್ನು ಈಗಾಗಲೇ ನೇಮಕ ಮಾಡಲಾಗಿದೆ. ಅದರಂತೆ ಇನ್ನು ಹತ್ತು ದಿನದಲ್ಲಿ ಕರ್ನಾಟಕ ಬಿಜೆಪಿಗೆ ರಾಜ್ಯಾಧ್ಯಕ್ಷರ ನೇಮಕವಾಗಲಿದೆ ಎಂದರು. ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿಗೆ ಪಕ್ಷದ ರಾಷ್ಟ್ರಾಧ್ಯಕ್ಷರ ನೇಮಕ ಕಗ್ಗಂಟಾಗಿದೆ. ಅಂತಿಮವಾಗಿ ಅರ್ಧನಾರೀಶ್ವರರನ್ನು ನೇಮಕ ಮಾಡಬಹುದು ಎಂಬ ಕಾಂಗ್ರೆಸ್ ಹಿರಿಯ ನಾಯಕ ಬಿ.ಕೆ.ಹರಿಪ್ರಸಾದ್ ವ್ಯಂಗ್ಯಭರಿತ ಮಾತಿಗೆ ಇದೇ ವೇಳೆ ತಿರುಗೇಟು ನೀಡಿದ ಶಾಸಕ ಟಿ.ಎಸ್.ಶ್ರೀವತ್ಸ ಅವರು, ಕಾಂಗ್ರೆಸ್ ನಾಯಕರು ಯಾರನ್ನು ಕೀಳಾಗಿ ಕಾಣಬಾರದು, ಯಾವುದೇ ವ್ಯಕ್ತಿತ್ವದ ಬಗ್ಗೆ ವಂಗ್ಯ ಅಥವಾ ಲೇವಡಿಯಿಂದ ಮಾತನಾಡಬಾರದು. ಇಂತಹ ಹೇಳಿಕೆಯಿಂದ ತೃತೀಯ ಲಿಂಗಿಗಳು ಸಿಡಿದೆದ್ದರೆ ಏನು ಮಾಡುತ್ತಾರೆ ಎಂದು ಎಚ್ಚರಿಸಿದರು. ತೃತೀಯಲಿಂಗಿ ಎಂಬ ಮಾತ್ರಕ್ಕೆ ಅವರನ್ನು ಅಗೌರವದಿಂದ ಕಾಣಬಾರದು. ತೃತೀಯಲಿಂಗಿ ಬಿಜೆಪಿ ರಾಷ್ಟ್ರಾಧ್ಯಕ್ಷರಾದರೆ ತಪ್ಪೇನು ಎಂದು ಶ್ರೀವತ್ಸ ಪ್ರಶ್ನಿಸಿದರು.

ರಸ್ತೆಗಳಿಗೆ ಡಾಂಬರೀಕರಣ ಮಾಡುವುದಿರಲಿ, ತೇಪೆ ಹಾಕಲು ಹಣವಿಲ್ಲ. ಈ ಬಗ್ಗೆ ಪ್ರಶ್ನಿಸಿದರೆ ಹಣವಿಲ್ಲವೆಂದು ನಗರಪಾಲಿಕೆ ಆಯುಕ್ತರು ಅಸಹಾಯಕತೆ ವ್ಯಕ್ತಪಡಿಸುತ್ತಾರೆ. ಕ್ಷೇತ್ರದ ಅಭಿವೃದ್ಧಿಗಾಗಿ ಸರ್ಕಾರದಲ್ಲಿ ಹಣವಿಲ್ಲವೆಂದು ಸ್ವತಃ ಕಾಂಗ್ರೆಸ್ ಶಾಸಕರೇ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ನವೆಂಬರ್ ತಿಂಗಳಲ್ಲಿ ಕಾಂಗ್ರೆಸ್ ಶಾಸಕರ ಭಿನ್ನಾಭಿಪ್ರಾಯ ಸ್ಫೋಟವಾಗುತ್ತದೆ ಎಂದು ಭವಿಷ್ಯ ನುಡಿದರು.

ವಿಶ್ವ ಗಾಣಿಗರ ಮಠಕ್ಕೆ ಸರ್ಕಾರ ನೀಡಿರುವ 3.5 ಕೋಟಿ ರೂಪಾಯಿ ಸಹಾಯ ಧನ ಬಿಡುಗಡೆ ಮಾಡಲು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಕಮಿಷನ್ ಕೇಳಿದ್ದಾರೆ. ಆಧ್ಯಾತ್ಮಿಕ, ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯ ಮಾಡುವ ಮಠಗಳಿಂದ ಕೂಡ ಸಚಿವರ ಸುಲಿಗೆ ಮಾಡುತ್ತಿದ್ದಾರೆ ಎಂದು ಶ್ರೀವತ್ಸ ಕಿಡಿಕಾರಿದರು.

ಮೈಸೂರಿನ ಕಲಾವಿದರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ 64 ಲಕ್ಷ ರೂ. ಬಾಕಿ ಬರಬೇಕಿದೆ. ಆದರೆ ಈ ಹಣ ನೀಡಲು ಸರ್ಕಾರ ಸತಾಯಿಸುತ್ತಿದ್ದು, ಹೀಗಾದರೆ ಕಲಾವಿದರು ಬದುಕುವುದು ಹೇಗೆ ಎಂದು ಪ್ರಶ್ನಿಸಿದರು.

ಕಳೆದ ಎರಡು ವರ್ಷದ ಅವಧಿಯಲ್ಲಿ ವಾಲ್ಮೀಕಿ ಹಗರಣ ಸೇರಿದಂತೆ ಬಹಳಷ್ಟು ಅವ್ಯವಹಾರ ನಡೆದಿದೆ. ಎಷ್ಟೆ ಭ್ರಷ್ಟಾಚಾರ ಮಾಡಿದರೂ ನಾವು ಪಾರಾಗಬಹುದು ಎಂಬ ಧೈರ್ಯದಿಂದ ಸಚಿವರು ಹಣ ಲೂಟಿ ಮಾಡಲು ಹಿಂದೆ ಮುಂದೆ ನೋಡುತ್ತಿಲ್ಲ ಎಂದು ಶಾಸಕ ಟಿ.ಎಸ್.ಶ್ರೀವತ್ಸ ಆರೋಪ ಮಾಡಿದರು.

ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ, ಉಪಾಧ್ಯಕ್ಷ ಜೋಗಿ ಮಂಜು, ಪ್ರಧಾನ ಕಾರ್ಯದರ್ಶಿ ಮಹೇಶ್, ಮಾಧ್ಯಮ ಸಂಚಾಲಕ ಮಹೇಶ್‌ರಾಜೇ ಅರಸ್, ಸಹ ಸಂಚಾಲಕ ಬಿ.ಎಂ.ಸಂತೋಷ್ ಕುಮಾರ್, ಕಾರ್ಯದರ್ಶಿ ನಂದಕುಮಾರ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಶಾಸಕರ ಲಿಖಿತ ಅಹವಾಲು ಸ್ವೀಕಾರ; ಸುರ್ಜೇವಾಲ ಮೇಲೆ ಸಿಎಂ ಸಿದ್ದರಾಮಯ್ಯ ಆಪ್ತರ ಕೆಂಗಣ್ಣು

ಇದೊಂದು ರೀತಿ ಪಕ್ಷ, ಸರ್ಕಾರದಲ್ಲಿ ಗೊಂದಲ ಸೃಷ್ಟಿಸುವ ತಂತ್ರ: ಸಿಎಂ ಬಳಿ ಆಪ್ತ ಸಚಿವರ ಆಕ್ಷೇಪ

ಬೆಂಗಳೂರು, ಜು. 8(ಕೆಎಂಶಿ)– ಅಭಿವೃದ್ಧಿಗೆ ಹಣ ಬಿಡುಗಡೆ ಆಗಿಲ್ಲ ಎಂಬುದು ಸೇರಿದಂತೆ ಪಕ್ಷದ ಶಾಸಕರು ಮಾಡುತ್ತಿರುವ ಆರೋಪಗಳನ್ನು ಲಿಖಿತ ರೂಪದಲ್ಲಿ ರಾಜ್ಯ ಕಾಂಗ್ರೆಸ್ ಉಸ್ತುವಾರಿ ಹಾಗೂ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಪಡೆಯುತ್ತಿರುವುದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತ ಸಚಿವರ ಸಿಟ್ಟು ನೆತ್ತಿಗೇರುವಂತೆ ಮಾಡಿದೆ.

ಪಕ್ಷ ಮತ್ತು ಸರ್ಕಾರದಲ್ಲಿ ಗೊಂದಲ ಉಂಟು ಮಾಡುವಂತಹ ಕಸರತ್ತು ಈಗ ಬೇಕಿತ್ತೆ, ಅವರು ಯಾವ ಕಾರಣಕ್ಕೆ ಹೀಗೆ ಮಾಡುತ್ತಿದ್ದಾರೆ ಎಂದು ಕಿಡಿಕಾರಿದ್ದಾರೆ.

ಅಲ್ಪ ಸಮಯದಲ್ಲೇ ರಾಜ್ಯಕ್ಕೆ ಭೇಟಿ ನೀಡಿ, ಶಾಸಕರನ್ನು ಮುಖಾಮುಖಿ ಭೇಟಿ ಮಾಡಿ ಇಲ್ಲ–ಸಲ್ಲದ ಪ್ರಶ್ನೆಗಳನ್ನು ಕೇಳಿ ಮಾಹಿತಿ ಪಡೆದಿರುವುದಲ್ಲದೆ, ಲಿಖಿತ ರೂಪದಲ್ಲಿ ದೂರು ಪಡೆದು ಯಾವ ದಾಖಲೆ ಸೃಷ್ಟಿ ಮಾಡಲು ಹೊರಟಿದ್ದಾರೆ ಎಂದು ಕೇಳುತ್ತಿದ್ದಾರೆ.



ಸುರ್ಜೇವಾಲ

ಕಳೆದ ಎರಡು ದಿನಗಳಿಂದ ಅನಾರೋಗ್ಯ ಕಾರಣ ಎಲ್ಲಾ ಕಾರ್ಯಕ್ರಮ ರದ್ದು ಮಾಡಿ ವಿಶ್ರಾಂತಿ ಪಡೆಯುತ್ತಿರುವ ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿದ ಸಚಿವರು ಮತ್ತು ಮುಖಂಡರು, ಸುರ್ಜೇವಾಲ ವಿರುದ್ಧ ಕಿಡಿಕಾರಿದ್ದಾರೆ. ಸಿದ್ದರಾಮಯ್ಯ ಸಹ ಈ ಕಸರತ್ತಿನ ಹಿಂದಿನ ಮರ್ಮ ತಿಳಿಯದು ಎಂದಿದ್ದಾರೆ.

ಇಂತಹ ಕಸರತ್ತನ್ನು ಎಐಸಿಸಿ ಮಾಡಿಸುತ್ತಿದೆಯೇ ಅಥವಾ ಸುರ್ಜೇವಾಲ ಯಾರದೋ ಒತ್ತಡಕ್ಕೆ ಮಣಿದು ಶಾಸಕರ ಅಭಿಪ್ರಾಯ ಸಂಗ್ರಹಿಸುತ್ತಿದ್ದಾರೆಯೇ ಎಂಬ ಮಾತುಗಳು ಕೇಳಿಬಂದಿವೆ.

ಬಿಜೆಪಿ ದುರಾಡಳಿತದಿಂದ ನಾವು ಅಧಿಕಾರಕ್ಕೆ ಬಂದು ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದೇವೆ. ಇಂತಹ ಸಂದರ್ಭದಲ್ಲೂ ಜನತೆಗೆ ನೀಡಿದ ಐದು ಗ್ಯಾರಂಟಿಗಳು ಯಶಸ್ವಿಯಾಗಿ ಜಾರಿಗೊಂಡಿವೆ.

ಈಗ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತಿದ್ದು ಅಭಿವೃದ್ಧಿ ಕಾರ್ಯ ಕೈಗೆತ್ತಿಕೊಳ್ಳುವ ಕಾಲ ಬಂದಿದೆ. ಇದೆಲ್ಲಾ ಮಾಹಿತಿ ಇದ್ದರೂ ಸುರ್ಜೇವಾಲ ಇಂತಹ ಕಸರತ್ತು ಏಕೆ ನಡೆಸುತ್ತಿದ್ದಾರೆ ಎಂಬ ಯಕ್ಷ ಪ್ರಶ್ನೆ ಕಾಡಿದೆ.

ಅಭಿವೃದ್ಧಿಗೆ ಹಣ ನೀಡಿಲ್ಲ ಎಂಬುದನ್ನೇ ಮುಂದಿಟ್ಟುಕೊಂಡು ತಮ್ಮ ಮತ್ತು ಸರ್ಕಾರದ ವಿರುದ್ಧ ವರಿಷ್ಠರಿಗೆ ವರದಿ ನೀಡುವ ಉದ್ದೇಶ ಇವರದ್ದಾಗಿದೆಯೇ.

ಅವರು ಕಸರತ್ತು ನಡೆಸಲಿ, ಅದರಿಂದ ಏನೂ ಆಗದು, ನನ್ನ ದೆಹಲಿ ಭೇಟಿ ಸಂದರ್ಭದಲ್ಲಿ ಸರ್ಕಾರದ ಮಾಹಿತಿಯನ್ನು ವರಿಷ್ಠರ ಮುಂದಿಡುತ್ತೇನೆ ಎಂದಿದ್ದಾರೆ.

ಈ ಮಧ್ಯೆ ಪಕ್ಷದ 95 ಶಾಸಕರ ಅಭಿಪ್ರಾಯ ಸಂಗ್ರಹ ಪೂರ್ಣಗೊಳಿಸಿರುವ ಸುರ್ಜೇವಾಲ, ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಗ್ಯಾರಂಟಿ ಯೋಜನೆ ಅನುಷ್ಠಾನ ಹಾಗೂ ಅಭಿವೃದ್ಧಿ ಯೋಜನೆಗಳನ್ನು ನಮ್ಮ ಶಾಸಕರ ಮುಂದಿಟ್ಟು, ಉತ್ತರ ಪಡೆದಿದ್ದೇನೆ ಎಂದರು.

ಸಚಿವರ ಕಾರ್ಯವೈಖರಿ ವಿರುದ್ಧ ಗುರುತರ ಆರೋಪಗಳನ್ನು ಮಾಡಿದ್ದಾರೆ, ಅದೂ ಸೇರಿದಂತೆ ಇತರ ವಿಷಯ ಕುರಿತು ಲಿಖಿತವಾಗಿ ದೂರು ಪಡೆದುಕೊಂಡಿದ್ದೇನೆ ಎಂದರು.

ಇಂದು ಭಾರತ್ ಬಂದ್‌ಗೆ ಕರೆ

ನವದೆಹಲಿ, ಜುಲೈ 8: ಕೃಷಿ ಮತ್ತು ಗ್ರಾಮೀಣ ಕಾರ್ಮಿಕ ಸಂಘಟನೆಗಳ ಸಹಯೋಗದೊಂದಿಗೆ 10 ಕೇಂದ್ರ ಕಾರ್ಮಿಕ ಸಂಘಗಳ ಒಕ್ಕೂಟವು ನಾಳೆ (ಜು. 9) ರಾಷ್ಟ್ರವ್ಯಾಪಿ ಮುಷ್ಕರವನ್ನು ಘೋಷಿಸಿದೆ.

ದೊಡ್ಡ ಕಂಪನಿಗಳಿಗೆ 'ಅನುಕೂಲಕರ' ಮತ್ತು ಕಾರ್ಮಿಕರಿಗೆ ತೊಂದರೆಯಾಗುವ ಸರ್ಕಾರಿ ನೀತಿಗಳನ್ನು ವಿರೋಧಿಸಲು ಭಾರತ್ ಬಂದ್ ನಡೆಸುವುದಾಗಿ ಘೋಷಿಸಲಾಗಿದೆ. ಮೂಲಗಳ ಪ್ರಕಾರ, ಸಂಘಟಿತ ಮತ್ತು ಅಸಂಘಟಿತ ವಲಯಗಳಲ್ಲಿ 25 ಕೋಟಿಗೂ ಹೆಚ್ಚು ಕಾರ್ಮಿಕರು ಈ ಮುಷ್ಕರದಲ್ಲಿ ಭಾಗವಹಿಸುವ ನಿರೀಕ್ಷೆಯಿದೆ.



ಭಾರತ್ ಬಂದ್‌ಗೆ ಕರೆ ನೀಡಿದವರು ಯಾರು?: ಸಂಬಂಧಿತ ಕಾರ್ಮಿಕರು ಮತ್ತು ರೈತ ಸಂಘಟನೆಗಳೊಂದಿಗೆ 10 ಕೇಂದ್ರ ಕಾರ್ಮಿಕ ಸಂಘಗಳ ಜಂಟಿ ವೇದಿಕೆಯು ಕೇಂದ್ರ ಸರ್ಕಾರದ "ಕಾರ್ಮಿಕ ವಿರೋಧಿ, ರೈತ ವಿರೋಧಿ ಮತ್ತು ಕಾರ್ಪೊರೇಟ್ ಪರ" ನೀತಿಗಳಿಗೆ ತಮ್ಮ ವಿರೋಧವನ್ನು ದಾಖಲಿಸಲು ಮುಷ್ಕರಕ್ಕೆ ಕರೆ ನೀಡಿದೆ. "ದೇಶಾದ್ಯಂತ ರೈತರು ಮತ್ತು ಗ್ರಾಮೀಣ ಕಾರ್ಮಿಕರು ಸಹ ಈ ಪ್ರತಿಭಟನೆಯಲ್ಲಿ ಸೇರಲಿದ್ದಾರೆ" ಎಂದು ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್‌ನ ಅಮರ್‌ಜೀತ್ ಕೌರ್ ಹೇಳಿದ್ದಾರೆ.

ಭಾರತ್ ಬಂದ್ ಏಕೆ?: ಭಾರತಾದ್ಯಂತ ಕಾರ್ಮಿಕ ಸಂಘಗಳು ದೇಶಾದ್ಯಂತ ಮುಷ್ಕರವನ್ನು ಘೋಷಿಸಿವೆ. ಸರ್ಕಾರವು ತಮ್ಮ ದೀರ್ಘಕಾಲದ ಕಳವಳಗಳನ್ನು ನಿರ್ಲಕ್ಷಿಸುತ್ತಿದೆ ಎಂದು ಅವು ಆರೋಪಿಸಿವೆ. ಕಳೆದ ವರ್ಷ ಕಾರ್ಮಿಕ ಸಚಿವ ಮನ್ಸುಖ್ ಮಾಂಡವಿಯಾ ಅವರಿಗೆ ವಿವರವಾದ 17 ಅಂಶಗಳ ಬೇಡಿಕೆ ಪಟ್ಟಿಯನ್ನು ಸಲ್ಲಿಸಿದ್ದರೂ, ಸರ್ಕಾರದಿಂದ ಯಾವುದೇ ಪ್ರತಿಕ್ರಿಯೆ ಕಂಡು ಬಂದಿಲ್ಲ ಎಂದು ಒಕ್ಕೂಟಗಳು ಹೇಳುತ್ತವೆ. "ಸರ್ಕಾರವು ದೇಶದ ಕಲ್ಯಾಣ ರಾಜ್ಯ ಸ್ಥಾನಮಾನವನ್ನು ಕೈಬಿಟ್ಟಿದೆ. ಅದು ವಿದೇಶಿ ಮತ್ತು ಭಾರತೀಯ ಕಾರ್ಪೊರೇಟ್‌ಗಳ ಹಿತಾಸಕ್ತಿಗಾಗಿ ಕೆಲಸ ಮಾಡುತ್ತಿದೆ. ಇದು ತೀವ್ರವಾಗಿ ಅನುಸರಿಸುತ್ತಿರುವ ನೀತಿಗಳಿಂದ ಸ್ಪಷ್ಟವಾಗಿದೆ" ಎಂದು ಯೂನಿಯನ್ ಫೋರಂ ಹೇಳಿಕೆಯಲ್ಲಿ ತಿಳಿಸಿದೆ.

ಕಾರ್ಮಿಕರ ರಕ್ಷಣೆಗೆ ಹಾನಿ ಮಾಡುವ ಕಾರ್ಮಿಕ ನೀತಿಗಳು, ಹೆಚ್ಚುತ್ತಿರುವ ನಿರುದ್ಯೋಗ ಮತ್ತು ಹಣದುಬ್ಬರ, ಆರೋಗ್ಯ, ಶಿಕ್ಷಣ ಮತ್ತು ನಾಗರಿಕ ಸೌಲಭ್ಯಗಳಲ್ಲಿ ಕಡಿತ, ಯುವಕರಿಗೆ ಉದ್ಯೋಗ ನೀಡುವ ಬದಲು ಸರ್ಕಾರ ನಿವೃತ್ತರನ್ನು ನೇಮಿಸಿಕೊಳ್ಳುತ್ತಿರುವುದು, 10 ವರ್ಷಗಳಲ್ಲಿ ಕಾರ್ಮಿಕ ಸಮ್ಮೇಳನವಿಲ್ಲ ಎಂದು ಆರೋಪಿಸಿ ಭಾರತ್ ಬಂದ್‌ಗೆ ಕರೆ ನೀಡಲಾಗಿದೆ.

ನಾಳೆ ಗುರುಪೂರ್ಣಿಮಾ ಪೂಜಾ ಮಹೋತ್ಸವ

ಮೈಸೂರು, ಜು.8–ಶ್ರೀ ವಿಜಯ ಮಹಾಗಣಪತಿ ದೇವಸ್ಥಾನದಲ್ಲಿ ಪ್ರತಿಷ್ಠಾಪನೆ ಗೊಂಡಿರುವ ಶ್ರೀ ಶಿರಡಿ ಸತ್ಯ ಸಾಯಿಬಾಬಾ ಸನ್ನಿಧಿಯಲ್ಲಿ ಜು.10 ರಂದು ಗುರು ಪೂರ್ಣಿಮಾ ಪ್ರಯುಕ್ತವಾಗಿ ಬೆಳಗ್ಗೆ 6.30ಕ್ಕೆ ಫಲಪಂಚಾಮೃತ ಸಹಿತ ಜಲಾಭಿಷೇಕ, ವಸ್ತ್ರಧಾರಣೆ, ಪುಷ್ಪಾಲಂಕಾರ, ಪುಷ್ಪಾರ್ಚನೆ, ಭಸ್ಮಾರ್ಚನೆ, ಮಹಾಮಂಗಳಾರತಿ, ತೀರ್ಥಪ್ರಸಾದ, ಅನ್ನಸಂತರ್ಪಣೆ ನಡೆಯಲಿದೆ. ಸಂಜೆ ಶ್ರೀ ಶಿರಡಿ ಸತ್ಯ ಸಾಯಿ ಬಾಬಾ ಉತ್ಸವಮೂರ್ತಿಗೆ ಪಂಚಾಮೃತ ಸಹಿತ ಪುರುಷ ಸೂಕ್ತ, ಶ್ರೀ ಸೂಕ್ತದಿಂದ ಜಲಾಭಿಷೇಕ, ಪುಷ್ಪಾರ್ಚನೆ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಮಹಿಳಾ ಭಜನಾ ಮಂಡಳಿಯಿಂದ ಭಜನೆ ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಧರ್ಮಸ್ಥಳ ಸುತ್ತಮುತ್ತ ಕಾನೂನುಬಾಹಿರ ಚಟುವಟಿಕೆ

ಆರೋಪಿಗಳ ಬಂಧನಕ್ಕೆ ಆಗ್ರಹಿಸಿ ದಸಂಸ ಪ್ರತಿಭಟನೆ



ಧರ್ಮಸ್ಥಳದ ಸುತ್ತಮುತ್ತ ನಡೆದಿರುವ ಅತ್ಯಾಚಾರ, ಕೊಲೆ, ಕಾನೂನುಬಾಹಿರ ಪ್ರಕರಣಗಳಲ್ಲಿ ಅಪರಾಧಿಗಳನ್ನು ಬಂಧಿಸಿ, ನ್ಯಾಯ ಕೊಡಿಸಬೇಕೆಂದು ಒತ್ತಾಯಿಸಿ ದಲಿತ ಸಂಘರ್ಷ ಸಮಿತಿ ವತಿಯಿಂದ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಜು.8(ಜಿಎ)–ಧರ್ಮಸ್ಥಳದ ಸುತ್ತಮುತ್ತ ನಡೆದಿರುವ ಸುಮಾರು 150ಕ್ಕೂ ಹೆಚ್ಚು ಹೆಣ್ಣು ಮಕ್ಕಳು, ಮಹಿಳೆಯರ ಅತ್ಯಾಚಾರ, ಕೊಲೆ, ಕಾನೂನು ಬಾಹಿರ ಪ್ರಕರಣಗಳಲ್ಲಿ ಅಪರಾಧಿಗಳನ್ನು ಬಂಧಿಸಿ, ಸಂತ್ರಸ್ತರಿಗೆ ಸೂಕ್ತ ನ್ಯಾಯ ಕೊಡಿಸಬೇಕೆಂದು ಒತ್ತಾಯಿಸಿ ದಲಿತ ಸಂಘರ್ಷ ಸಮಿತಿ ವತಿಯಿಂದ ಪುರಭವನ ಮುಂಭಾಗದ ಅಂಬೇಡ್ಕರ್ ಪ್ರತಿಮೆ ಬಳಿ ಪ್ರತಿಭಟನೆ ನಡೆಸಲಾಯಿತು.

ವ್ಯಕ್ತಿಯೋರ್ವ ಧರ್ಮಸ್ಥಳ ಸುತ್ತಮುತ್ತ ನಡೆದಿರುವ ಅತ್ಯಾಚಾರ, ಹತ್ಯೆಗಳಂತಹ ಅಪರಾಧ ಕೃತ್ಯಗಳ ಮಾಹಿತಿ ಇರುವುದಾಗಿ ತಿಳಿಸಿದ್ದು, ತನಗೆ ಜೀವ ಬೆದರಿಕೆಯೊಡ್ಡಿ ಮೃತದೇಹಗಳನ್ನು ವಿಲೇವಾರಿ ಮಾಡಿಸಿದ್ದಾರೆ ಎಂದು ಜು.3ರಂದು ದೂರು ನೀಡಿದ್ದಾರೆ. ಜನರ ಧಾರ್ಮಿಕ ಭಾವನೆಗಳನ್ನು ಬಂಡವಾಳ ಮಾಡಿಕೊಂಡು ಕ್ರಿಮಿನಲ್ ಚಟುವಟಿಕೆಗಳ ಹಿನ್ನೆಲೆ ಇರುವ ಕೆಲವು ಪಟ್ಟಭದ್ರ ಹಿತಾಸಕ್ತಿಗಳ ವಿರುದ್ಧ ದೂರು ಬಂದರೂ ಸರ್ಕಾರ ನಿಷ್ಪಕ್ಷಪಾತ ತನಿಖೆ ಮಾಡಿ, ಶಿಕ್ಷೆ ಕೊಡಿಸದೆ ಅಪರಾಧಿಗಳಿಗೆ ರಕ್ಷಣೆ ನೀಡುತ್ತಿದೆ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.

ಸೌಜನ್ಯ ಪ್ರಕರಣದಲ್ಲಿ ಸಂತೋಷ್ ರಾವ್ ನಿರ್ದೋಷಿ ಎಂದು ತೀರ್ಪು ನೀಡಿದೆ. ಹಾಗಾದರೆ ನಿಜವಾದ ಆರೋಪಿಗಳ್ಯಾರು? ಸಂತೋಷ್‌ರಾವ್‌ನನ್ನು ಹಿಡಿದು ತಂದ ರವಿಪೂಜಾರಿ, ವಾರಿಜ ಆಚಾರಿ ಆತ್ಮಹತ್ಯೆ ಮಾಡಿಕೊಳ್ಳಲು ಕಾರಣವೇನು? ತನಿಖೆಯಲ್ಲಿ ಉದ್ದೇಶ ಪೂರ್ವಕವಾಗಿ ಲೋಪ ಎಸಗಿರುವ ತನಿಖಾಧಿಕಾರಿಗಳ ವಿರುದ್ಧ ಏಕೆ ಕ್ರಮ ಕೈಗೊಂಡಿಲ್ಲ? ನೂರಾರು ಅಸಹಜ ಸಾವುಗಳ ಹಿಂದೆ ಯಾರಿದ್ದಾರೆ ಎಂಬ ಪ್ರಶ್ನೆಗಳಿಗೆ ಸರ್ಕಾರವೇ ಉತ್ತರಿಸಬೇಕು. ಅಪರಾಧ ಕೃತ್ಯಗಳ ಮಾಹಿತಿ ನೀಡಲು ಮುಂದೆ ಬಂದಿರುವ ವ್ಯಕ್ತಿಯ ಕುಟುಂಬಕ್ಕೆ ರಕ್ಷಣೆ ನೀಡಿ, ಉನ್ನತ ಮಟ್ಟದ ತನಿಖೆ ನಡೆಸಿ ಆರೋಪಿಗಳಿಗೆ ಕಠಿಣ ಶಿಕ್ಷೆ ಕೊಡಿಸಬೇಕೆಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ದಸಂಸ ಸಂಚಾಲಕ ಚೋರನಹಳ್ಳಿ ಶಿವಣ್ಣ, ಕೆ.ವಿ.ದೇವೇಂದ್ರ, ಕಿರಂಗೂರು ಸ್ವಾಮಿ, ಹಾರೋಹಳ್ಳಿ ನಟರಾಜು, ಶಿವಮೂರ್ತಿ ಶಂಕರಪುರ, ಸಣ್ಣಯ್ಯ ಲಕ್ಕೂರು ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಮೈಸೂರಿನ ರಸ್ತೆಬದಿ ಮಾರಾಟ ಮಾಡುವ ಕಳಪೆ ಗುಣಮಟ್ಟದ ಹೆಲ್ಮೆಟ್‌ಗಳ ವಿರುದ್ಧ ಕಾರ್ಯಾಚರಣೆ

- ಹೆಲ್ಮೆಟ್‌ಗಳಲ್ಲಿ ಬಿಐಎಸ್ ಪ್ರಮಾಣೀಕೃತ ಐಎಸ್‌ಐ ಗುರುತು ಕಡ್ಡಾಯ
- ಕಳಪೆ ಗುಣಮಟ್ಟದ ಹೆಲ್ಮೆಟ್‌ಗಳ ವಿರುದ್ಧ ರಾಷ್ಟ್ರವ್ಯಾಪಿ ಅಭಿಯಾನ

ಮೈಸೂರು, ಜು.8(ಬಿಎಲ್‌ಯು)– ಕಳಪೆ ಗುಣಮಟ್ಟದ ಹೆಲ್ಮೆಟ್‌ಗಳ ತಯಾರಕರು ಹಾಗೂ ಮಾರಾಟಗಾರರ ವಿರುದ್ಧ ಕೇಂದ್ರ ಸರ್ಕಾರ ಸಮರ ಸಾರಿದೆ. ಇದೇ ವೇಳೆ ಮೈಸೂರಿನ ರಸ್ತೆ ಬದಿ ಮಾರಾಟ ಮಾಡುವ ಕಳಪೆ ಗುಣಮಟ್ಟದ ಹೆಲ್ಮೆಟ್‌ಗಳ ಮಾರಾಟಗಾರರ ವಿರುದ್ಧವೂ ಮೈಸೂರು ಪೊಲೀಸರು ಕಾರ್ಯಾಚರಣೆ ನಡೆಸಲು ನಿರ್ಧರಿಸಿದ್ದಾರೆ.



ಅಪಘಾತದ ಸಂದರ್ಭದಲ್ಲಿ ಮೊದಲು ತಲೆಗೆ ಪೆಟ್ಟು ಬೀಳುತ್ತದೆ. ದೇಹದ ಯಾವುದೇ ಭಾಗಕ್ಕೆ ಪೆಟ್ಟು ಬಿದ್ದರೆ ಪ್ರಾಣಾಪಾಯದಿಂದ ಪಾರಾಗುವ ಸಾಧ್ಯತೆ ಇದೆ. ಆದರೆ ತಲೆ ಮತ್ತು ಎದೆಯ ಭಾಗಕ್ಕೆ ಪೆಟ್ಟಾದರೆ ಪ್ರಾಣಕ್ಕೆ ಕುತ್ತು ಗ್ಯಾರಂಟಿ.

ಅಪಘಾತದ ಸಂದರ್ಭದಲ್ಲಿ ಕೆಲವರಿಗೆ ತಲೆಯಲ್ಲಿ ರಕ್ತಸ್ರಾವವಾದರೆ, ಮತ್ತೆ ಕೆಲವರಿಗೆ ತಲೆಯಲ್ಲಿ ರಕ್ತ ಹೆಪ್ಪುಗಟ್ಟುತ್ತದೆ. ಕೂಡಲೇ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆಯದಿದ್ದರೆ ಸಾವು ಖಚಿತ.

ಈ ಹಿನ್ನೆಲೆಯಲ್ಲಿ ದ್ವಿಚಕ್ರ ವಾಹನ ಸವಾರ ಹಾಗೂ ಹಿಂಬದಿ ಸವಾರ ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು ಎಂದು ಸರ್ಕಾರ ಕಟ್ಟುನಿಟ್ಟಿನ ಕಾನೂನು ಜಾರಿಗೊಳಿಸಿದೆ. ಮೋಟಾರು ವಾಹನ ಕಾಯ್ದೆ 1988ರಡಿ ಹೆಲ್ಮೆಟ್ ಕಡ್ಡಾಯಗೊಳಿಸಿ ಆದೇಶಿಸಿದೆ. ವಾಹನ ಸವಾರರು ಬಿಐಎಸ್ (ಬ್ಯೂರೋ ಆಫ್ ಇಂಡಿಯನ್ ಸ್ಟಾಂಡರ್ಸ್) ಪ್ರಮಾಣೀಕೃತ ಐಎಸ್‌ಐ (ಭಾರತೀಯ ಗುಣಮಟ್ಟ ಸಂಸ್ಥೆಯ ಗುರುತು) ಇರುವ ಹೆಲ್ಮೆಟ್ ಅನ್ನೆ ಧರಿಸಬೇಕು ಎಂದು ಸರ್ಕಾರ ಕಾನೂನು ಮಾಡಿದೆ.

ಆದರೆ ಬಿಐಎಸ್ ಪ್ರಮಾಣೀಕೃತವಿಲ್ಲದ ಐಎಸ್‌ಐ ಗುರುತು ಇಲ್ಲದ ಹೆಲ್ಮೆಟ್‌ಗಳನ್ನು ಅಕ್ರಮವಾಗಿ ತಯಾರು ಮಾಡಿ ಬಹಳಷ್ಟು ಕಾರ್ಖಾನೆಗಳು ಲಾಭ ಮಾಡಿಕೊಳ್ಳುತ್ತಿವೆ. ಇಂತಹ ಹೆಲ್ಮೆಟ್ ಧರಿಸಿದರೆ ಅಪಘಾತದ ಸಂದರ್ಭದಲ್ಲಿ ವಾಹನ ಸವಾರನ ತಲೆಗೆ ಪೆಟ್ಟು ಬಿದ್ದರೆ ಪ್ರಾಣಾಪಾಯದಿಂದ ಪಾರಾಗಲು ಸಾಧ್ಯವಿಲ್ಲ. ಅಪಘಾತವಾದ ವೇಳೆ ಈ ಹೆಲ್ಮೆಟ್‌ಗಳು ಒಡೆದು ಚೂರಾಗುತ್ತದೆ. ಇದರಿಂದ ವಾಹನ ಸವಾರ ಸಾವನ್ನಪ್ಪಿರುವ ಬಹಳಷ್ಟು ಉದಾಹರಣೆಗಳಿವೆ.

ದೇಶದಲ್ಲಿ 21 ಕೋಟಿಗೂ ಹೆಚ್ಚು ದ್ವಿಚಕ್ರ ವಾಹನಗಳಿವೆ. ವಾಹನ ಸವಾರರ ಸುರಕ್ಷತೆ ದೃಷ್ಟಿಯಿಂದ ಬಿಐಎಸ್ ಪ್ರಮಾಣೀಕೃತವಲ್ಲದ ಐಎಸ್‌ಐ ಗುರುತಿಲ್ಲದ ಕಳಪೆ ಗುಣಮಟ್ಟದ ಹೆಲ್ಮೆಟ್ ತಯಾರಿಸುವ ಕಾರ್ಖಾನೆಗಳನ್ನು ಕೇಂದ್ರ ಸರ್ಕಾರ ಹಂತ ಹಂತವಾಗಿ ಬಂದ್ ಮಾಡಿಸುತ್ತಾ ಬರುತ್ತಿದೆ. ಈಗಾಗಲೇ ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಬಹಳಷ್ಟು ಕಾರ್ಖಾನೆಗೆ ಬೀಗ ಹಾಕಿದೆ.

ಅಲ್ಲದೆ ಕೇಂದ್ರ ಸರ್ಕಾರ ಕಳಪೆ ಗುಣಮಟ್ಟದ ಹೆಲ್ಮೆಟ್‌ಗಳ ವಿರುದ್ಧ ರಾಷ್ಟ್ರವ್ಯಾಪಿ ಅಭಿಯಾನ ಕೂಡ ಆರಂಭಿಸಿದೆ. ಬಿಐಎಸ್ ಪ್ರಮಾಣೀಕೃತವಿಲ್ಲದ ಐಎಸ್‌ಐ ಗುರುತಿಲ್ಲದ ಹೆಲ್ಮೆಟ್‌ಗಳ ಮಾರಾಟ ಮಾಡುತ್ತಿದ್ದರೆ ಬಿಐಎಸ್ ಪೋರ್ಟಲ್‌ನಲ್ಲಿ ಸಾರ್ವಜನಿಕರು ದೂರು ಸಲ್ಲಿಸಬಹುದು. ಆಗ ಸಂಬಂಧಿಸಿದ ಇಲಾಖೆ ಅಧಿಕಾರಿಗಳು ದಾಳಿ ಮಾಡಿ ತಯಾರಕರು ಹಾಗೂ ಮಾರಾಟಗಾರರ ವಿರುದ್ಧ ಕ್ರಮ ಕೈಗೊಳ್ಳುವರು.

ಕೇವಲ ನೂರು ರೂಪಾಯಿ ಉಳಿಸಲು ಪ್ರಾಣಕ್ಕೆ ಕುತ್ತು ತಂದುಕೊಳ್ಳುತ್ತಾರೆ

ಗುಣಮಟ್ಟದ ಹೆಲ್ಮೆಟ್‌ಗೂ ಕಳಪೆ ಗುಣಮಟ್ಟದ ಹೆಲ್ಮೆಟ್‌ಗೂ ಕೇವಲ 300 ರಿಂದ 600 ರೂಪಾಯಿ ವ್ಯತ್ಯಾಸವಿರುತ್ತದೆ. ಆದರೆ ವಾಹನ ಸವಾರರು ಕೇವಲ ಕೆಲವು ನೂರು ರೂಪಾಯಿ ಉಳಿಸಲು ಹೋಗಿ ಪ್ರಾಣಕ್ಕೆ ಕುತ್ತು ತಂದುಕೊಳ್ಳುತ್ತಿದ್ದಾರೆ. ಬಿಐಎಸ್ ಪ್ರಮಾಣೀಕೃತ ಐಎಸ್‌ಐ ಗುರುತಿರುವ ಹೆಲ್ಮೆಟ್‌ಗಳು 800 ರಿಂದ 1 ಸಾವಿರ ರೂಪಾಯಿವರೆಗೆ ದೊರೆಯುತ್ತದೆ. ಇವುಗಳ ಗುಣಮಟ್ಟ ಖಾತ್ರಿಯಾಗಿರುತ್ತದೆ. ಯುವಕರನ್ನು ಅತ್ಯಾಕರ್ಷಿಸುವ ಫ್ಯಾನ್ಸಿಯ ಹೆಲ್ಮೆಟ್ ಗಳು 1 ಸಾವಿರದಿಂದ 3,000 ರೂಪಾಯಿವರೆಗೆ ದೊರೆಯುತ್ತದೆ.

ಆದರೆ ದಿನನಿತ್ಯದ ಬಳಕೆಗೆ ಸಾಮಾನ್ಯ ಜನರಿಗೆ 800ರಿಂದ 1 ಸಾವಿರ ರೂಪಾಯಿವರೆಗೆ ದೊರೆಯುವ ಹೆಲ್ಮೆಟ್‌ಗಳೇ ಸಾಕಾಗುತ್ತದೆ. ಆದರೆ ಕೆಲವರು ರಸ್ತೆ ಬದಿಯಲ್ಲಿ ದೊರೆಯುವ 300 ರಿಂದ 500 ರೂಪಾಯಿವರೆಗಿನ ಹೆಲ್ಮೆಟ್ ಖರೀದಿ ಮಾಡುತ್ತಾರೆ. ಇಂತಹ ಹೆಲ್ಮೆಟ್ ಖರೀದಿಯಿಂದ ಕೇವಲ 500 ರೂಪಾಯಿ ಉಳಿಸಬಹುದು ಅಷ್ಟೆ. ಆದರೆ ಕೆಲವು ನೂರು ರೂಪಾಯಿ ಉಳಿಸಲು ಹೋಗಿ ಅಪಘಾತದ ಸಂದರ್ಭದಲ್ಲಿ ಜೀವವನ್ನೇ ಬಲಿ ಕೊಡುತ್ತಾರೆ. ಅಪಘಾತದ ಸಂದರ್ಭದಲ್ಲಿ ಕಳಪೆ ಗುಣಮಟ್ಟದ ಹೆಲ್ಮೆಟ್‌ಗಳು ಒಡೆದು ಚೂರಾಗುತ್ತವೆ. ಇದರಿಂದ ವಾಹನ ಸವಾರರ ತಲೆಗೆ ಸುರಕ್ಷತೆ ಇರುವುದಿಲ್ಲ. ಇದರ ಗಂಭೀರತೆ ಅರಿತು ವಾಹನ ಸವಾರರು ಗುಣಮಟ್ಟದ ಹೆಲ್ಮೆಟ್‌ಗಳನ್ನು ಖರೀದಿ ಮಾಡುವುದು ಅವಶ್ಯ.

ಹೇರ್ ಸ್ಟೈಲ್ ಹಾಳಾಗುತ್ತೆ ಎಂದು ಕೆಲವರು ಹೆಲ್ಮೆಟ್ ಧರಿಸಲ್ಲ

ಕೆಲವು ವಾಹನ ಸವಾರರು ಹೇರ್ ಸ್ಟೈಲ್ ಹಾಳಾಗುತ್ತದೆ ಎಂಬ ಕಾರಣದಿಂದ ಹೆಲ್ಮೆಟ್ ಧರಿಸುವುದಿಲ್ಲ. ಪೊಲೀಸರಿಗೆ ದಂಡ ಪಾವತಿ ಮಾಡಿದರೂ ಸರಿ ಹೆಲ್ಮೆಟ್ ಧರಿಸುವುದಿಲ್ಲ ಎಂದು ಮೊಂಡುತನ ಪ್ರದರ್ಶಿಸುತ್ತಾರೆ. ಅಪಘಾತದ ವೇಳೆ ತಲೆಗೆ ಪೆಟ್ಟು ಬಿದ್ದರೆ ಹೇರ್ ಸ್ಟೈಲ್ ಇರಲಿ, ತಲೆಯೇ ಇರುವುದಿಲ್ಲ ಎಂಬ ವಾಸ್ತವ ಸತ್ಯ ಅವರಿಗೆ ತಿಳಿದಿಲ್ಲವೆನಿಸುತ್ತದೆ. ಸಂಚಾರಿ ಪೊಲೀಸರ ದಂಡಾಸ್ತ್ರದಿಂದ ಪಾರಾಗಲು ಹೆಲ್ಮೆಟ್ ಧರಿಸಬೇಕು ಅಷ್ಟೇ ಎಂದು ಕೆಲವರು ತಿಳಿದಿದ್ದಾರೆ. ಇದರಿಂದ ಯಾವುದೋ ಒಂದು ಹೆಲ್ಮೆಟ್ ಹಾಕಿಕೊಂಡು ಹೋಗುತ್ತಾರೆ. ಹೆಲ್ಮೆಟ್ ನಮ್ಮ ಪ್ರಾಣ ರಕ್ಷಿಸುತ್ತದೆ ಎಂಬ ಸತ್ಯ ಸಂಗತಿ ಅವರಿಗೆ ತಿಳಿದಿಲ್ಲ.

ರಸ್ತೆಬದಿ ಹೆಲ್ಮೆಟ್ ಮಾರಾಟಗಾರರ ವಿರುದ್ಧ ಕಾರ್ಯಾಚರಣೆ

"ಐಎಸ್‌ಐ ಗುಣಮಟ್ಟದ ಹೆಲ್ಮೆಟ್‌ಗಳನ್ನೆ ಧರಿಸಬೇಕು ಎಂಬ ಕಟ್ಟುನಿಟ್ಟಿನ ಕಾನೂನು ಇದೆ. ಆದರೆ ಕೆಲವರು ಹಣ ಉಳಿಸಲು ರಸ್ತೆಬದಿ ಕಳಪೆ ಗುಣಮಟ್ಟದ ಹೆಲ್ಮೆಟ್ ಧರಿಸುತ್ತಾರೆ. ಅಪಘಾತವಾದ ಸಂದರ್ಭದಲ್ಲಿ ಇಂತಹ ಹೆಲ್ಮೆಟ್‌ಗಳು ಸುರಕ್ಷಿತವಲ್ಲ. ಈ ಹಿನ್ನೆಲೆ ರಸ್ತೆ ಬದಿಯ ಕಳಪೆ ಗುಣಮಟ್ಟದ ಹೆಲ್ಮೆಟ್ ಮಾರಾಟ ಸ್ಥಳಗಳ ಬಗ್ಗೆ ಮೊದಲು ಮಾಹಿತಿ ಸಂಗ್ರಹಿಸಲಾಗುವುದು. ತರುವಾಯ ಕಾರ್ಯಾಚರಣೆ ನಡೆಸಿ ಕಳಪೆ ಗುಣಮಟ್ಟದ ಹೆಲ್ಮೆಟ್ ಮಾರಾಟಗಾರರ ವಿರುದ್ಧವೂ ಕ್ರಮ ಕೈಗೊಳ್ಳಲಾಗುವುದು.

–ಸುಂದರ್‌ರಾಜ್, ಡಿಸಿಪಿ, ಅಪರಾಧ ಮತ್ತು ಸಂಚಾರ ವಿಭಾಗ, ಮೈಸೂರು

ಜು.28ಕ್ಕೆ, ಮುಖ್ಯಮಂತ್ರಿಗಳಿಂದ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ

ಅಗತ್ಯ ಸಿದ್ಧತೆಗೆ ಅಧಿಕಾರಿಗಳಿಗೆ ಶಾಸಕ ಕೆ.ಎಂ.ಉದಯ್ ಸೂಚನೆ

ಮದ್ದೂರು, ಜು.8– ತಾಲೂಕಿನ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜು.28 ರಂದು ನೆರವೇರಿಸಲಿದ್ದು, ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಅಧಿಕಾರಿಗಳಿಗೆ ಶಾಸಕ ಕೆ.ಎಂ.ಉದಯ್ ಸೂಚಿಸಿದರು.



ಪಟ್ಟಣದ ಪ್ರವಾಸಿ ಮಂದಿರದಲ್ಲಿ ಪೂರ್ವಭಾವಿ ಸಭೆ ನಡೆಯಿತು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಯಾವುದೇ ಲೋಪವಿಲ್ಲದೇ ಆಯೋಜಿಸಲು ಶಿಷ್ಟಾಚಾರ, ಆಹಾರ, ವಸ್ತು ಪ್ರದರ್ಶನ, ಕುಡಿಯುವ ನೀರು ಹಾಗೂ ಸ್ವಚ್ಛತೆ, ಭದ್ರತೆ, ವೇದಿಕೆ ಸೇರಿದಂತೆ ವಿವಿಧ ಸಮಿತಿಗಳನ್ನು ರಚಿಸಲಾಗಿದ್ದು, ಅಧಿಕಾರಿಗಳು ತಮಗೆ ವಹಿಸಿರುವ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿ ಎಂದರು.

75 ಕಾಮಗಾರಿಗಳ ಉದ್ಘಾಟನೆ, ಶಿಲಾನ್ಯಾಸ: ತಾಲೂಕಿನಲ್ಲಿ ಸಾರ್ವಜನಿಕರಿಗೆ ಉಪಯುಕ್ತವಾಗುವ 1400 ಕೋಟಿ ರೂ. ವೆಚ್ಚದಲ್ಲಿ ಹಲವಾರು 75ಕ್ಕೂ ಹೆಚ್ಚು ಕಾಮಗಾರಿಗಳನ್ನು ಹಮ್ಮಿಕೊಳ್ಳಲಾಗಿದ್ದು, ಬೃಹತ್ ಕಾರ್ಯಕ್ರಮ ಆಯೋಜನೆಯ ಮೂಲಕ ಸಾರ್ವಜನಿಕರಿಗೆ ತಿಳಿಸಲಾಗುವುದು ಎಂದರು.

ಲೋಕೋಪಯೋಗಿ ಇಲಾಖೆಯ 81 ಕೋಟಿ, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ 12 ಕೋಟಿ, ಕಾವೇರಿ ನೀರಾವರಿ ನಿಗಮದ 300 ಕೋಟಿ ರೂ. ಸೇರಿದಂತೆ ವಿವಿಧ ಇಲಾಖೆಗಳ ಕಾಮಗಾರಿಗಳ ಉದ್ಘಾಟನೆ, ಶಂಕುಸ್ಥಾಪನೆ ನಡೆಯಲಿದೆ ಎಂದರು.

ಜಿಲ್ಲಾಧಿಕಾರಿ ಡಾ.ಕುಮಾರ್ ಮಾತನಾಡಿ, ಅಧಿಕಾರಿಗಳು ತಮ್ಮ ಇಲಾಖೆಯಿಂದ ಉದ್ಘಾಟನೆಯಾಗುವ ಕಾಮಗಾರಿಯ ವಿವರವನ್ನು ನಿಖರವಾಗಿ ತಿಳಿಸಬೇಕು ಹಾಗೂ ಶಿಷ್ಟಾಚಾರದಂತೆ ಸಚಿವರು, ಅಧ್ಯಕ್ಷರು ಹಾಗೂ ಹಿರಿಯ ಅಧಿಕಾರಿಗಳ ಹೆಸರನ್ನು ಆಹ್ವಾನ ಪತ್ರಿಕೆಯಲ್ಲಿ ಇರುವುದನ್ನು ಖಾತ್ರಿ ಪಡಿಸಿಕೊಂಡು, ಅವರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಭಾಗವಹಿಸುವ ಸಾರ್ವಜನಿಕರಿಗೆ ಉಪಹಾರ ವಿತರಣೆಗೆ ಅಗತ್ಯ ಕೌಂಟರ್‌ಗಳ ವ್ಯವಸ್ಥೆ ಮಾಡಿ, ಆಹಾರ ಗುಣಮಟ್ಟವನ್ನು ಪರೀಕ್ಷೆಗೆ ಒಳಪಡಿಸಿ. ಅಗತ್ಯ ಸ್ಥಳಗಳಲ್ಲಿ ಸಿಸಿ ಟಿವಿಗಳನ್ನು ಅಳವಡಿಸಿ ಎಂದರು.

ಸಾರ್ವಜನಿಕರಿಗೆ ಶುದ್ಧ ಕುಡಿಯುವ ನೀರು ಹಾಗೂ ಅಗತ್ಯ ಸ್ಥಳಗಳಲ್ಲಿ ಮೊಬೈಲ್ ಶೌಚಾಲಯಗಳನ್ನು ಸ್ಥಾಪಿಸಬೇಕು. ಮಳೆಗಾಲ ಇರುವುದರಿಂದ ಪಾರ್ಕಿಂಗ್ ಸ್ಥಳವನ್ನು ಸಮತಟ್ಟು ಮಾಡಿ ವಾಹನ ನಿಲುಗಡೆಗೆ ತೊಂದರೆಯಾಗದಂತೆ ನೋಡಿಕೊಳ್ಳಿ ಎಂದರು.

ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಆಹಾರ ಇಲಾಖೆ ಜಂಟಿ ನಿರ್ದೇಶಕ ಕೃಷ್ಣ ಕುಮಾರ್, ಜಿಪಂ ಉಪಕಾರ್ಯದರ್ಶಿ ಲಕ್ಷ್ಮೀ, ಅಪರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ತಿಮ್ಮಯ್ಯ ಸೇರಿದಂತೆ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು. ಸಭೆಯ ನಂತರ ಶಾಸಕರು, ಜಿಲ್ಲಾಧಿಕಾರಿಗಳು ಸೇರಿದಂತೆ ಅಧಿಕಾರಿಗಳು ಕಾರ್ಯಕ್ರಮ ನಡೆಯುವ ಸ್ಥಳ ಪರಿಶೀಲನೆ ನಡೆಸಿದರು.

ಬೈಕ್‌ಗೆ ಟಾಟಾ ಏಸ್ ಡಿಕ್ಕಿ: ಸವಾರ ಸಾವು





ನಾಗಮಂಗಲ, ಜು.8– ಬೈಕ್‌ಗೆ ಟಾಟಾ ಏಸ್ ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಪಟ್ಟಣದ ವೆಂಕಟೇಶ್ವರ ನರ್ಸಿಂಗ್ ಹೋಂ ಬಳಿ ನಡೆದಿದೆ.

ಮೂಲತಃ ಮೇಘಾಲಯ ರಾಜ್ಯದ, ತಾಲೂಕಿನ ಬದರಿಕೊಪ್ಪಲು ಗ್ರಾಮದಲ್ಲಿ ವಾಸವಿದ್ದ ಗಣೇಶ್(25) ಸಾವನ್ನಪ್ಪಿದವರು. ಮೇಘಾಲಯದಿಂದ ಸೆಂಟ್ರಿಂಗ್ ಕೆಲಸಕ್ಕಾಗಿ ಆಗಮಿಸಿದ್ದ ಗಣೇಶ್ ಸೋಮವಾರ ರಾತ್ರಿ 11 ಗಂಟೆ ಸಮಯದಲ್ಲಿ ಹೋಟೆಲ್‌ನಿಂದ ಊಟ ತೆಗೆದುಕೊಂಡು ಬೈಕ್‌ನಲ್ಲಿ ಬದರಿಕೊಪ್ಪಲು ಗ್ರಾಮಕ್ಕೆ ಹೋಗುತ್ತಿದ್ದ ವೇಳೆ ಎದುರಿನಿಂದ ಬಂದ ಟಾಟಾ ಏಸ್ ಸ್ಟೇರಿಂಗ್ ತುಂಡಾಗಿ ಡಿವೈಡರ್‌ಗೆ ಡಿಕ್ಕಿ ಹೊಡೆದು ನಂತರ ಪಕ್ಕದ ರಸ್ತೆಗೆ ನುಗ್ಗಿ ನರ್ಸಿಂಗ್ ಹೋ ಬಳಿ ನಿಂತಿದ್ದ ಕಾರಿಗೆ ಡಿಕ್ಕಿ ಹೊಡೆದಿದೆ. ಬಳಿಕ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಗಣೇಶ್ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ಡಿಕ್ಕಿ ರಭಸಕ್ಕೆ ಬೈಕ್ ನಜ್ಜುಗುಜ್ಜಾಗಿದ್ದು, ಘಟನೆ ಬಳಿಕ ಚಾಲಕ ಟಾಟಾ ಏಸ್ ಬಿಟ್ಟು ಪರಾರಿಯಾಗಿದ್ದಾನೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ನಾಗಮಂಗಲ ಪಟ್ಟಣ ಠಾಣೆ ಪೊಲೀಸರು ಪರಿಶೀಲನೆ ನಡೆಸಿ, ವಾಹನಗಳನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಬೋನಿಗೆ ಬಿದ್ದ ಗಂಡು ಚಿರತೆ



ಚಿರತೆಯೊಂದಿಗೆ ಅರಣ್ಯ ಇಲಾಖೆ ಸಿಬ್ಬಂದಿ.

ಪಾಂಡವಪುರ, ಜು.8–ತಾಲೂಕಿನ ಹಾಗನಹಳ್ಳಿ ಸುತ್ತಮುತ್ತ ಸಾಕು ಪ್ರಾಣಿಗಳನ್ನು ಹೊತ್ತೊಯ್ದು ಆತಂಕ ಸೃಷ್ಟಿಸಿದ್ದ 3 ವರ್ಷದ ಗಂಡು ಚಿರತೆ ಅರಣ್ಯ ಇಲಾಖೆ ಅಧಿಕಾರಿಗಳು ಇಟ್ಟಿದ್ದ ಬೋನಿಗೆ ಬಿದ್ದಿದೆ.

ಹಸು, ಕರು, ಕುರಿ, ಮೇಕೆಗಳನ್ನು ಬಲಿ ಪಡೆಯುತ್ತಿದ್ದ ಚಿರತೆ ಸೆರೆ ಹಿಡಿಯುವಂತೆ ಹಾಗನಹಳ್ಳಿ ಗ್ರಾಮಸ್ಥರು ಮನವಿ ಮಾಡಿದ್ದ ಹಿನ್ನೆಲೆಯಲ್ಲಿ ವಲಯ ಅರಣ್ಯಾಧಿಕಾರಿ ಸಂಪತ್ ಪಟೇಲ್ ಮಾರ್ಗದರ್ಶನದಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ಚಿರತೆ ಚಲನವಲನ ಆಧರಿಸಿ ಬೋನು ಇರಿಸಿದ್ದರು. ಬೋನಿನಲ್ಲಿ ಕಟ್ಟಿದ್ದ ನಾಯಿ ಬೇಟೆಯಾಡಲು ಬಂದ ಚಿರತೆ ಸೆರೆಯಾಗಿದೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯಾಧಿಕಾರಿಗಳು ಚಿರತೆ ವಶಕ್ಕೆ ಪಡೆದು ಮೇಲಧಿಕಾರಿಗಳ ಸೂಚನೆಯಂತೆ ಅರಣ್ಯಕ್ಕೆ ಬಿಡಲಾಗುವುದು ಎಂದು ಅಧಿಕಾರಿಗಳು ತಿಳಿಸಿದರು.

ಕಾರ್ಯಾಚರಣೆಯಲ್ಲಿ ವಲಯ ಉಪ ಅರಣ್ಯ ಅಧಿಕಾರಿ ಧರ್ಮೇಂದ್ರ, ಸಿಬ್ಬಂದಿಗಳಾದ ಕುಮಾರ್ ಅಂತನಹಳ್ಳಿ, ಯೋಗೇಶ್, ಕರೀಗೌಡ, ಶೇಖರ್, ಪ್ರಕಾಶ್, ಸ್ವಾಮಿ ಇತರರಿದ್ದರು.

ಅರ್ಜಿ ಆಹ್ವಾನ

ಮಂಡ್ಯ, ಜು.8– ಕರ್ನಾಟಕ ಸಾಹಿತ್ಯ ಅಕಾಡೆಮಿ ಪತ್ರಕರ್ತರಿಗೆ ಕನ್ನಡ ಸಾಹಿತ್ಯ ಎಂಬ ಹೆಸರಿನಲ್ಲಿ 3 ದಿನಗಳ ಅಧ್ಯಯನ ಶಿಬಿರವನ್ನು ಆಗಸ್ಟ್ 3ನೇ ವಾರ ಅಥವಾ ಕೊನೆಯ ವಾರದಲ್ಲಿ ನಡೆಸಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ 20 ರಿಂದ 40 ವರ್ಷ ವಯಸ್ಸು ಹೊಂದಿರುವ ಈಗಾಗಲೇ ಪತ್ರಿಕೆಯಲ್ಲಿ ಕೆಲಸ ಮಾಡುತ್ತಿರುವ ಪತ್ರಿಕೋದ್ಯಮ ಪದವಿ ಪಡೆದವರು ಹಾಗೂ ಆಸಕ್ತಿಯುಳ್ಳ ರಾಜ್ಯದ ಎಲ್ಲಾ ಭಾಗದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿಯನ್ನು ಜು.25 ರೊಳಗೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ https://sahithyaacademy.karnataka.gov.in ಅನ್ನು ಸಂಪರ್ಕಿಸಲು ರಿಜಿಸ್ಟ್ರಾರ್ ಕರಿಯಪ್ಪ.ಎನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮುಖ್ಯ ಇಂಜಿನಿಯರ್, ಭೂ ಅಭಿವೃದ್ಧಿ ಅಧಿಕಾರಿಗೆ ಬೀಳ್ಕೊಡುಗೆ



ನಿವೃತ್ತ ಮುಖ್ಯ ಇಂಜಿನಿಯರ್ ಮಂಜುನಾಥ್, ಮೈಸೂರು ಕಾಡಾ ಕಚೇರಿ ಭೂ ಅಭಿವೃದ್ಧಿ ಅಧಿಕಾರಿ ಶಿವಪ್ರಕಾಶ್ ಅವರನ್ನು ಸನ್ಮಾನಿಸಲಾಯಿತು.

ಕೆ.ಆರ್.ಪೇಟೆ, ಜು.8– ಪಟ್ಟಣದ ಹೇಮಾವತಿ ಜಲಾಶಯ ಯೋಜನೆಯ ನೀರು ಬಳಕೆದಾರರ ಸಹಕಾರ ಸಂಘಗಳ ಮಹಾಮಂಡಲದ ಕಚೇರಿಯಲ್ಲಿ ಗೊರೂರು ಹೇಮಾವತಿ ಜಲಾಶಯ ಯೋಜನೆಯ ನಿವೃತ್ತ ಮುಖ್ಯ ಇಂಜಿನಿಯರ್ ಮಂಜುನಾಥ್ ಮತ್ತು ಮೈಸೂರು ಕಾಡಾ ಕಚೇರಿ ನಿವೃತ್ತ ಭೂ ಅಭಿವೃದ್ಧಿ ಅಧಿಕಾರಿ ಶಿವ ಪ್ರಕಾಶ್ ಅವರನ್ನು ಸನ್ಮಾನಿಸಿ ಬೀಳ್ಕೊಡಲಾಯಿತು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮಹಾಮಂಡಲದ ಅಧ್ಯಕ್ಷ ಆರ್.ಎ.ನಾಗಣ್ಣ ಮುಖ್ಯ ಇಂಜಿನಿಯರ್ ಮಂಜುನಾಥ್ ಮತ್ತು ಶಿವಪ್ರಕಾಶ್ ಅವರನ್ನು ಸನ್ಮಾನಿಸಿ ಮಾತನಾಡಿ, ಮಂಡ್ಯ, ಮೈಸೂರು, ತುಮಕೂರು, ಹಾಸನ ಜಿಲ್ಲೆಗಳ ವ್ಯಾಪ್ತಿಯ ನಮ್ಮ ಮಹಾಮಂಡಲದ ನೀರು ಬಳಕೆದಾರರ ಸಹಕಾರ ಸಂಘಗಳಿಗೆ ತಮ್ಮ ಅಧಿಕಾರವಧಿಯಲ್ಲಿ ಹೆಚ್ಚು ಸೌಲಭ್ಯ ಕೊಡಿಸುವಲ್ಲಿ ಇಬ್ಬರೂ ಅಧಿಕಾರಿಗಳು ಶ್ರಮಿಸಿದ್ದಾರೆ. ಜೊತೆಗೆ ಹೇಮಾವತಿ ಬಳಕೆದಾರರ ಮಹಾಮಂಡಲ ಸ್ಥಾಪಿಸಲು ಪೂರ್ಣ ಸಹಕಾರ ಮತ್ತು ಸಲಹೆ ನೀಡುವ ಮೂಲಕ ಮಹಾಮಂಡಲದ ಅಭಿವೃದ್ಧಿಗೆ ಸಹಕಾರ ನೀಡಿದ್ದಾರೆ. ಇಬ್ಬರೂ ಅಧಿಕಾರಿಗಳ ನಿವೃತ್ತಿ ಜೀವನ ಸುಖಕರವಾಗಿರಲಿ, ದೇವರು ಇನ್ನೂ ಹೆಚ್ಚಿನ ಆಯಸ್ಸು, ಆರೋಗ್ಯ ಕೊಡಲಿ ಎಂದು ಹಾರೈಸಿದರು.

ನಿವೃತ್ತ ಮುಖ್ಯ ಇಂಜಿನಿಯರ್ ಮಂಜುನಾಥ್ ಮಾತನಾಡಿ, 184 ನೀರು ಬಳಕೆದಾರರ ಸಂಘಗಳು ಅಸ್ತಿತ್ವದಲ್ಲಿದ್ದು, ಮಹಾಮಂಡಲದ ಅಡಿ ಸಕ್ರಿಯವಾಗಿ ಕೆಲಸ ಮಾಡುತ್ತಿದ್ದು ಹೇಮಾವತಿ ಅಚ್ಚುಕಟ್ಟು ವ್ಯಾಪ್ತಿಯ ರೈತರಿಗೆ ಹೆಚ್ಚು ಅನುಕೂಲ ಮಾಡಿಕೊಡುತ್ತಿವೆ. ಇದಕ್ಕೆ ಮಹಾಮಂಡಲದ ಅಧ್ಯಕ್ಷ ಆರ್.ಎ.ನಾಗಣ್ಣ ಮತ್ತು ಪದಾಧಿಕಾರಿಗಳ ಪರಿಶ್ರಮ ಕಾರಣ ಎಂದರು.

ಕಾರ್ಯಕ್ರಮದಲ್ಲಿ ಚನ್ನರಾಯಪಟ್ಟಣ ಹೇಮಾವತಿ ನೀರಾವರಿ ಇಲಾಖೆ ಅಧೀಕ್ಷಕ ಇಂಜಿನಿಯರ್ ಗಂಗಾಧರ್, ಕೆ.ಆರ್.ಪೇಟೆ ಹೇಮಾವತಿ ಜಲಾಶಯ ಯೋಜನೆಯ ನಂ.3 ಕಾರ್ಯಪಾಲಕ ಇಂಜಿನಿಯರ್ ಚಂದ್ರೇಗೌಡ, ನಂ.5ರ ಎಇಇ ಆನಂದ್, ತುಮಕೂರು ಕಾಡಾ ಇಲಾಖೆ ಅಧಿಕಾರಿ ಮಾರುತಿ, ಮಹಾ ಮಂಡಲದ ಉಪಾಧ್ಯಕ್ಷ ಯೋಗೇಂದ್ರ, ಕಾರ್ಯದರ್ಶಿ ಕುಮಾರ್, ನಿರ್ದೇಶಕರಾದ ಹೆಚ್.ರಾಜಶೇಖರ್, ಸಿ.ಎಸ್.ನಾಗೇಶ್, ಮಲ್ಲೇಗೌಡ, ನಾಗೇಶ್, ಸಿ.ಟಿ.ಶಿವಪ್ಪ, ಡಿ.ಎ.ಶಿವಪ್ಪ, ಕೆ.ಸಿ.ಧರ್ಮ, ವೈ.ಡಿ.ರಂಗಸ್ವಾಮಿ, ಮಾರ್ಕಂಡೇಗೌಡ, ಯೋಗೇಂದ್ರ, ಸಿದ್ದೇಗೌಡ, ಭೈರೇಗೌಡ, ಕೆ.ಎ.ರಾಮೇಗೌಡ, ಬಿ.ಕೆ.ಹೊನ್ನೇಗೌಡ, ಆರ್.ಎಸ್.ಬಲರಾಮ್, ಜೆ.ನರಸಿಂಹೇಗೌಡ, ಗಂಗಾಧರ್, ರಾಮಕೃಷ್ಣೇ ಗೌಡ, ಮಹೇಶ್, ಶಿವಪ್ಪ ಮತ್ತಿತರರಿದ್ದರು.

ಹೆಚ್ಡಿಕೆ ಮೇಕೆದಾಟು ಯೋಜನೆಗೆ ಅನುಮತಿ ಕೊಡಿಸಲಿ



ಮಂಡ್ಯ, ಜು.8– ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಲೋಕಸಭಾ ಚುನಾವಣೆ ಸಂದರ್ಭ ಮೇಕೆದಾಟು ಯೋಜನೆಗೆ ಕೇಂದ್ರದ ಅನುಮತಿ ಕೊಡಿಸುತ್ತೇನೆ ಎಂದಿದ್ದರು. ಕೊಟ್ಟ ಮಾತಿನಂತೆ ಕೇಂದ್ರ ಸರ್ಕಾರದಿಂದ ಮೇಕೆದಾಟು ಯೋಜನೆಗೆ ಅನುಮತಿ ಕೊಡಿಸಬೇಕು ಎಂದು ಕಾಂಗ್ರೆಸ್ ಮುಖಂಡ ಶಿವನಂಜು ತಿಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯಿಂದ ಸಂಸದರಾಗಿ ಆಯ್ಕೆಯಾಗಿ ಕೇಂದ್ರ ಮಂತ್ರಿ ಸ್ಥಾನಗಳಿಸಿದರೂ ಕೊಟ್ಟ ಮಾತಿಗೆ ನಿಲ್ಲದೇ ವಿನಃಕಾರಣ ರಾಜಕಾರಣ ಮಾಡುತ್ತಿದ್ದಾರೆ ಎಂದು ದೂರಿದರು.

ಮೇಕೆದಾಟು ವಿಚಾರವಾಗಿ ಮಾತನಾಡಿದ್ದ ಕುಮಾರಸ್ವಾಮಿ ಅವರು, ತಾವು ಕೊಟ್ಟ ಮಾತನ್ನು ತಿರುಚಿ ಕಾಂಗ್ರೆಸ್ ಪಕ್ಷ ತನ್ನ ಮಿತ್ರ ಪಕ್ಷವಾದ ತಮಿಳುನಾಡು ಸರ್ಕಾರದ ಒಪ್ಪಿಗೆ ಕೊಡಿಸಲಿ. ಮೇಕೆದಾಟು ಯೋಜನೆಗೆ 5 ನಿಮಿಷದಲ್ಲೇ ಕೇಂದ್ರದ ಅನುಮತಿ ಕೊಡಿಸುತ್ತೇನೆ ಎಂಬ ಷರತ್ತು ಬದ್ಧ ಹೇಳಿಕೆ ನೀಡಿರುವುದು ಸರಿಯಲ್ಲ ಎಂದರು.

ಕೇಂದ್ರದಿಂದ ಅನುಮತಿ ಕೊಡಿಸದೇ ಸಬೂಬು ಹೇಳುತ್ತಿರುವ ಅವರು, ತಮಿಳುನಾಡು ಸರ್ಕಾರದ ಒಪ್ಪಿಗೆ ಬೇಕು. ಕಾನೂನು ತೊಡಕುಗಳಿವೆ ಎನ್ನಲಾಗುತ್ತಿದ್ದು, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಂದ ನಂತರ ಮೇಕೆದಾಟು ಯೋಜನೆಗೆ ಸಂಬಂಧಿಸಿದಂತೆ ವಿವರವಾದ ಯೋಜನೆಯ ನೀಲಿ ನಕ್ಷೆಯನ್ನು (ಡಿ.ಪಿ.ಆರ್) ಕಾವೇರಿ ನಿರ್ವಹಣಾ ಪ್ರಾಧಿಕಾರಕ್ಕೆ ನೀಡಿದೆ. ಅಂದರೆ ಮೇಕೆದಾಟು ಯೋಜನೆಗೆ ಕೇಂದ್ರ ಸಂಪನ್ಮೂಲ ಇಲಾಖೆ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ ಎಂದು ಸಿಡಬ್ಲ್ಯೂಎಂಎ ಹೇಳಿದೆ. ಈ ನಿಟ್ಟಿನಲ್ಲಿ ಪರಿಸರ ಹಾಗೂ ಅರಣ್ಯ ಇಲಾಖೆ ಅನುಮತಿ ಪಡೆಯುವತ್ತ ಕಾರ್ಯೋನ್ಮುಖರಾಗಬೇಕೆಂದು ಒತ್ತಾಯಿಸಿದರು.

ಮೇಕೆದಾಟು ಯೋಜನೆಗೆ ಸಂಬಂಧಿಸಿದಂತೆ ಸರ್ಕಾರದ ಕಡೆಯಿಂದ ರಾಜ್ಯದಿಂದ ಕೇಂದ್ರ ಮಂತ್ರಿ ಸ್ಥಾನ ಪಡೆದ ಮಂತ್ರಿಗಳಿಗೆ ಪತ್ರ ವ್ಯವಹಾರ ನಡೆಸಿ, ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರುವಂತೆ ರಾಜ್ಯ ಸರ್ಕಾರಕ್ಕೂ ಮನವಿ ಸಲ್ಲಿಸಲಾಗುವುದು ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯೆ ನೀಡಿದರು.

ಗೋಷ್ಠಿಯಲ್ಲಿ ನಗರಸಭಾ ಸದಸ್ಯ ಶ್ರೀಧರ್, ಮಾಜಿ ಸದಸ್ಯ ಚನ್ನಪ್ಪ ಕೀಲಾರ, ಕಾಂಗ್ರೆಸ್ ಮುಖಂಡರಾದ ಸಿ.ಎಂ.ದ್ಯಾವಪ್ಪ, ಕೀಲಾರ ಕೃಷ್ಣಪ್ಪ, ಶಿವಲಿಂಗಯ್ಯ, ನಾಗೇಶ್ ಉಮ್ಮಡಹಳ್ಳಿ ಇದ್ದರು.

ಒಂದನೇ ಪುಟದಿಂದ

ಶೀಘ್ರವೇ 20 ಸಾವಿರ ಶಿಕ್ಷಕರ ನೇಮಕ

ಮಹಾಂತೇಶ ಕೌಜಲಗಿ ಅವರ ಕಾರ್ಯ ಶ್ಲಾಘನೀಯವಾಗಿದೆ ಎಂದರು. ಶಾಸಕ ಮಹಾಂತೇಶ ಕೌಜಲಗಿ ಅಧ್ಯಕ್ಷತೆವಹಿಸಿ ಮಾತನಾಡಿ, ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ಬೈಲಹೊಂಗಲ ಭಾಗಕ್ಕೆ ಬಂದಿದ್ದು ಖುಷಿ ತಂದಿದೆ ಎಂದರು.

ಡಿಡಿಪಿಐ ಲೀಲಾವತಿ ಹಿರೇಮಠ, ಉಪವಿಭಾಗಾಧಿಕಾರಿ ಪ್ರವೀಣ ಜೈನ್, ತಹಶೀಲ್ದಾರ ಹನುಮಂತ ಶಿರಹಟ್ಟಿ, ಡಿವೈಎಸ್ಪಿ ಡಾ.ವೀರಯ್ಯ ಹಿರೇಮಠ, ಧಾರವಾಡ ಶಾಲಾ ಶಿಕ್ಷಣ ಇಲಾಖೆ ಅಪರ ಆಯುಕ್ತೆ ಜಯಶ್ರೀ ಶಿಂತ್ರಿ, ಪುರಸಭೆ ಅಧ್ಯಕ್ಷ ವಿಜಯ ಬೋಳಣ್ಣವರ, ತಾ.ಪಂ. ಇಒ ಸಂಜೀವ ಜುನ್ನೂರು, ಬಿಇಒ ಎ.ಎನ್. ಪ್ಯಾಟಿ, ಉದ್ಯಮಿ ರಾಜಶೇಖರ ಮೆಟಗುಡ್ಡ, ಪ್ರಾಚಾರ್ಯ ಎಸ್.ಎಂ.ಕುದರಿಮೋತಿ, ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಅಶೋಕ ವಾಲಿ, ಸದಸ್ಯರಾದ ಈರಣ್ಣಾ ಬೆಟಗೇರಿ, ವೀರಣ್ಣಾ ಜವಳಿ, ಗಿರೀಶ ಗಡತರನವರ, ಆರ್.ಕೆ.ಪಾಟೀಲ, ಜಯಶ್ರೀ ಜೊಂಜಾಳೆ, ಪ್ರಕಾಶ ಬಡ್ಲಿ, ಶ್ರೀಶೈಲ ಮೊರಬದ, ಚಂದ್ರಶೇಖರ ಹೊಸೂರ, ಮಲ್ಲೇಶ ಹೊಸಮನಿ, ಅಂಬಿಕಾ ಕೋಟಬಾಗಿ ಇದ್ದರು. ಉಪನ್ಯಾಸಕ ಬಿ.ಎಂ.ಕೊಳವಿ ಪ್ರಾಸ್ತಾವಿಸಿದರು. ಸಬೀಯಾ ಯಕ್ಕುಂಡಿ ಸ್ವಾಗತಿಸಿದರು. ಪ್ರೀಯಾ ಹಿರೇಮಠ ಹಾಗೂ ಕಾವೇರಿ ಭಜಂತ್ರಿ ನಿರೂಪಿಸಿದರು. ಇದೇ ವೇಳೆ ದ್ವಿತೀಯ ಪಿಯುಸಿ ವಿದ್ಯಾರ್ಥಿ ಮಂಜುನಾಥ ಹತ್ತಿ ಸ್ವತಃ ಶಿಕ್ಷಣ ಸಚಿವರ ಭಾವಚಿತ್ರವನ್ನು ಕೈಬರಹದಲ್ಲಿ ಮೂಡಿಸಿದ ಭಾವಚಿತ್ರವನ್ನು ನೀಡಿ, ಎಲ್ಲರ ಗಮನ ಸೆಳೆದನು.

ಸಚಿವರು ಬೈಲಹೊಂಗಲ ಗುರುಭವನ ಕಟ್ಟಡ ನಿರ್ಮಾಣಕ್ಕೆ ಅಡಿಗಲ್ಲು, ನಯಾನಗರ, ವಕ್ಕುಂದ ಗ್ರಾಮಗಳ ಶಾಲೆಗಳಿಗೆ ಭೇಟಿ ನೀಡಿ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಿದರು.

ಶೌಚಾಲಯಕ್ಕೆ ಹಾಕಿ ಫ್ಲಷ್ ಮಾಡಿ!

ಕೈಗೊಳ್ಳಲಾಗಿದೆ ಎಂದು ಸಿಡಿಎಸ್‌ಸಿಒ ತಿಳಿಸಿದೆ. ಅವಧಿ ಮುಗಿದ ಔಷಧಗಳನ್ನು ಸರಿಯಾಗಿ ವಿಲೇವಾರಿ ಮಾಡದಿದ್ದರೆ, ಮನುಷ್ಯರು, ಪ್ರಾಣಿ ಹಾಗೂ ಪರಿಸರದ ಮೇಲೆ ಹಾನಿ ಆಗಲಿದೆ. ಅಲ್ಲದೇ, ನೀರನ್ನೂ ಕಲುಷಿತಗೊಳಿಸುವ ಸಾಧ್ಯತೆಯಿದ್ದು, ವನ್ಯಜೀವಿಗಳ ಮೇಲೂ ವ್ಯತಿರಿಕ್ತ ಪರಿಣಾಮ ಬೀರಲಿದೆ. ತ್ಯಾಜ್ಯ ಸಂಗ್ರಹಿಸುವವರು ಅಥವಾ ಮಕ್ಕಳ ಕೈಗೆ ಸಿಕ್ಕಿದರೆ ಅಪಾಯದ ಸಾಧ್ಯತೆ ಹೆಚ್ಚು. ಅವುಗಳನ್ನು ಪ್ರತ್ಯೇಕಿಸುವ ವೇಳೆ ಅವುಗಳು ಮಾರುಕಟ್ಟೆ ಪ್ರವೇಶಿಸಿ, ಮರು ಮಾರಾಟವಾಗುವ ಸಾಧ್ಯತೆಯಿದೆ ಎಂದು ಎಚ್ಚರಿಕೆ ನೀಡಿದೆ.

ಕಾರ್ಯಾಚರಣೆ: ಐವರ ಬಂಧನ

ಪ್ರದೇಶಕ್ಕೆ ಬಂದು ಪರಿಶೀಲಿಸಿ, ಮದ್ಯ ಸೇವಿಸುತ್ತಿದ್ದ ನಾಲ್ವರನ್ನು ಬಂಧಿಸಿ ಕರೆದೊಯ್ದಿದ್ದಾರೆ. ಪೊಲೀಸರ ಕಾರ್ಯಾಚರಣೆ ಮುಂದುವರೆಸಬೇಕು. ಒಂದು ದಿನಕ್ಕೆ ಮಾತ್ರ ತಪಾಸಣೆ ಸೀಮಿತವಾಗಬಾರದು. ಅದರಲ್ಲೂ ಶನಿವಾರ, ಭಾನುವಾರ ಕುಡುಕರ ಹಾವಳಿ ಇಲ್ಲಿ ಹೆಚ್ಚಾಗಿದೆ. ಅದನ್ನು ತಡೆಗಟ್ಟಬೇಕು ಎಂದು ಆಗ್ರಹಿಸಿದ್ದಾರೆ.

ಪ್ರಭಾವಿಗಳಿಗೆ ಮಣಿಯಬಾರದು: ಹಿನ್ನೀರಿನಲ್ಲಿ ಐಷಾರಾಮಿ ಕಾರು ಮತ್ತು ಜೀಪ್ ಚಾಲನೆ ಮಾಡುವ ದುಸ್ಸಾಹಸಕ್ಕಿಳಿಯುವವರ ವಿರುದ್ಧವೂ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು. ಜನಪ್ರತಿನಿಧಿಗಳಿಂದ ಕರೆ ಮಾಡಿಸಿ, ದರ್ಪ ಮೆರೆಯುವವರ ಸಂಖ್ಯೆಯೂ ಹೆಚ್ಚಾಗುತ್ತಿದೆ. ಅಂತಹವರಿಗೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳಬೇಕು. ಪೊಲೀಸರು ಒತ್ತಡಕ್ಕೆ ಮಣಿಯದೇ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ರೆಸಾರ್ಟ್‌ಗಳಿಂದಲೂ ಪ್ರಚೋದನೆ: ಹಿನ್ನೀರಿನ ಸಮೀಪವೇ ಹಲವು ರೆಸಾರ್ಟ್‌ಗಳು ತಲೆ ಎತ್ತಿವೆ. ಕೇವಲ ಒಂದಕ್ಕೆ ಮಾತ್ರ ಅನುಮತಿ ಇದ್ದು, ಉಳಿದ ರೆಸಾರ್ಟ್‌ಗಳಿಗೆ ಅನುಮತಿ ನೀಡಿಲ್ಲ. ಆದರೂ, ಗ್ರಾ.ಪಂ. ಪಿಡಿಒ ಸೇರಿದಂತೆ ಅಧಿಕಾರಿಗಳು ಏನೂ ಗೊತ್ತಿಲ್ಲದಂತೆ ಸುಮ್ಮನಿದ್ದಾರೆ. ಅಬಕಾರಿ ಅಧಿಕಾರಿಗಳು ರೆಸಾರ್ಟ್‌ಗಳಲ್ಲಿ ದಾಸ್ತಾನು ಮಾಡಿ, ಗ್ರಾಹಕರಿಗೆ ಅಕ್ರಮವಾಗಿ ಮದ್ಯ ಸರಬರಾಜು ಮಾಡಲಾಗುತ್ತಿರುವುದರ ಬಗ್ಗೆ ಪರಿಶೀಲಿಸಬೇಕು. ಕೆಲವೊಮ್ಮೆ ರೆಸಾರ್ಟ್‌ಗಳಿಂದ ಕಂಠಪೂರ್ತಿ ಕುಡಿದು ತೂರಾಡುತ್ತ ಹೊರಗೆ ಬರುವ ಯುವತಿಯರು ಸ್ಥಳೀಯ ಗ್ರಾಮಸ್ಥರೊಂದಿಗೆ ಜಗಳವಾಡುವುದು, ಕಿರಿಕಿರಿ ಉಂಟು ಮಾಡುವುದು ಜಾಸ್ತಿಯಾಗಿದೆ. ಇದರ ಜೊತೆಗೆ ಅನೈತಿಕ ಚಟುವಟಿಕೆಗಳು ನಡೆಯುತ್ತಿರುವ ಬಗ್ಗೆ ವ್ಯಾಪಕ ದೂರಿದೆ. ಇದುವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

ಪರಿಸರವಾದಿಗಳೆಲ್ಲಿ: ಒಂದೆಡೆ ಪ್ರವಾಸಿಗರು, ಪುಂಡ–ಪೋಕರಿಗಳ ಹಾವಳಿಯಿಂದ ಹಿನ್ನೀರಿನ ಪ್ರದೇಶ ಮಲೀನವಾಗುತ್ತಿದ್ದರೆ, ಮತ್ತೊಂದೆಡೆ ಅಕ್ರಮ ರೆಸಾರ್ಟ್‌ಗಳ ಒಳಚರಂಡಿ ಮಲಿನ ನೀರು ಹಿನ್ನೀರಿಗೆ ಸೇರುತ್ತಿದೆ. ಇದರ ಬಗ್ಗೆ ಯಾವೊಬ್ಬ ರೈತ ನಾಯಕ, ಪರಿಸರವಾದಿಯೂ ಚಕಾರ ಎತ್ತುತ್ತಿಲ್ಲ ಎಂದು ಗ್ರಾಮಸ್ಥರು ವಿಷಾದಿಸಿದ್ದಾರೆ.

ಮಲೆ ಮಹದೇಶ್ವರ ವನ್ಯಧಾಮ ಹುಲಿ ಸಂರಕ್ಷಿತ ಪ್ರದೇಶವೆಂದು ಘೋಷಿಸಲು ಚಿಂತನೆ

ಸ್ಥಳೀಯರ ಅಭಿಪ್ರಾಯ ಸಂಗ್ರಹಿಸಿ ಪ್ರಸ್ತಾವಣೆ ಸಲ್ಲಿಸಲು ಅಧಿಕಾರಿಗಳಿಗೆ ಅರಣ್ಯ ಸಚಿವ ಈಶ್ವರ ಖಂಡ್ರೆ ಸೂಚನೆ

● ಕೇಂದ್ರಿಕೃತ ಕಮಾಂಡ್ ಸೆಂಟರ್ ● ಖಾಲಿ ಹುದ್ದೆಗಳ ಭರ್ತಿಗೆ ಸೂಚನೆ ● ಕಾಡಂಚಿನ ಜನರ ಜೊತೆ ಸೌಹಾರ್ದ ಸಂಬಂಧವಿರಲಿ



ಅರಣ್ಯ ಸಚಿವ ಈಶ್ವರ್ ಖಂಡ್ರೆ ಮಂಗಳವಾರ ಬೆಂಗಳೂರಲ್ಲಿ ಇಲಾಖಾ ಅಧಿಕಾರಿಗಳ ಸಭೆ ನಡೆಸಿದರು.

ಬೆಂಗಳೂರು, ಜು.8(ಎಂಟಿವೈ)– ಮಲೆ ಮಹದೇಶ್ವರ ವನ್ಯಧಾಮದಲ್ಲಿ ಹುಲಿಗಳ ಸಂತತಿ ಹೆಚ್ಚಾಗುತ್ತಿದ್ದು, ಈ ಅರಣ್ಯ ಪ್ರದೇಶವನ್ನು ಹುಲಿ ಸಂರಕ್ಷಿತ ಪ್ರದೇಶವೆಂದು ಘೋಷಿಸಲು ಚಿಂತನೆ ನಡೆಸಲಾಗಿದ್ದು, ಸ್ಥಳೀಯರ ಅಭಿಪ್ರಾಯ ಸಂಗ್ರಹಿಸಿ ಪ್ರಸ್ತಾವಣೆ ಸಲ್ಲಿಸುವಂತೆ ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಸೂಚಿಸಿದ್ದಾರೆ.

ಬೆಂಗಳೂರಿನ ವಿಕಾಸಸೌಧದ ತಮ್ಮ ಕಚೇರಿಯಲ್ಲಿ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳು, ಮುಖ್ಯ ವನ್ಯಜೀವಿ ಪರಿಪಾಲಕರು ಸೇರಿದಂತೆ ಇಲಾಖೆಯ ಉನ್ನತಾಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಮಲೆ ಮಹದೇಶ್ವರ ವನ್ಯಧಾಮವನ್ನು ಹುಲಿ ಸಂರಕ್ಷಿತ ಪ್ರದೇಶವೆಂದು ಘೋಷಣೆ ಮಾಡಲು ಕ್ರಮ ಕೈಗೊಳ್ಳುವಂತೆ ಹಾಗೂ ಎಲ್ಲ ಬಾಧ್ಯಸ್ಥರ ಸಭೆ ಕರೆದು ಚರ್ಚಿಸಿ, ಪ್ರಸ್ತಾವನೆ ಸಲ್ಲಿಸುವಂತೆ ತಿಳಿಸಿದರು. ರಾಜ್ಯದಲ್ಲಿ ವನ್ಯಜೀವಿಗಳ ಅಸಹಜ ಸಾವನ್ನು ನಿಯಂತ್ರಿಸಲು ಮತ್ತು ವನ್ಯ ಮೃಗಗಳ ದಾಳಿಯಿಂದ ಜೀವಹಾನಿ ಆಗುವುದನ್ನು ತಡೆಯಲು ಎಲ್ಲ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವುದು, ಆಯಾ ವಲಯದಲ್ಲಿ ಅಧಿಕಾರಿ, ಸಿಬ್ಬಂದಿಗೆ ಹೊಣೆಗಾರಿಕೆ ನಿಗದಿಪಡಿಸುವಂತೆ ನಿರ್ದೇಶನ ನೀಡಿದರು.

ಕೇಂದ್ರೀಕೃತ ಕಮಾಂಡ್ ಸೆಂಟರ್: ರಾಜ್ಯದಲ್ಲಿ ಸುಮಾರು 40 ಸಾವಿರ ಚದರ ಕಿಲೋ ಮೀಟರ್ ಅರಣ್ಯ ಪ್ರದೇಶವಿದ್ದು, ಇದನ್ನು ಭೌತಿಕವಾಗಿ ಕಾವಲು ಕಾಯುವುದು ಕಷ್ಟಸಾಧ್ಯ. ಈ ನಿಟ್ಟಿನಲ್ಲಿ ವನ್ಯಜೀವಿಗಳ ಕಳ್ಳಬೇಟೆ ಮತ್ತು ಅರಣ್ಯ ಒತ್ತುವರಿ, ಮರಗಳ ಅಕ್ರಮ ಕಡಿತಲೆ ಆಗದಂತೆ ನಿಗ್ರಹಿಸಲು ಕೃತಕ ಬುದ್ಧಿಮತ್ತೆ (ಎಐ), ಡ್ರೋನ್ ಕ್ಯಾಮರಾ, ಕಾಡಿನಂಚಿನಲ್ಲಿ ಸಿಸಿಟಿವಿ ಕ್ಯಾಮರಾ ಅಳವಡಿಸುವಂತೆ ಸೂಚಿಸಿದ ಅವರು ಈ ಎಲ್ಲ ಕ್ಯಾಮರಾಗಳ ದೃಶ್ಯಗಳ ಆಧಾರದ ಮೇಲೆ ವನ್ಯಮೃಗ ಮತ್ತು ಕಳ್ಳಬೇಟೆಗಾರರ ಚಲನ–ವಲನದ ಬಗ್ಗೆ ನಿಗಾ ಇಡಲು ಕೇಂದ್ರೀಕೃತ ಕಮಾಂಡ್ ಸೆಂಟರ್ ಸ್ಥಾಪಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ತಿಳಿಸಿದರು.

ಖಾಲಿ ಹುದ್ದೆಗಳ ಭರ್ತಿಗೆ ಸೂಚನೆ: ಅರಣ್ಯ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಪಟ್ಟಿ ಮಾಡಿ, ನೇಮಕಾತಿಗೆ ಪ್ರಕ್ರಿಯೆ ಆರಂಭಿಸಲು ಮತ್ತು ತತ್‌ಕ್ಷಣ ಅಗತ್ಯವಿರುವ ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದಲ್ಲಿ ಕೂಡಲೇ ನೇಮಕಾತಿ ಮಾಡಿಕೊಳ್ಳಲು ಮತ್ತು ವನ, ವನ್ಯಜೀವಿ ಸಂರಕ್ಷಣೆಗೆ ಅಗತ್ಯವಾದ ವಾಹನ, ಉಪಕರಣಗಳ ಖರೀದಿಗೆ ಪ್ರಸ್ತಾವನೆ ಸಲ್ಲಿಸಲು ತಿಳಿಸಿದರು.

ಸೌಹಾರ್ದ ಸಂಬಂಧ: ಕಾಡಿನಂಚಿನ ಗ್ರಾಮಗಳ ಜನರೊಂದಿಗೆ ಅರಣ್ಯಾಧಿಕಾರಿಗಳು ಸೌಹಾರ್ದಯುತ ಸಂಬಂಧ ಹೊಂದಬೇಕು. ಜನರಿಗೆ ಅರಣ್ಯ ಮತ್ತು ವನ್ಯಜೀವಿಗಳ ಮಹತ್ವ ತಿಳಿಸಿಕೊಡಬೇಕು. ಕಾಡಿನಂಚಿನ ಜನರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಬೇಕು, ಕೌಶಲ್ಯ ತರಬೇತಿ ಕೊಡಿಸಬೇಕು. ಆಗ ಅರಣ್ಯ ಮತ್ತು ವನ್ಯಜೀವಿ ರಕ್ಷಣೆಗೆ ಜನರೇ ಮುಂದಾಗುತ್ತಾರೆ. ಈ ರೀತಿಯ ವಾತಾವರಣ ಸೃಷ್ಟಿಸಲು ಕ್ರಮ ವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಗಾಜಾದಲ್ಲಿ ಉಗ್ರಗಾಮಿಗಳ ದಾಳಿ 5 ಇಸ್ರೇಲಿ ಸೈನಿಕರ ಹತ್ಯೆ

51 ಪ್ಯಾಲೆಸ್ಟೀನಿಯನ್ನರನ್ನು ಕೊಂದು ಸೇಡು ತೀರಿಸಿಕೊಂಡ ಇಸ್ರೇಲ್!

ಇಸ್ರೇಲ್: ಉತ್ತರ ಗಾಜಾ ಪಟ್ಟಿಯಲ್ಲಿ ನಡೆದ ದಾಳಿಯಲ್ಲಿ ಐವರು ಇಸ್ರೇಲಿ ಸೈನಿಕರು ಸಾವನ್ನಪ್ಪಿದ್ದಾರೆ ಎಂದು ಇಸ್ರೇಲ್ ಸೇನೆ ಮಂಗಳವಾರ ತಿಳಿಸಿದೆ. ಇತ್ತ ಪ್ಯಾಲೆಸ್ಟೀನಿಯನ್ ಪ್ರದೇಶದ ಆರೋಗ್ಯ ಅಧಿಕಾರಿಗಳು ಇಸ್ರೇಲ್ ದಾಳಿಯಲ್ಲಿ 51 ಜನರು ಸಾವನ್ನಪ್ಪಿದ್ದಾರೆ ಎಂದು ಹೇಳಿದ್ದಾರೆ.

ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ಗಾಜಾ ಹೋರಾಟವನ್ನು ನಿಲ್ಲಿಸಲು ಕದನ ವಿರಾಮ ಯೋಜನೆಯ ಕುರಿತು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೊಂದಿಗೆ ಮಾತುಕತೆ ನಡೆಸಲು ಶ್ವೇತಭವನಕ್ಕೆ ಭೇಟಿ ನೀಡುತ್ತಿದ್ದಾಗ ಈ ರಕ್ತಪಾತ ಸಂಭವಿಸಿದೆ. ಯಾವುದೇ ಪ್ರಗತಿಯ ಘೋಷಣೆ ಮಾಡದಿದ್ದರೂ, ಒಪ್ಪಂದದತ್ತ ಪ್ರಗತಿಯ ಲಕ್ಷಣಗಳು ಕಂಡುಬಂದಿವೆ.

ಇಸ್ರೇಲ್‌ನಲ್ಲಿ ನಡೆದ ಸಮೀಕ್ಷೆಗಳಲ್ಲಿ 21 ತಿಂಗಳ ಯುದ್ಧವನ್ನು ಕೊನೆಗೊಳಿಸಲು ವ್ಯಾಪಕ ಬೆಂಬಲ ವ್ಯಕ್ತವಾಗಿದ್ದು, ಇತ್ತೀಚಿನ ಸೈನಿಕರ ಸಾವುಗಳು ನೆತನ್ಯಾಹು ಒಪ್ಪಂದ ಮಾಡಿಕೊಳ್ಳುವಂತೆ ಒತ್ತಡ ಉಂಟುಮಾಡುವ ಸಾಧ್ಯತೆ ಇದೆ.

ಶಕ್ತಿ ಯೋಜನೆ ಮೈಲಿಗಲ್ಲು

500 ಕೋಟಿ ತಲುಪಲಿರುವ ಒಟ್ಟು ಮಹಿಳಾ ಪ್ರಯಾಣಿಕರ ಸಂಖ್ಯೆ

▶ ರಾಜ್ಯ ಸಾರಿಗೆ ಇಲಾಖೆಯ ಇತಿಹಾಸದಲ್ಲೇ ಹೊಸ ರೆಕಾರ್ಡ್
▶ 500ನೇ ಟಿಕೆಟ್ ಪಡೆದ ಮಹಿಳೆಗೆ ಲಕ್ಕಿ ಬಹುಮಾನ



ಬೆಂಗಳೂರು: ಕಾಂಗ್ರೆಸ್‌ನ ಶಕ್ತಿ ಯೋಜನೆಯ ಪರಿಣಾಮದಿಂದಾಗಿ ಎರಡೇ ವರ್ಷದಲ್ಲಿ ಉಚಿತ ಬಸ್‌ಗಳಲ್ಲಿ ಪ್ರಯಾಣಿಸಿದ ಮಹಿಳೆಯರ ಸಂಖ್ಯೆ ಒಟ್ಟು 500 ಕೋಟಿಗೆ ತಲುಪಲಿದ್ದು, ಆ 500ನೇ ಟಿಕೆಟ್ ಪಡೆಯಲಿರುವ ಮಹಿಳೆಗೆ ಲಕ್ಕಿ ಬಹುಮಾನ ಸಿಗಲಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದ್ದಾರೆ.

2023ರ ಕರ್ನಾಟಕ ವಿಧಾನಸಭಾ ಚುನಾವಣೆಗೂ ಮುನ್ನ ಕಾಂಗ್ರೆಸ್ ಸರ್ಕಾರ ನೀಡಿದ ಭರವಸೆಯಂತೆ ರಾಜ್ಯದಲ್ಲಿ ಪಂಚ ಗ್ಯಾರಂಟಿ ಯೋಜನೆಗಳು ಜಾರಿಯಾಗಿವೆ. ಈ ಗ್ಯಾರಂಟಿಗಳಲ್ಲಿ ಒಂದಾದ ಶಕ್ತಿ ಯೋಜನೆಗೆ ಮಹಿಳೆಯರಿಂದ ಭರ್ಜರಿ ರೆಸ್ಪಾನ್ಸ್ ದೊರೆತಿದ್ದು, ಇದೀಗ ಶಕ್ತಿ ಯೋಜನೆ ಹೊಸ ಮೈಲುಗಲ್ಲು ಬರೆಯಲು ಮುಂದಾಗಿದೆ. ಶಕ್ತಿ ಯೋಜನೆ ಜಾರಿಯಾದ ಎರಡೇ ವರ್ಷದಲ್ಲಿ 500 ಕೋಟಿ ಮಹಿಳೆಯರು ಸರ್ಕಾರಿ ಬಸ್ಸುಗಳಲ್ಲಿ ಉಚಿತವಾಗಿ ಪ್ರಯಾಣಿಸಿ ದಾಖಲೆ ಬರೆಯಲಿದ್ದಾರೆ. 2023ರ ಜೂನ್ 11ರಂದು ಆರಂಭವಾಗಿದ್ದ ಈ ಯೋಜನೆಗೆ ಮಹಿಳೆಯರು ಬಹುಪರಾಕ್ ಎಂದಿದ್ದು, ಕೆಎಸ್‌ಆರ್‌ಟಿಸಿ ಸೇರಿದಂತೆ ನಾಲ್ಕು ಸಾರಿಗೆ ನಿಗಮಗಳ ಬಸ್‌ಗಳಲ್ಲಿ ಈಗ ಬರೋಬ್ಬರಿ 493 ಕೋಟಿ ಮಹಿಳಾ ಪ್ರಯಾಣಿಕರು ಒಂದು ರೂಪಾಯಿ ಹಣ ನೀಡದೆ ಉಚಿತವಾಗಿ ಪ್ರಯಾಣಿಸಿದ್ದಾರೆ.

ಪ್ರತಿದಿನ ನಾಲ್ಕು ಸಾರಿಗೆ ನಿಗಮದ ಬಸ್‌ಗಳಲ್ಲಿ 70 ರಿಂದ 75 ಲಕ್ಷ ಮಹಿಳೆಯರು ಫ್ರೀಯಾಗಿ ಸಂಚರಿಸುತ್ತಿದ್ದಾರೆ. ಭಾನುವಾರದವರೆಗಿನ ಅಂಕಿ ಅಂಶಗಳನ್ನು ನೋಡುವುದಾದರೆ ಸುಮಾರು 494 ಕೋಟಿಯಷ್ಟು ಮಹಿಳೆಯರು ಸಂಚರಿಸಿದ್ದು, 12,511 ಕೋಟಿ ರೂ. ಟಿಕೆಟ್ ಮೌಲ್ಯವಾಗಿದೆ. ಬರುವ ಸೋಮವಾರಕ್ಕೆ ಶಕ್ತಿ ಯೋಜನೆ 500 ಕೋಟಿ ಮಹಿಳೆಯರ ಉಚಿತ ಪ್ರಯಾಣದ ಗುರಿ ತಲುಪಿ, ರಾಜ್ಯ ಸಾರಿಗೆ ಇಲಾಖೆಯ ಇತಿಹಾಸದಲ್ಲೇ ಹೊಸ ರೆಕಾರ್ಡ್ ನಿರ್ಮಿಸಲಿದೆ. ಇನ್ನೂ ಈ 500 ಕೋಟಿಯ ಸಂಭ್ರಮಾಚರಣೆಯನ್ನು ಅದ್ಧೂರಿಯಾಗಿ ಆಚರಿಸಲು ಸಾರಿಗೆ ಇಲಾಖೆ ಸಿದ್ಧತೆ ನಡೆಸಿದೆ ಪ್ರಮುಖವಾಗಿ 500ನೇ ಟಿಕೆಟ್ ಪಡೆದ ಮಹಿಳೆಗೆ ಲಕ್ಕಿ ಪ್ರೈಸ್ ಸಿಗಲಿದೆ. ಈ ಶಕ್ತಿಯೋತ್ಸವವನ್ನು ಎಲ್ಲಾ ಜಿಲ್ಲೆ ಹಾಗೂ ತಾಲ್ಲೂಕು ಮಟ್ಟದಲ್ಲಿ ಗ್ಯಾರಂಟಿ ಸಮಿತಿ ಹಾಗೂ ಸಾರಿಗೆ ಇಲಾಖೆಯು ಆಚರಿಸಲಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದ್ದಾರೆ. ಇನ್ನೂ ಈ ಶಕ್ತಿ ಯೋಜನೆಯಿಂದ ಧಾರ್ಮಿಕ ಕ್ಷೇತ್ರಗಳತ್ತ ಭಕ್ತಾದಿಗಳು ಹರಿದು ಬರುತ್ತಿದ್ದಾರೆ.



500 ಕೋಟಿ ಮಹಿಳೆಯರ ಉಚಿತ ಪ್ರಯಾಣದ ಗುರಿ ತಲುಪಿ, ರಾಜ್ಯ ಸಾರಿಗೆ ಇಲಾಖೆಯ ಇತಿಹಾಸದಲ್ಲೇ ಹೊಸ ರೆಕಾರ್ಡ್ ನಿರ್ಮಿಸಲಿದೆ.

244 ಕೋಟಿ ರೂ ಬಾಕಿ ಹಣ ಬಿಡುಗಡೆ: ಅನ್ನಭಾಗ್ಯ ಪಡಿತರ ಸಾಗಾಣಿಕೆ ಟ್ರಕ್ ಮುಷ್ಕರ ಅಂತ್ಯ



ಬೆಂಗಳೂರು: ಅನ್ನಭಾಗ್ಯ ಪಡಿತರ ಸಾಗಾಣಿಕೆ ಲಾರಿ ಮುಷ್ಕರಕ್ಕೆ ಮಣಿದ ಸರ್ಕಾರ 2025 ಫೆಬ್ರವರಿಯಿಂದ ಮೇ ತಿಂಗಳವರೆಗಿನ ಬಾಕಿ ಹಣ ರೂ.244 ಕೋಟಿಯನ್ನು ರಾಜ್ಯ ಸರ್ಕಾರ ಬಿಡುಗಡೆ ಮಾಡಿ ಆದೇಶ ಹೊರಡಿಸಿದೆ. ಈ ಹಿಂದೆ ರೂ. 2,082.99 ಕೋಟಿ ಹಣ ಬಿಡುಗಡೆ ಮಾಡಲಾಗಿತ್ತು. ಇದೀಗ ಹೆಚ್ಚುವರಿಯಾಗಿ ಇದು ನಾಲ್ಕು ತಿಂಗಳ ಅವಧಿಗೆ ಪ್ರತಿ ಫಲಾನುಭವಿಗೆ ಹೆಚ್ಚುವರಿ ಐದು ಕೆಜಿ ಅಕ್ಕಿ ಮತ್ತಿತರ ಉದ್ದೇಶಗಳಿಗೆ ಆದ ವೆಚ್ಚಕ್ಕಾಗಿ ರೂ. 244 ಕೋಟಿ ಬಿಡು ಗಡೆ ಮಾಡಲಾಗಿದೆ ಎಂದು ಆದೇಶದಲ್ಲಿ ಸರ್ಕಾರ ತಿಳಿಸಿದೆ.

ನಾಲ್ಕು ತಿಂಗಳ ಪಡಿತರ ಆಹಾರ ಧಾನ್ಯ ಸಾಗಾಣಿಕೆ ವೆಚ್ಚಕ್ಕಾಗಿ ಲಾರಿ ಮಾಲೀಕರು ಮಂಗಳವಾರದಿಂದ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲು ನಿರ್ಧರಿಸಿದ್ದರು. ಬಾಕಿ ಹಣಕ್ಕಾಗಿ ಅನಿರ್ದಿಷ್ಟಾವಧಿ ಲಾರಿ ಮುಷ್ಕರವನ್ನು ರಾಜ್ಯ ಲಾರಿ ಮಾಲೀಕರ ಸಂಘದ ಅಧ್ಯಕ್ಷ ಜಿ.ಆರ್. ಷಣ್ಮುಗಪ್ಪ ಮಂಗಳವಾರ ಘೋಷಿಸಿದ್ದರು. ಇದರಿಂದ ಬೆದರಿದ ಸರ್ಕಾರ ಬಾಕಿ ಹಣ ಬಿಡುಗಡೆ ಮಾಡಿದೆ.

ಈ ಹಿಂದೆ ಬಿಡುಗಡೆಯಾಗಿದ್ದ 21.79 ಕೋಟಿ ರೂ. ರಾಜ್ಯ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತದಲ್ಲಿ ಬಳಕೆಯಾಗದೆ ಉಳಿದಿದ್ದು, ಪ್ರಾಸಂಗಿಕ ವೆಚ್ಚಗಳನ್ನು ಪೂರೈಸಲು ಕೊರತೆಯಾಗಿದೆ ಎಂದು ಆದೇಶದಲ್ಲಿ ಹೇಳಲಾಗಿದೆ. ಆದಾಗ್ಯೂ, ರೂ. 244.10 ಕೋಟಿ ಪಡಿತರ ಸಾಗಾಟ ವೆಚ್ಚ ಬಿಡುಗಡೆಗೆ ಸೋಮವಾರ ಸಮ್ಮತಿಸಿದೆ.

ಈ ಹಣವನ್ನು 2025–26 ರ ಆರ್ಥಿಕ ವರ್ಷಕ್ಕೆ ಅನ್ನಭಾಗ್ಯ ಯೋಜನೆ ಯಡಿ ವಿತರಿಸಲಾಗುವುದು. ಹಣವನ್ನು ಖಜಾನೆ–2 ಹಣಕಾಸು ನಿರ್ವಹಣಾ ಸಾಫ್ಟ್‌ವೇರ್ ಸಿಸ್ಟಮ್ ಮೂಲಕ ನೇರವಾಗಿ ಆಡಳಿತ ಇಲಾಖೆಯಿಂದ ಮುಖ್ಯ ಲೆಕ್ಕಾಧಿಕಾರಿ, ಜಿಲ್ಲಾ ಪಂಚಾಯತ್, ಬೆಂಗಳೂರು ನಗರ ಜಿಲ್ಲೆಗೆ ರವಾನಿಸಲಾಗುತ್ತದೆ ಎಂದು ಸರ್ಕಾರದ ಆದೇಶದಲ್ಲಿ ತಿಳಿಸಲಾಗಿದೆ.

ಯಾವುದೇ ಹಣದ ಕೊರತೆ ಇಲ್ಲ ಎಂದು ಹೇಳಿರುವ ಹಿರಿಯ ಸರ್ಕಾರಿ ಅಧಿಕಾರಿಯೊಬ್ಬರು ರೂ. 199 ಕೋಟಿಯನ್ನು ಈಗಾಗಲೇ ಬಿಡುಗಡೆ ಮಾಡಲಾಗಿದ್ದು, ಮುಂದಿನ ಎರಡು ದಿನಗಳಲ್ಲಿ ಈ ಹಣವನ್ನು ಬಿಡುಗಡೆ ಮಾಡಲಾಗುವುದು ಎಂದು ತಿಳಿಸಿದ್ದಾರೆ.

ಮೈಸೂರು ಮಿತ್ರ

ಎಂಡಿಎ ಕಾಯ್ದೆಗೆ ನಿಯಮಾವಳಿ ರೂಪಿಸಲು ಸಮಿತಿ ರಚನೆ



ಮೈಸೂರು,ಜು.8(ಆರ್‌ಕೆ)– ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ) ಕಾಯ್ದೆ 2024ಕ್ಕೆ ಅಗತ್ಯ ನಿಯಮಗಳನ್ನು ರೂಪಿಸಲು ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತರ ಅಧ್ಯಕ್ಷತೆಯಲ್ಲಿ ಅಧಿಕಾರಿಗಳ ಸಮಿತಿಯೊಂದನ್ನು ಸರ್ಕಾರ ರಚಿಸಿದೆ.

ಈ ಸಂಬಂಧ ನಗರಾಭಿವೃದ್ಧಿ ಇಲಾಖೆ ಅಧೀನ ಕಾರ್ಯದರ್ಶಿ ಕೆ.ಲತಾ ಅವರು ಜೂನ್ 7ರಂದು ಆದೇಶ ಹೊರಡಿಸಿದ್ದು, ಸಮಿತಿಯು ಸರ್ಕಾರಕ್ಕೆ ಸೂಕ್ತ ಶಿಫಾರಸು ಮತ್ತು ವರದಿ ನೀಡುವಂತೆ ಸೂಚಿಸಿದ್ದಾರೆ. ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರನ್ನು ಸಮಿತಿ ಉಪಾಧ್ಯಕ್ಷರಾಗಿ ನಿಯೋಜಿಸಲಾಗಿದೆ.

ಸಮಿತಿ ಸದಸ್ಯರನ್ನಾಗಿ ನಗರಾಭಿವೃದ್ಧಿ ಇಲಾಖೆ ಜಂಟಿ ನಿರ್ದೇಶಕಿ ವಾಸಂತಿ, ನಗರ ಮತ್ತು ಗ್ರಾಮಾಂತರ ಯೋಜನಾ ಮೈಸೂರು ವಿಭಾಗದ ಜಂಟಿ ನಿರ್ದೇಶಕಿ ಪಂಕಜಾ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ನಗರ–ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕ ಹನುಮಂತರೆಡ್ಡಿ, ಉಪನಿರ್ದೇಶಕ ಎಸ್.ವಿಶ್ವ, ನಗರಾಭಿವೃದ್ಧಿ ಇಲಾಖೆ ಉಪನಿರ್ದೇಶಕ ಸಿ.ಎನ್.ರಾಘವೇಂದ್ರ, ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ಉಪನಿರ್ದೇಶಕ ಪ್ರಜ್ಞಾಪ್ರಕಾಶ್, ಹುಬ್ಬಳ್ಳಿ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರು ಹಾಗೂ ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ)ದ ಆಯುಕ್ತರನ್ನು ನೇಮಿಸಲಾಗಿದೆ.


ಎಂಡಿಎ ಅಧ್ಯಕ್ಷರು, ಸದಸ್ಯರ ನೇಮಕದ ಷರತ್ತುಗಳ ಬಗ್ಗೆ ನಿಯಮ ರಚಿಸುವುದು, ಟೆಂಡರ್ ಅಂಗೀಕಾರ, ಸ್ಕೀಂ ಮಂಜೂರಾತಿ, ತೆರಿಗೆ ದರ ನಿರ್ಧಾರಣೆ, ಪ್ರಾಧಿಕಾರದ ಸ್ವತ್ತು ಮಾರಾಟ ಅಥವಾ ವರ್ಗಾಯಿಸುವುದು, ಸಾಲ ಪಡೆಯುವುದು, ಲೆಕ್ಕ ಪತ್ರ ಪುಸ್ತಕ, ರಿಜಿಸ್ಟರ್‌ಗಳ ನಿರ್ವಹಣೆ, ಪಾರಂಪರಿಕ ಕಟ್ಟಡಗಳ ಸಂರಕ್ಷಣಾ ಆಯೋಗವು ಚಲಾಯಿಸಬೇಕಾದ ಅಧಿಕಾರಗಳು, ಪ್ರಾಧಿಕಾರವನ್ನು ರದ್ದುಗೊಳಿಸುವ ಮತ್ತು ಪುನರ್‌ರಚಿಸುವುದರ ಬಗ್ಗೆ ನಿಯಮಗಳನ್ನು ರಚಿಸುವುದು ಸಮಿತಿಯ ಜವಾಬ್ದಾರಿಯಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಚಾಮರಾಜನಗರದಲ್ಲಿ ವಾಲ್ಮೀಕಿ, ಭಗೀರಥ ಮಹರ್ಷಿ, ಕನಕದಾಸರ ಪುತ್ಥಳಿ


ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ಹೆಗಲಿಗೆ ಕೆತ್ತನೆ ಕಾರ್ಯ

ಮೈಸೂರು, ಜು.8(ಜಿಎ)–ಚಾಮರಾಜನಗರ ಜಿಲ್ಲಾ ಆಡಳಿತ ಸಂಕೀರ್ಣ ಆವರಣದಲ್ಲಿ 1.50 ಕೋಟಿ ರೂ. ವೆಚ್ಚದಲ್ಲಿ ಮಹರ್ಷಿ ವಾಲ್ಮೀಕಿ, ಭಗೀರಥ ಮಹರ್ಷಿ ಮತ್ತು ಕನಕದಾಸರ ಪುತ್ಥಳಿಗಳನ್ನು ನಿರ್ಮಿಸಲು ಜಿಲ್ಲಾಡಳಿತ ನಿರ್ಧರಿಸಿದ್ದು, ಈಗಾಗಲೇ ಶಿಲ್ಪಿ ಅರುಣ್ ಯೋಗಿರಾಜ್‌ಗೆ ಕೆತ್ತನೆ ಕಾರ್ಯದ ಜವಾಬ್ದಾರಿ ನೀಡಿದೆ.


ಅಯೋಧ್ಯೆಯ ಬಾಲರಾಮನ ಕೆತ್ತನೆ ಮೂಲಕ ವಿಶ್ವದಾದ್ಯಂತ ಹೆಸರುವಾಸಿಯಾಗಿರುವ ಮೈಸೂರಿನ ಅರುಣ್ ಯೋಗಿರಾಜ್ ಅವರನ್ನು ಸೋಮವಾರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಅವರನ್ನು ಸನ್ಮಾನಿಸಿ ಮೂವರು ಮಹನೀಯರ ಪುತ್ಥಳಿಗಳ ನಿರ್ಮಾಣಕ್ಕೆ ಸಾಂಕೇತಿಕವಾಗಿ ಚಾಲನೆ ನೀಡಿದ್ದಾರೆ. ಇತ್ತೀಚೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗುದ್ದಲಿ ಪೂಜೆ ನೆರವೇರಿಸಿದ್ದರು.



ವಾಲ್ಮೀಕಿ



ಭಗೀರಥ ಮಹರ್ಷಿ



ಕನಕದಾಸ

> ಪುತ್ಥಳಿಗಳ ಕೆತ್ತನೆ ಕಾರ್ಯದ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವ ಮುತುವರ್ಜಿ ವಹಿಸಿಕೊಂಡಿದ್ದು, ಅರುಣ್ ಯೋಗಿರಾಜ್ ಅವರಿಗೆ ಬೇಕಿರುವ ಎಲ್ಲಾ ಸಹಕಾರವನ್ನು ಚಾಮರಾಜನಗರ ಜಿಲ್ಲಾಡಳಿತ ನೀಡಲಿದೆ.
> **–ಶಿಲ್ಪನಾಗ್, ಜಿಲ್ಲಾಧಿಕಾರಿ, ಚಾಮರಾಜನಗರ**

> ಮಹರ್ಷಿ ವಾಲ್ಮೀಕಿ, ಭಗೀರಥ ಮಹರ್ಷಿ ಮತ್ತು ಕನಕದಾಸರ ಪುತ್ಥಳಿಗಳನ್ನು ಬಹಳ ವಿಭಿನ್ನವಾಗಿ ರೂಪಿಸುವ ಉದ್ದೇಶವಿದೆ. ಕಲ್ಲಿನ ಬಗ್ಗೆ ಚರ್ಚೆ ನಡೆಯುತ್ತಿದೆ. ಸದ್ಯದಲ್ಲಿಯೇ ಸಂಪೂರ್ಣ ಚಿತ್ರ ಸಿಗಲಿದೆ.
> **–ಅರುಣ್ ಯೋಗಿರಾಜ್, ಶಿಲ್ಪಿ**

ಈಗಾಗಲೇ ಜಿಲ್ಲಾ ಆಡಳಿತ ಸಂಕೀರ್ಣ ಆವರಣದಲ್ಲಿ ಅಂಬೇಡ್ಕರ್ ಪುತ್ಥಳಿ ಸ್ಥಾಪಿತಗೊಂಡಿದ್ದು, ಅದರ ಅಳತೆಯಲ್ಲಿಯೇ ಮೂರು ಪುತ್ಥಳಿಗಳು ನಿರ್ಮಾಣ ಮಾಡಲು ಜಿಲ್ಲಾಡಳಿತ ನಿರ್ಧರಿಸಿದೆ. ಪುತ್ಥಳಿ ನಿರ್ಮಾಣಕ್ಕೆ ರಾಜ್ಯ ಸರ್ಕಾರದಿಂದ ಪ್ರತಿ ಪುತ್ಥಳಿಗೂ ತಲಾ 50 ಲಕ್ಷ ರೂ.ನಂತೆ 1.50 ಕೋಟಿ ಅನುದಾನವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಬಿಡುಗಡೆ ಮಾಡಲಾಗಿದೆ ಜಿಲ್ಲಾ ಆಡಳಿತ ಸಂಕೀರ್ಣದ ಆವರಣದಲ್ಲಿ ಪುತ್ಥಳಿ ನಿರ್ಮಿಸುವಂತೆ ಜಿಲ್ಲಾಡಳಿತಕ್ಕೆ ಸಾರ್ವಜನಿಕರಿಂದ ಸಾಕಷ್ಟು ಮನವಿಗಳು ಬಂದಿದ್ದವು. ಅದಕ್ಕೆ ಅನುಗುಣವಾಗಿ ಜಿಲ್ಲಾ ಉಸ್ತುವಾರಿ ಸಚಿವರ ಆಸಕ್ತಿಯಿಂದ ಮಹರ್ಷಿ ವಾಲ್ಮೀಕಿ, ಭಗೀರಥ ಮಹರ್ಷಿ ಮತ್ತು ಕನಕದಾಸರ ಪುತ್ಥಳಿಗಳನ್ನು ಸ್ಥಾಪಿಸಲು ಎಲ್ಲಾ ರೀತಿಯ ಸಿದ್ಧತೆಗಳನ್ನು ಮಾಡಿಕೊಂಡು ಮೂರು ತಿಂಗಳಿನಲ್ಲಿ ಕಾಮಗಾರಿ ಪೂರ್ಣಗೊಳಿಸುವ ಉದ್ದೇಶ ಹೊಂದಿದೆ. ಮತ್ತೊಂದೆಡೆ ಸಾರ್ವಜನಿಕರು ಅಯೋಧ್ಯೆಯ ಬಾಲರಾಮಮೂರ್ತಿ ಕೆತ್ತಿರುವ ಶಿಲ್ಪಿ

ಕನ್ನಡ–ಸಂಸ್ಕೃತಿ ಇಲಾಖೆಯಿಂದ 1.50 ಕೋಟಿ ರೂ. ಬಿಡುಗಡೆ

ಅರುಣ್ ಯೋಗಿರಾಜ್ ಮೈಸೂರಿನವರು ಇಂದು ವಿಶ್ವದಾದ್ಯಂತ ಖ್ಯಾತಿಗಳಿಸಿದ್ದಾರೆ ಅವರಿಂದಲೇ ಪುತ್ಥಳಿ ಕೆತ್ತನೆ ಕಾರ್ಯ ಆಗಬೇಕೆಂದು ಇಚ್ಛಿಸಿದ್ದರಿಂದ ಜಿಲ್ಲಾ ಉಸ್ತುವಾರಿ ಸಚಿವರು ಅರುಣ್‌ರನ್ನು ಒಪ್ಪಿಸಿದ್ದಾರೆ.

ಅರುಣ್ ಯೋಗಿರಾಜ್ ಅನುಭವಿ ಶಿಲ್ಪಿ. ಅವರಿಗೆ ನಾವು ಮೂರು ಪುತ್ಥಳಿಗಳ ಜವಾಬ್ದಾರಿಯನ್ನು ವಹಿಸಿ, ಮಹರ್ಷಿ ವಾಲ್ಮೀಕಿ, ಭಗೀರಥ ಮಹರ್ಷಿ ಮತ್ತು ಕನಕದಾಸರ ಈಗಾಗಲೇ ನಿರ್ಮಾಣಗೊಂಡಿರುವ ಪುತ್ಥಳಿಗಳ ಫೋಟೋಗಳನ್ನು ನೀಡಿದ್ದೇವೆ ಎಂದು ಚಾಮರಾಜನಗರ ಜಿಲ್ಲಾಧಿಕಾರಿ ಶಿಲ್ಪನಾಗ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಉತ್ಕೃಷ್ಟ ವಸ್ತುಗಳನ್ನು ಬಳಸಿ ಪುತ್ಥಳಿ ನಿರ್ಮಿಸಲು ತಿಳಿಸಲಾಗಿದೆ. ವಿಶ್ವದರ್ಜೆಯ ಶಿಲ್ಪಿಗಳಾಗಿರುವುದರಿಂದ ಅವರಿಂದ ಉತ್ತಮ ಫಲಿತಾಂಶ ಬರಲಿದೆ ಎಂಬ ವಿಶ್ವಾಸವಿದೆ. ಈಗಾಗಲೇ ಅನೇಕ ಚರ್ಚೆಗಳು ನಡೆದಿವೆ. ಜುಲೈ ತಿಂಗಳ ಅಂತ್ಯದಲ್ಲಿ ಪುತ್ಥಳಿಗಳ ನೀಲನಕ್ಷೆ ತಯಾರಿಸಲಿದ್ದಾರೆ. ನಂತರದ 3 ತಿಂಗಳಿನಲ್ಲಿ ಪುತ್ಥಳಿಗಳು ಪೂರ್ಣಗೊಳ್ಳುವ ಗುರಿ ಇದೆ ಎಂದರು.

ಹೆಚ್ಚಿದ ಬೇಡಿಕೆ



ಅಯೋಧ್ಯೆಯ ಬಾಲರಾಮನ ಕೆತ್ತನೆ ನಂತರ ದೇಶ ಮಾತ್ರವಲ್ಲದೇ ವಿಶ್ವದ ನಾನಾ ಮೂಲೆಗಳಿಂದ ಕೆಲಸಕ್ಕೆ ಕರೆಗಳು ಬರುತ್ತಿವೆ. ಇತ್ತೀಚೆಗೆ ಲಂಡನ್, ಆಫ್ರಿಕಾದಲ್ಲಿ ಕೆಲಸ ಮುಗಿಸಿಕೊಂಡು ಬಂದಿದ್ದೇನೆ. ದೇಶದಲ್ಲಿ ನಿರ್ಮಾಣಗೊಳ್ಳುತ್ತಿರುವ ಎಲ್ಲಾ ದೇವಾಲಯಗಳಿಗೆ ಮೂಲ ವಿಗ್ರಹ ಕೆತ್ತನೆಗೆ ಶಿಲ್ಪಿಗಳ ಪಟ್ಟಿಯಲ್ಲಿ ಮೊದಲು ನನ್ನ ಹೆಸರು ಇದೆ. ಈ ಹಿನ್ನೆಲೆಯಲ್ಲಿ ಮತ್ತೊಂದು ಶಿಲ್ಪ ಕಲಾ ಸಂಸ್ಥೆಯನ್ನು ಮಾಡುತ್ತಿದ್ದೇನೆ ಎಂದು ಅರುಣ್ ಯೋಗಿರಾಜ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು. ಹರಿಯಾಣದಲ್ಲಿರುವ ಕುರುಕ್ಷೇತದಲ್ಲಿ 12 ಅಡಿ ಎತ್ತರ ವಿಷ್ಣುವಿನ ವಿಶ್ವರೂಪ ಪ್ರದರ್ಶನದ ಪ್ರತಿಮೆ ನಿರ್ಮಾಣ ಮತ್ತು ಮಹಾರಾಷ್ಟ್ರ ಸರ್ಕಾರದಿಂದ 30 ಅಡಿ ಎತ್ತರದ ವಿಷ್ಣು ಪ್ರತಿಮೆಗಳನ್ನು ಮಾಡಲು ಅಲ್ಲಿಂದ ಆಹ್ವಾನ ನೀಡಿದ್ದಾರೆ. ಈ ಸಂಬಂಧ ಎಲ್ಲಾ ರೀತಿಯ ಚರ್ಚೆಗಳು ಮಾಡಲಾಗಿದೆ. ಆದೇಶ ಬರಬೇಕಿದೆ ಎಂದರು.

5 ವರ್ಷ ಸಿದ್ದರಾಮಯ್ಯ ಸಿಎಂ ಎಂದು ಖರ್ಗೆ ಹೇಳಲಿ: ಆರ್.ಅಶೋಕ್ ಸವಾಲು



ಹಾಸನ: ಸಿದ್ದರಾಮಯ್ಯ ಅವರೇ ಐದು ವರ್ಷಗಳವರೆಗೆ ಮುಖ್ಯಮಂತ್ರಿ ಆಗಿರುತ್ತಾರೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಲಿ. ಇಲ್ಲವೇ ದೆಹಲಿಯಲ್ಲಿ ಡಿ.ಕೆ.ಶಿವಕುಮಾರ್ ಅವರೇ ಪತ್ರಿಕಾಗೋಷ್ಠಿ ನಡೆಸಿ ತಿಳಿಸಲಿ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಸವಾಲು ಹಾಕಿದರು.

ಜಿಲ್ಲೆಯ ಆಲೂರು ತಾಲೂಕಿನ ಧರ್ಮಪುರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್‌ನವರು ಸ್ಪಷ್ಟಪಡಿಸಿಬಿಟ್ಟರೆ, ಅಶೋಕ್‌ನದ್ದು ಗಿಳಿ ಶಾಸ್ತ್ರನೂ ಇಲ್ಲ, ಕವಡೆ ಶಾಸ್ತ್ರನೂ ಇಲ್ಲ, ಎಲೆ ಶಾಸ್ತ್ರನೂ ಇಲ್ಲ ಎಂದುಕೊಂಡು ಬಿಟ್ಟು ಬಿಡುತ್ತೇನೆ ಎಂದರು.

ನಾನು ಹೇಳಿದ್ದು ನಿಜ ಆಗುತ್ತಿದೆ. ಶಿವಕುಮಾರ್ ಮುಖ್ಯಮಂತ್ರಿ ಆಗುತ್ತಾರೆ ಎಂದು ಕಾಂಗ್ರೆಸ್ ಶಾಸಕರೇ ಹೇಳುತ್ತಿದ್ದಾರೆ ಎಂದರು. ಸಿದ್ದರಾಮಯ್ಯ ಅವರನ್ನು ದೆಹಲಿಗೆ ಎತ್ತಂಗಡಿ ಮಾಡಲು ಯೋಜನೆ ಸಿದ್ಧವಾಗಿದೆ. ಅವರು ಇಲ್ಲಿಯೇ ಇದ್ದರೆ ಕಿರುಕುಳ ನೀಡುತ್ತಾರೆ. ಸುಮ್ಮನೆ ಮನೆಯಲ್ಲಿ ಕೂರಲ್ಲ. ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದಾಗ, ಅವರೇ ಎಲ್ಲರನ್ನೂ ಬಿಜೆಪಿ ಹೋಗಿ ಎಂದು ಕಳುಹಿಸಿ, ವಿರೋಧ ಪಕ್ಷದ ನಾಯಕನಾಗಿ ಆರಾಮಾಗಿದ್ದರು ಎಂದು ಟೀಕಿಸಿದರು.

ಹಾಸನದಲ್ಲಿ ಹೃದಯಾಘಾತದಿಂದ ಜನ ಸಾಯುತ್ತಿದ್ದಾರೆ. ಮೆಕ್ಕೆಜೋಳಕ್ಕೆ ರೋಗ ಬಂದು ರೈತರು ತತ್ತರಿಸಿದ್ದಾರೆ. ಆದರೆ, ಸರ್ಕಾರ ಎಚ್ಚರ ತಪ್ಪಿದ್ದು, ಕೋಮಾ ಸ್ಥಿತಿಯಲ್ಲಿದೆ ಎಂದು ದೂರಿದರು. ಯಾರಾದರೂ ಮುಖ್ಯಮಂತ್ರಿ ಆಗಲಿ, ನಾವಂತೂ ಈ ಸರ್ಕಾರ ಬೀಳಿಸಲು ಹೋಗುವುದಿಲ್ಲ ಎಂದರು.

ಜನರೊಂದಿಗೆ ಜನತಾದಳ ಪ್ರವಾಸ; ಸದಸ್ಯತ್ವ ಅಭಿಯಾನ ನಿರೀಕ್ಷೆಗೂ ಮೀರಿ ಯಶಸ್ಸು



ಬೆಂಗಳೂರು,ಜು.8(ಕೆಎಂಶಿ)– ಜನರೊಂದಿಗೆ ಜನತಾದಳ ಪ್ರವಾಸ ಹಾಗೂ ಪಕ್ಷದ ಸದಸ್ಯತ್ವ ಅಭಿಯಾನ ನಿರೀಕ್ಷೆಗೂ ಮೀರಿ ಯಶಸ್ಸು ತಂದಿದೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ತಿಳಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಕನಿಷ್ಠ 50 ಲಕ್ಷ ಸದಸ್ಯತ್ವ ಗುರಿಯೊಂದಿಗೆ ರಾಜ್ಯ

2028ಕ್ಕೆ ಪಕ್ಷ ಅಧಿಕಾರಕ್ಕೆ ತರುವ ಉದ್ದೇಶ

ಪ್ರವಾಸ ಹಮ್ಮಿಕೊಂಡಿದ್ದು, ಬಹುತೇಕ ಜಿಲ್ಲೆ, ತಾಲೂಕುಗಳಿಗೆ ಭೇಟಿ ನೀಡಿ ಜಿಲ್ಲಾ ನಾಯಕರು ಮತ್ತು ಕಾರ್ಯಕರ್ತರನ್ನು ಭೇಟಿ ಮಾಡಿ ಪಕ್ಷಕ್ಕೆ ಬಲ ತುಂಬಲಾಗುವುದು ಎಂದಿದ್ದಾರೆ. ಕಳೆದ 26 ವರ್ಷಗಳಿಂದ ಪಕ್ಷದ ಮೇಲಿನ ಜನತೆಯ ಅಭಿಮಾನ, ಬದ್ಧತೆಯಿಂದ ಜೆಡಿಎಸ್ ಸುಭದ್ರವಾಗಿದ್ದು, 2028ಕ್ಕೆ ಪಕ್ಷವನ್ನು ಅಧಿಕಾರಕ್ಕೆ ತಂದು ನಿಮ್ಮೆಲ್ಲರ ಶ್ರಮಕ್ಕೆ ತಕ್ಕ ಅಧಿಕಾರ ಕೊಡಿಸಿದಾಗ ಋಣ ತೀರಿಸಿದಂತಾಗುತ್ತದೆ. ಕಾರ್ಯಕರ್ತರೊಂದಿಗೆ ಸಂಬಂಧ ಬಾಂಧವ್ಯ ವಿಶ್ವಾಸ ಬೆಳೆಸಿಕೊಳ್ಳುವ ಉದ್ದೇಶದಿಂದ ರಾಜ್ಯ ಪ್ರವಾಸ ಮಾಡುತ್ತಿದ್ದು, ಪಕ್ಷದ ವರಿಷ್ಠ ನಾಯಕರಾದ ಎಚ್.ಡಿ.ದೇವೇಗೌಡರು ಮತ್ತು ಕುಮಾರಸ್ವಾಮಿ ಅವರಿಗೆ ತೋರಿಸಿದ ಪ್ರೀತಿಯೇ ಪ್ರವಾಸದೆಲ್ಲೆಡೆ ನನಗೂ ವ್ಯಕ್ತವಾಗುತ್ತಿದೆ. ನನ್ನ ಕೊನೆ ಉಸಿರಿರುವವರೆಗೂ ಪಕ್ಷ ಕಟ್ಟಲು ಶ್ರಮಿಸುವೆ. ಎಲ್ಲರೂ ಜೊತೆಯಾಗಿ ಹೆಜ್ಜೆ ಹಾಕೋಣ, ಬಲಿಷ್ಠ ಪಕ್ಷ ಕಟ್ಟೋಣ. 2028ಕ್ಕೆ ಕುಮಾರಸ್ವಾಮಿ ಅವರನ್ನು ಮತ್ತೆ ಸಿಎಂ ಮಾಡೋಣ ಎಂದಿದ್ದಾರೆ.

ಕೂಲಿ ದರ ಕಡಿತಗೊಳಿಸುವ ಕ್ರಮ ಖಂಡಿಸಿ ನಾಳೆ ಮೈಸೂರಲ್ಲಿ ಲೋಡಿಂಗ್, ಅನ್‌ಲೋಡಿಂಗ್ ಕಾರ್ಮಿಕರ ಪ್ರತಿಭಟನೆ

ಮೈಸೂರು,ಜು.8(ಜಿಎ)–ಸಾರ್ವಜನಿಕ ವಿತರಣಾ ವ್ಯವಸ್ಥೆಯ ಪಡಿತರ ಎತ್ತುವಳಿ ಗೋದಾಮಿನಲ್ಲಿ ಲೋಡಿಂಗ್ ಹಾಗೂ ಅನ್‌ಲೋಡಿಂಗ್ ಕಾರ್ಮಿಕರ ಕೂಲಿ ದರ 1.90ರೂ. ಕಡಿತಗೊಳಿಸಿರುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಜು.10ರಂದು ಕರ್ನಾಟಕ ರಾಜ್ಯ ಲೋಡಿಂಗ್ ಹಾಗೂ ಅನ್‌ಲೋಡಿಂಗ್ ಕಾರ್ಮಿಕರ ಒಕ್ಕೂಟದಿಂದ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಲಾಗುವುದು ಎಂದು ಒಕ್ಕೂಟದ ಜಿಲ್ಲಾಧ್ಯಕ್ಷ ಕರಿನಾಯಕ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜು.10ಕ್ಕೆ ಅನ್ನಭಾಗ್ಯ ಯೋಜನೆ ಜಾರಿಗೆ ಬಂದು 12 ವರ್ಷಗಳಾದರೂ ಲೋಡಿಂಗ್ ಹಾಗೂ ಅನ್‌ಲೋಡಿಂಗ್ ಕಾರ್ಮಿಕರ ಬದುಕು ಅತಂತ್ರವಾಗಿದೆ. ಆಹಾರ ನಿಗಮದ ಕೆಎಫ್‌ಸಿಎಸ್‌ಸಿ ಹಾಗೂ ಟಿಎಪಿಸಿಎಂಎಸ್ ಗೋದಾಮುಗಳಲ್ಲಿ ಲೋಡಿಂಗ್ ಮತ್ತು ಅನ್‌ಲೋಡಿಂಗ್ ಮಾಡುವ ಹಮಾಲಿ ಕಾರ್ಮಿಕರಿಗೆ ಜಿಲ್ಲೆಯಲ್ಲಿ ಸಮರ್ಪಕ ಕೂಲಿ ದೊರೆಯುತ್ತಿಲ್ಲ. ಕಾರ್ಮಿಕರಿಗೆ ಸರ್ಕಾರ 2024–26 ಟೆಂಡರ್ ನಿಯಾಮವಳಿಯಲ್ಲಿ ಇಎಸ್‌ಐ ಮತ್ತು ಪಿಎಫ್ ಪಾವತಿಯನ್ನು ಏ.8ಕ್ಕೆ ಕಡ್ಡಾಯಗೊಳಿಸಿ ಆಯುಕ್ತರು ಆದೇಶ ಹೊರಡಿಸಿದ್ದರೂ ಜಿಲ್ಲೆಯಲ್ಲಿ ಇನ್ನೂ ಜಾರಿಗೊಳಿಸಿಲ್ಲ ಎಂದರು.

ಇಎಸ್‌ಐ ಪಾವತಿಯಾಗದ ಕಾರಣ ಕಾರ್ಮಿಕರು ಅನಾರೋಗ್ಯಕ್ಕೀಡಾದರೆ ಆಸ್ಪತ್ರೆಗಳಿಗೆ ಕೂಲಿಯ ಹಣವನ್ನು ಪಾವತಿ ಮಾಡುವಂತಾಗಿದೆ. ಫೆಬ್ರವರಿ ತಿಂಗಳಲ್ಲಿ ಚಿಲ್ಲರೆ ಸಾಗಾಣಿಕೆ ಗುತ್ತಿಗೆದಾರರು ಕಾರ್ಮಿಕರಿಂದ ಇಎಸ್‌ಐ ಮತ್ತು ಪಿಎಫ್ ವಂತಿಕೆ ಕಡಿತ ಮಾಡಿದ್ದಾರೆ. ಆ ಹಣ ಈವರೆಗೂ ಪಾವತಿ ಮಾಡಿಲ್ಲದ ಕಾರಣ ಸಂಬಂಧಪಟ್ಟವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು. ಹಲವು ತಾಲೂಕುಗಳಲ್ಲಿ ಟೆಂಡರ್ ಆಗದಿರುವುದರಿಂದ ಕಾರ್ಮಿಕರಿಗೆ ಕೂಲಿ ಹೆಚ್ಚಳವಾಗದೆ ಕ್ವಿಂಟಾಲ್‌ಗೆ 5.54ರೂ. ಕೂಲಿ ನಷ್ಟವಾಗಿದೆ. ಕೂಡಲೇ ತಾಲೂಕುಗಳಲ್ಲಿ ಟೆಂಡರ್ ಕರೆಯಬೇಕು. ತಾಂತ್ರಿಕ ಕಾರಣದಿಂದ ಟೆಂಡರ್ ವಿಳಂಬವಾದಲ್ಲಿ ತಾಲೂಕು ಕಾರ್ಮಿಕರಿಗೆ ಕೂಡಲೇ ಚಿಲ್ಲರೆ ಸಾಗಾಣಿಕೆಗೆ ಕ್ವಿಂಟಾಲ್‌ಗೆ ಹೊಸ ದರ 23.62 ರೂ. ಹಾಗೂ ಸಗಟು ಸಾಗಾಣಿಕೆ ಟೆಂಡರ್ ಕ್ವಿಂಟಾಲ್‌ಗೆ 10.92 ರೂ. ನಿಗದಿ ಮಾಡಬೇಕು ಎಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ಜಿಲ್ಲಾ ಕಾರ್ಯದರ್ಶಿ ಜಿ.ಮಹದೇವ್, ಜಿಲ್ಲಾ ಉಪಾಧ್ಯಕ್ಷ ನರಸಿಂಹಮೂರ್ತಿ, ವಿಕ್ರಮ್ ನಾಯಕ, ಕುಮಾರ, ಕೃಷ್ಣಪ್ಪ ಉಪಸ್ಥಿತರಿದ್ದರು.

ವಿದ್ಯಾರ್ಥಿಗಳು ಸೇವಾ ಮನೋಭಾವ ರೂಢಿಸಿಕೊಳ್ಳಿ

ಶಾಸಕ ಜಿ.ಟಿ.ದೇವೇಗೌಡ ಕಿವಿಮಾತು



ಐದು ದಿನಗಳ 'ಸೇವಾ ಇಂಟರ್ನ್‌ಶಿಫ್ ಜಾಗೃತಿ' ಶಿಬಿರದಲ್ಲಿ ಶಾಸಕ ಜಿ.ಟಿ.ದೇವೇಗೌಡರನ್ನು ಸನ್ಮಾನಿಸಲಾಯಿತು.

ಮೈಸೂರು, ಜು.8(ಎಸ್‌ಪಿಎನ್)– ಮೈಸೂರು ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಫಾರ್ಮಾ ವಿಷನ್ ಮತ್ತು ಶಾರದಾ ವಿಲಾಸ ಕಾಲೇಜ್ ಆಫ್ ಫಾರ್ಮಸಿಯ ಎನ್‌ಎಸ್‌ಎಸ್ ಘಟಕದ ಸಹಯೋಗದೊಂದಿಗೆ ಏರ್ಪಡಿಸಿದ್ದ ಐದು ದಿನಗಳ 'ಸೇವಾ ಇಂಟರ್ನ್‌ಶಿಫ್ ಜಾಗೃತಿ' ಶಿಬಿರವನ್ನು ಶಾಸಕ ಜಿ.ಟಿ.ದೇವೇಗೌಡರು ಉದ್ಘಾಟಿಸಿದರು.

ನಂತರ ಮಾತನಾಡಿದ ಶಾಸಕರು, ಫಾರ್ಮಸಿ ಕೋರ್ಸ್ ಮುಗಿಸಿದ ವಿದ್ಯಾರ್ಥಿಗಳಿಗೆ ವಿವಿಧ ಕಂಪನಿಗಳಲ್ಲಿ ಉದ್ಯೋಗಾವಕಾಶ ಸಾಕಷ್ಟಿವೆ. ಈ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ವಿದ್ಯಾರ್ಥಿಗಳು ಸೇವಾ ಮನೋಭಾವ ಹೊಂದಿ, ಜನರ ಆರೋಗ್ಯ ರಕ್ಷಣೆಗೆ ಮುಂದಾಗಬೇಕು. ಫಾರ್ಮಸಿ ವಿದ್ಯಾರ್ಥಿಗಳು ಚಾಮುಂಡಿಬೆಟ್ಟದ ಮೆಟ್ಟಿಲು ಸ್ವಚ್ಛತೆ, ಸಾರ್ವಜನಿಕರಿಗೆ ಆರೋಗ್ಯ ಜಾಗೃತಿ, ನೈರ್ಮಲ್ಯ, ಔಷಧ ವಿತರಣೆ, ನೀರು ಮತ್ತು ಭಕ್ತರಿಗೆ ಪ್ರಥಮ ಚಿಕಿತ್ಸೆ ಮುಂತಾದ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವುದು ಸಂತೋಷದ ವಿಷಯ ಎಂದರು. ಕಾರ್ಯಕ್ರಮದಲ್ಲಿ ಶಾರದಾ ವಿಲಾಸ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿ ಆರ್.ನರಸಿಂಹ, ಕಾರ್ಯದರ್ಶಿ ಗಣೇಶ್ ಅಪ್ಪಾ ದೇಶ್, ಕಾಲೇಜು ಪ್ರಾಂಶುಪಾ ಡಾ. ಹನುಮಂತ ಚಾರ್ ಜೋಶಿ ಹಾಗೂ ವಿದ್ಯಾರ್ಥಿಗಳು, ಸಿಬ್ಬಂದಿಗಳು ಪಾಲ್ಗೊಂಡಿದ್ದರು.

ಅರ್ಜಿ ಆಹ್ವಾನ

ಮೈಸೂರು,ಜು.8–2024–25ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಸಾರ್ವತ್ರಿಕ ಪರೀಕ್ಷೆಗಳಲ್ಲಿ ಗರಿಷ್ಠ ಅಂಕ ಪಡೆದ ಕರ್ನಾಟಕದ ಮೂಲ ನಿವಾಸಿ ಮಾಜಿ ಸೈನಿಕರ ಮಕ್ಕಳಿಗೆ ಜನರಲ್ ಕೆ.ಎಸ್.ತಿಮ್ಮಯ್ಯ ನಗದು ಪ್ರಶಸ್ತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಶುಲ್ಕ ರಹಿತ ಅರ್ಜಿಗಳನ್ನು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಮೈಸೂರು ಕಚೇರಿಯಿಂದ ಪಡೆದು ಭರ್ತಿ ಮಾಡಿದ ಅರ್ಜಿಗಳನ್ನು ಕೊನೆಯ 30–10–2025ರೊಳಗಾಗಿ ಸಲ್ಲಿಸಬಹುದಾಗಿದೆ. ಮಾಹಿತಿಗಾಗಿ ದೂ.0821–2425240.

ಈಜು ಸ್ಪರ್ಧೆ: ಜಿಎಸ್‌ಎನ ವೇದಾಂತ್, ಪ್ರಜ್ಞಾ ಭಾಗವತ್‌ಗೆ ಚಾಂಪಿಯನ್‌ಶಿಪ್

ಮೈಸೂರು,ಜು.8–ಮೈಸೂರಿನ ವಿಜಯನಗರದ ಮರ್ಲಿನ್ ಅಕ್ವಾಟಿಕ್ ಸೆಂಟರ್‌ನಲ್ಲಿ ನಡೆದ ಪದಕ ವಿಜೇತರಲ್ಲದ ಆಹ್ವಾನಿತ ಈಜು ಸ್ಪರ್ಧೆಯಲ್ಲಿ ಗ್ಲೋಬಲ್ ಸ್ಪೋರ್ಟ್ಸ್ ಅಸೋಸಿಯೇಷನ್ (ಜಿಎಸ್‌ಎ)ನ ವೇದಾಂತ್ ಅಭಿಷೇಕ್ ಹಾಗೂ ಪ್ರಜ್ಞಾ ಎಂ.ಭಾಗವತ್ ವೈಯಕ್ತಿಕ ಚಾಂಪಿಯನ್‌ಶಿಪ್ ಟ್ರೋಫಿ ಪಡೆದಿದ್ದಾರೆ. ಸ್ಪರ್ಧೆಯಲ್ಲಿ ರಾಜ್ಯಾದ್ಯಂತ 450ಕ್ಕೂ ಹೆಚ್ಚು ಸ್ಪರ್ಧಿಗಳು ಭಾಗವಹಿಸಿದ್ದರು. ಮೈಸೂರಿನ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಈಜುಕೊಳದ ಗ್ಲೋಬಲ್ ಸ್ಪೋರ್ಟ್ಸ್ ಅಸೋಸಿಯೇಷನ್‌ನಲ್ಲಿ ತರಬೇತಿ ಪಡೆಯುತ್ತಿರುವ ವೇದಾಂತ್ ಗ್ರೂಪ್ 8ರಲ್ಲಿ 4 ಚಿನ್ನದ ಪದಕ, ಪ್ರಜ್ಞಾ ಗ್ರೂಪ್–5ರಲ್ಲಿ 3 ಚಿನ್ನ, 1 ಬೆಳ್ಳಿ ಪದಕ ಪಡೆದಿದ್ದಾರೆ.



ವೇದಾಂತ್ ಅಭಿಷೇಕ್



ಪ್ರಜ್ಞಾ ಭಾಗವತ್

ಕಾನೂನು–ಸುವ್ಯವಸ್ಥೆ, ಸುಗಮ ಸಂಚಾರಕ್ಕೆ ಮೂಲಸೌಕರ್ಯ ವ್ಯವಸ್ಥೆ

ಪೊಲೀಸ್ ಅಧಿಕಾರಿಗಳೊಂದಿಗೆ ಪಾಲಿಕೆ ಆಯುಕ್ತರ ಸಮನ್ವಯ ಸಭೆ

ಮೈಸೂರು,ಜು.8 (ಆರ್‌ಕೆ)– ಕಾನೂನು–ಸುವ್ಯವಸ್ಥೆ ಮತ್ತು ಸುಗಮ ಸಂಚಾರ ವ್ಯವಸ್ಥೆ ಉತ್ತಮಪಡಿಸಲು ಅಗತ್ಯ ಮೂಲಸೌಕರ್ಯ ಕಲ್ಪಿಸುವ ಸಲುವಾಗಿ ಪೊಲೀಸ್ ಇಲಾಖೆ ಹಾಗೂ ಮೈಸೂರು ಮಹಾನಗರಪಾಲಿಕೆ ಅಧಿಕಾರಿಗಳ ನಡುವೆ ಸಮನ್ವಯ ಸಾಧಿಸುವ ಅನಿವಾರ್ಯತೆ ಇದೆ ಎಂದು ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಇಂದಿಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ನಜರ್‌ಬಾದ್‌ನಲ್ಲಿರುವ ನಗರ ಪೊಲೀಸ್ ಆಯುಕ್ತರ ಕಚೇರಿ ಸಭಾಂಗಣದಲ್ಲಿ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಡಿಸಿಪಿ, ಎಸಿಪಿಗಳೊಂದಿಗೆ ಸಭೆ ನಡೆಸಿದ ಅವರು, ಮೈಸೂರು ನಗರದಾದ್ಯಂತ ಸಂಚಾರ ಸುಗಮಕ್ಕೆ ಬೇಕಾದ ಮೂಲಸೌಕರ್ಯ ಒದಗಿಸಲು ಪೊಲೀಸರ ಸಲಹೆ, ಮಾರ್ಗದರ್ಶನ, ಕಾಮಗಾರಿಗಳನ್ನು ಅನುಷ್ಠಾನಗೊಳಿಸುವಾಗ ಸಹಕಾರ ಬೇಕಾಗುತ್ತದೆ ಎಂದರು.



ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್‌ರೊಂದಿಗೆ ನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಅವರು ಮಂಗಳವಾರ ಸಮನ್ವಯ ಸಭೆ ನಡೆಸಿದರು. ಪೊಲೀಸ್ ಅಧಿಕಾರಿಗಳು ಈ ವೇಳೆ ಉಪಸ್ಥಿತರಿದ್ದರು.

ಮೈಸೂರು ನಗರಾದ್ಯಂತ ಹೈ ರೆಸೂಲ್ಯೂಷನ್ ಹೊಂದಿರುವ ಹೆಚ್ಚುವರಿ ಸಿಸಿ ಕ್ಯಾಮರಾ ಅಳವಡಿಸಬೇಕು, ಸಾರ್ವಜನಿಕ ಸ್ಥಳ, ಪಾರ್ಕ್‌ಗಳಲ್ಲಿರುವ ಗಣ್ಯ, ಮಹನೀಯರ ಪುತ್ಥಳಿ, ಪ್ರತಿಮೆಗಳ ಸುರಕ್ಷತೆ, ರಸ್ತೆಗಳಲ್ಲಿ ಅಗತ್ಯವಿರುವೆಡೆ ವೈಜ್ಞಾನಿಕ ರಸ್ತೆ ಡುಬ್ಬ ಅಳವಡಿಸುವುದು, ಮೀಡಿಯನ್ ನಿರ್ಮಾಣ, ಫುಟ್‌ಪಾತ್ ಒತ್ತುವರಿ ತೆರವು, ಪಾರ್ಕ್‌ಗಳ ಅಭಿವೃದ್ಧಿ, ವಿವಿಧ ಅಭಿವೃದ್ಧಿ ಕಾಮಗಾರಿ (ಸಿವಿಲ್) ಕೈಗೊಂಡಾಗ ಅಗತ್ಯ ಸುರಕ್ಷತಾ ಕ್ರಮ ವಹಿಸುವುದು, ರಸ್ತೆ ಗುಂಡಿ ಮುಚ್ಚುವುದು, ಯುಜಿಡಿ, ಕುಡಿಯುವ ನೀರಿನ ಸಂಪರ್ಕ ಮಾರ್ಗದ ಕೆಲಸ ಮಾಡುವ ಸಂದರ್ಭ ಪಾಲಿಕೆ ಮತ್ತು ಪೊಲೀಸ್ ಅಧಿಕಾರಿಗಳು ಸಮನ್ವಯ ಸಾಧಿಸಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಹಾಗೂ ಅಪಾಯ ಸಂಭವಿಸದಂತೆ ಎಚ್ಚರಿಕೆ ವಹಿಸುವ ಬಗ್ಗೆ ಸಭೆಯಲ್ಲಿ ಸುದೀರ್ಘ ಚರ್ಚೆ ನಡೆಯಿತು.

ದಸರಾ ಮಹೋತ್ಸವ ಸಮೀಪಿಸುತ್ತಿರುವುದರಿಂದ ಪ್ರವಾಸಿಗರು, ಸಾರ್ವಜನಿಕರಿಗೆ ಸುರಕ್ಷತಾ ಕ್ರಮ ಕೈಗೊಂಡು ಅಗತ್ಯ ಮೂಲ ಸೌಲಭ್ಯ ಕಲ್ಪಿಸಬೇಕಾಗಿ ರುವುದರಿಂದ ಅಧಿಕಾರಿಗಳು ಸಮನ್ವಯ ಸಾಧಿಸಬೇಕೆಂದು ಸಭೆಯಲ್ಲಿ ನಿರ್ಧರಿಸಲಾಯಿತು.


ದೇಶ – ವಿದೇಶ

ಜಪಾನ್, ದ.ಕೊರಿಯಾ ಸೇರಿ 14 ರಾಷ್ಟ್ರಗಳ ಮೇಲೆ ಸುಂಕ ಘೋಷಿಸಿದ ಟ್ರಂಪ್



ವಾಷಿಂಗ್ಟನ್: ಜಪಾನ್, ದಕ್ಷಿಣ ಕೊರಿಯಾ ಸೇರಿದಂತೆ 14 ರಾಷ್ಟ್ರಗಳ ಮೇಲೆ ಸುಂಕ ವಿಧಿಸುವುದಾಗಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ. ಪ್ರತಿಸುಂಕ ವಿಧಿಸುವ ಆದೇಶದ ಪತ್ರಗಳನ್ನು ಸಾಮಾಜಿಕ ಮಾಧ್ಯಮ ಟ್ರುಥ್‌ನಲ್ಲಿ ಹಂಚಿದ್ದಾರೆ. ಈ ದೇಶಗಳಿಂದ ಆಮದಾಗುವ ಸರಕುಗಳ ಮೇಲೆ ಆ.1ರಿಂದ ಸುಂಕ ವಿಧಿಸುವುದಾಗಿ ಪ್ರಕಟಿಸಿದ್ದಾರೆ. ಜಪಾನ್, ದಕ್ಷಿಣ ಕೊರಿಯಾ ಸಹಿತ ಮಲೇಷ್ಯಾ, ಕಜಕಿಸ್ತಾನ, ದಕ್ಷಿಣ ಆಫ್ರಿಕಾ, ಮ್ಯಾನ್ಮಾರ್, ಲಾವೋಸ್, ಥಾಯ್ಲೆಂಡ್, ಬಾಂಗ್ಲಾದೇಶ, ಇಂಡೋನೇಷ್ಯಾ, ಟ್ಯುನೀಷಿಯಾ, ಬೊಸ್ನಿಯಾ, ಸರ್ಬಿಯಾ, ಕಾಂಬೋಡಿಯಾ ಮೇಲೆ ತೆರಿಗೆ ವಿಧಿಸಿದ್ದಾರೆ. ಜಪಾನ್, ದಕ್ಷಿಣ ಕೊರಿಯಾ, ಕಜಕಿಸ್ತಾನ, ಮಲೇಷ್ಯಾ, ಟ್ಯುನೀಷಿಯಾದ ಮೇಲೆ ಶೇ.25, ಥಾಯ್ಲೆಂಡ್, ಕಾಂಬೋಡಿಯಾ ಮೇಲೆ ಶೇ.36, ಬಾಂಗ್ಲಾದೇಶ, ಸರ್ಬಿಯಾ –ಶೇ.35, ಮ್ಯಾನ್ಮಾರ್, ಲಾವೋಸ್–ಶೇ.40, ಇಂಡೋನೇಷ್ಯಾ –ಶೇ.32, ದಕ್ಷಿಣ ಆಫ್ರಿಕಾ, ಬೊಸ್ನಿಯಾ–ಶೇ.30ರಷ್ಟು ಸುಂಕ ಹೇರಿದ್ದಾರೆ. ಈ ರಾಷ್ಟ್ರಗಳು ಅಮೆರಿಕದಿಂದ ರಫ್ತಾಗುವ ಸರಕುಗಳಿಗೆ ಹೆಚ್ಚುವರಿ ಸುಂಕ ವಿಧಿಸಿದರೆ ಅದಕ್ಕೆ ತಕ್ಕಂತೆ ಪ್ರತಿಸುಂಕ ವಿಧಿಸುವುದಾಗಿಯೂ ಟ್ರಂಪ್ ಎಚ್ಚರಿಸಿದ್ದಾರೆ.

ಅಮೆರಿಕದಲ್ಲಿ ಭೀಕರ ಅಪಘಾತ; ಭಾರತ ಮೂಲದ ನಾಲ್ವರ ಸಾವು



ನವದೆಹಲಿ: ಅಮೆರಿಕದ ಅಲಬಾಮ ರಾಜ್ಯದ ಗ್ರೀನ್ ಕೌಂಟಿಯಲ್ಲಿ ಸಂಭವಿಸಿದ ಭೀಕರ ಕಾರು ಅಪಘಾತದಲ್ಲಿ ಭಾರತದ ಹೈದರಾಬಾದ್ ಮೂಲದ ನಾಲ್ವರು ಸಾವನ್ನಪ್ಪಿದ್ದಾರೆ. ಅಟ್ಲಾಂಟಾದಲ್ಲಿ ಸಂಬಂಧಿಕರನ್ನು ಭೇಟಿ ಮಾಡಿ ಡಾಲಸ್‌ನಲ್ಲಿರುವ ತಮ್ಮ ನಿವಾಸಕ್ಕೆ ಮರಳುತ್ತಿರುವಾಗ, ಮಾರ್ಗಮಧ್ಯೆ ಈ ಅಪಘಾತ ಸಂಭವಿಸಿದೆ. ವೆಂಕಟ್ ಬೇಜುಗಮ್, ಅವರ ಪತ್ನಿ ತೇಜಸ್ವಿನಿ ಚೊಲ್ಲೇತಿ, ಹಾಗೂ ಇಬ್ಬರು ಮಕ್ಕಳಾದ ಸಿದ್ಧಾರ್ಥ್, ಮೃದಾ ಬೇಜುಗಮ್ ಮೃತರು. ಗ್ರೀನ್ ಕೌಂಟಿ ಬಳಿ ಈ ನಾಲ್ವರು ಕಾರಿನಲ್ಲಿ ಹೋಗುತ್ತಿದ್ದಾಗ ಮಿನಿ ಟ್ರಕ್‌ವೊಂದು ನಿಗದಿತ ಲೇನ್ ಬಿಟ್ಟು ಬೇರೆ ಲೇನ್‌ನಲ್ಲಿ ಬಂದು ಇವರ ಕಾರಿಗೆ ಗುದ್ದಿದೆ. ಇದರ ಪರಿಣಾಮವಾಗಿ ಕಾರು ನಜ್ಜುಗುಜ್ಜಾಗಿ ಬೆಂಕಿ ಹೊತ್ತಿಕೊಂಡಿದೆ. ಎಲ್ಲಾ ನಾಲ್ವರೂ ಕೂಡ ಸುಟ್ಟು, ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಡಿಎನ್‌ಎ ಪರೀಕ್ಷೆ, ಹಲ್ಲಿನ ಪರೀಕ್ಷೆ ಸೇರಿದಂತೆ ಫೋರೆನ್ಸಿಕ್ ಪರೀಕ್ಷೆ ನಡೆಸಲಾಗುತ್ತಿದ್ದು, ಈ ನಾಲ್ವರ ಗುರುತು ಖಚಿತವಾದ ಬಳಿಕ ಸಂಬಂಧಿಕರಿಗೆ ಮೃತದೇಹಗಳನ್ನು ಒಪ್ಪಿಸುವ ಸಾಧ್ಯತೆ ಇದೆ. ವೆಂಕಟ್ ಬೇಜುಗಮ್ ಕುಟುಂಬದವರು ಡಾಲಸ್‌ನ ಔಬ್ರೇ ಪಟ್ಟಣದ ಸಟ್ಟನ್ ಫೀಲ್ಡ್ಸ್ ಎಂಬಲ್ಲಿ ವಾಸವಿದ್ದರು.


ನೊಬೆಲ್ ಶಾಂತಿ ಪ್ರಶಸ್ತಿಗೆ ಡೊನಾಲ್ಡ್ ಟ್ರಂಪ್ ನಾಮ ನಿರ್ದೇಶನ: ಬೆಂಜಮಿನ್ ನೆತನ್ಯಾಹು



ನೆತನ್ಯಾಹು

ವಾಷಿಂಗ್ಟನ್: ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ನೊಬೆಲ್ ಶಾಂತಿ ಪ್ರಶಸ್ತಿಗೆ ನಾಮನಿರ್ದೇಶನ ಮಾಡಿರುವುದಾಗಿ ಘೋಷಿಸಿದ್ದು, ಪ್ರಶಸ್ತಿ ಸಮಿತಿಗೆ ಕಳುಹಿಸಿದ ಪತ್ರವನ್ನು ಟ್ರಂಪ್ ಅವರಿಗೆ ನೀಡಿದ್ದಾರೆ. ಟ್ರಂಪ್ ಅವರು ದೇಶಗಳ ಮಧ್ಯೆ ಶಾಂತಿ ನೆಲೆಸಲು ಸಹಕರಿಸುತ್ತಿದ್ದಾರೆ ಎಂದು ನೆತನ್ಯಾಹು ಸೋಮವಾರ ಅಮೆರಿಕದ ಶ್ವೇತಭವನದಲ್ಲಿ ಟ್ರಂಪ್ ಅವರೊಂದಿಗೆ ಭೋಜನ ಕೂಟದಲ್ಲಿ ಭಾಗವಹಿಸಿದ ನಂತರ ಹೇಳಿದ್ದಾರೆ. ಟ್ರಂಪ್ ಅವರಿಗೆ ಇತ್ತೀಚಿನ ವರ್ಷಗಳಲ್ಲಿ ಹಲವು ಬೆಂಬಲಿಗರು ಮತ್ತು ನಿಷ್ಠಾವಂತ ಶಾಸಕರು ನೊಬೆಲ್ ಶಾಂತಿ ಪ್ರಶಸ್ತಿ ನೀಡಬೇಕೆಂದು ನಾಮನಿರ್ದೇಶನಗಳನ್ನು, ಶಿಫಾರಸುಗಳನ್ನು ಮಾಡಿದ್ದಾರೆ. ಈ ಪ್ರತಿಷ್ಠಿತ ಪ್ರಶಸ್ತಿ ತಮಗಿನ್ನೂ ಸಿಕ್ಕಿಲ್ಲ ಎಂಬ ಬೇಸರ ಟ್ರಂಪ್ ಅವರಿಗಿದೆ. ಅದನ್ನು ಹಲವು ಸಂದರ್ಭಗಳಲ್ಲಿ ತೋರಿಸಿಕೊಂಡಿದ್ದಾರೆ. ಭಾರತ ಮತ್ತು ಪಾಕಿಸ್ತಾನ ಹಾಗೂ ಸರ್ಬಿಯಾ ಮತ್ತು ಕೊಸೊವೊ ದೇಶಗಳ ನಡುವಿನ ಸಂಘರ್ಷಗಳನ್ನು ನಿಲ್ಲಿಸುವಲ್ಲಿ ಟ್ರಂಪ್ ಮಧ್ಯಸ್ಥಿಕೆ ವಹಿಸಿದ್ದಾರೆ ಎಂದು ಅವರೇ ಅನೇಕ ಸಂದರ್ಭಗಳಲ್ಲಿ ಹೇಳಿಕೊಂಡದ್ದಿದೆ.


ದೆಹಲಿಯ ಇಂದಿರಾಗಾಂಧಿ ವಿಮಾನ ನಿಲ್ದಾಣ ವಿಶ್ವದ 9ನೇ ಜನನಿಬಿಡ ವಿಮಾನ ನಿಲ್ದಾಣ



ನವದೆಹಲಿ: ದೆಹಲಿಯ ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವು ವಿಶ್ವದ 9ನೇ ಜನನಿಬಿಡ ವಿಮಾನ ನಿಲ್ದಾಣವಾಗಿದ್ದು, 2024ರಲ್ಲಿ 7.7 ಕೋಟಿಗೂ ಹೆಚ್ಚು ಪ್ರಯಾಣಿಕರು ಪ್ರಯಾಣಿಸಿದ್ದಾರೆ ಎಂದು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳ ಮಂಡಳಿ ವರದಿಯಲ್ಲಿ ತಿಳಿಸಿದೆ. ಅಮೆರಿಕದ ಅಟ್ಲಾಂಟಾ ವಿಮಾನ ನಿಲ್ದಾಣವು ಅಗ್ರಸ್ಥಾನದಲ್ಲಿದೆ. ಈ ವಿಮಾನ ನಿಲ್ದಾಣದಿಂದ 10.80 ಕೋಟಿಗೂ ಹೆಚ್ಚು ಪ್ರಯಾಣಿಕರು ಪ್ರಯಾಣಿಸಿದ್ದಾರೆ. 2ನೇ ಸ್ಥಾನದಲ್ಲಿರುವ ದುಬೈ ವಿಮಾನ ನಿಲ್ದಾಣದಿಂದ 9.23 ಕೋಟಿ, 3ನೇ ಸ್ಥಾನದಲ್ಲಿರುವ ಡಲ್ಲಾಸ್/ಫೋರ್ಟ್‌ವರ್ತ್ ವಿಮಾನ ನಿಲ್ದಾಣದಿಂದ 8.78 ಕೋಟಿಗೂ ಹೆಚ್ಚು ಪ್ರಯಾಣಿಕರು ಪ್ರಯಾಣಿಸಿದ್ದಾರೆ.

ಅಗ್ರ 10 ವಿಮಾನ ನಿಲ್ದಾಣಗಳ ಪೈಕಿ ಜಪಾನ್‌ನ ಹನೆಡಾ (4), ಲಂಡನ್‌ನ ಹೀಥ್ರೂ (5), ಅಮೆರಿಕದ ಡೆನ್ವರ್ (6), ಟರ್ಕಿಯ ಇಸ್ತಾನ್‌ಬುಲ್ (7), ಅಮೆರಿಕದ ಚಿಕಾಗೊ (8) ಮತ್ತು ಚೀನಾದ ಶಾಂಘೈ ವಿಮಾನ ನಿಲ್ದಾಣವು 10ನೇ ಸ್ಥಾನದಲ್ಲಿ ಗುರುತಿಸಿಕೊಂಡಿದೆ. 20 ಜನನಿಬಿಡ ವಿಮಾನ ನಿಲ್ದಾಣಗಳ ಪೈಕಿ ಅಮೆರಿಕದ 6 ವಿಮಾನ ನಿಲ್ದಾಣಗಳು ಸ್ಥಾನ ಪಡೆದಿವೆ.

ಕಿರುತೆರೆಗೆ ಮರಳಿದ ಸಚಿವೆ ಸ್ಮೃತಿ ಇರಾನಿ!



ಮುಂಬಯಿ: ಮಾಜಿ ಕೇಂದ್ರ ಸಚಿವೆ ಸ್ಮೃತಿ ಇರಾನಿ ಹಲವು ವರ್ಷಗಳ ಬಳಿಕ ಮತ್ತೆ ಕಿರುತೆರೆಗೆ ಕಂಬ್ಯಾಕ್ ಮಾಡಲಿದ್ದಾರೆ. ಆ ಮೂಲಕ ಮತ್ತೊಮ್ಮೆ ಕಿರುತೆರೆ ವೀಕ್ಷಕರನ್ನು ರಂಜಿಸಲಿದ್ದಾರೆ.

ಸ್ಮೃತಿ ಇರಾನಿ ಒಂದು ಕಾಲದಲ್ಲಿ ಕಿರುತೆರೆ–ಹಿರಿತೆರೆಯಲ್ಲಿ ಮಿಂಚಿದವರು. 2000 ಇಸವಿಯ ಆರಂಭದಲ್ಲಿ ಕ್ಯೂಂಕಿ ಸಾಸ್ ಬಿ ಕಭಿ ಬಹು ಥಿ ಎನ್ನುವ ಧಾರಾವಾಹಿಯಲ್ಲಿ ಸ್ಮೃತಿ ಅವರು ಪ್ರಧಾನ ಪಾತ್ರದಲ್ಲಿ ನಟಿಸಿದ್ದರು. ತುಳಸಿ ವೀರ್ವಾನಿ ಪಾತ್ರದಲ್ಲಿ ಸ್ಮೃತಿ ವೀಕ್ಷಕರನ್ನು ರಂಜಿಸಿದ್ದರು. ಅವರ ಅಭಿನಯ ಕಿರುತೆರೆ ವೀಕ್ಷಕರ ಗಮನ ಸೆಳೆದಿತ್ತು. ಈ ಧಾರಾವಾಹಿ ಸತತ 7 ವರ್ಷ ನಂ.1 ಸ್ಥಾನ ಪಡೆದುಕೊಳ್ಳುವ ಮೂಲಕ ಜನಪ್ರಿಯತೆ ಪಡೆದುಕೊಂಡಿತ್ತು. 2008ರ ನವೆಂಬರ್‌ನಲ್ಲಿ ಧಾರಾವಾಹಿ ಮುಕ್ತಾಯ ಕಂಡಿತ್ತು. ಇದೀಗ ಸ್ಮೃತಿ ಸೀರಿಯಲ್ ಜಗತ್ತಿಗೆ ರೀ ಎಂಟ್ರಿ ಕೊಟ್ಟಿದ್ದಾರೆ. ಕ್ಯೂಂಕಿ ಸಾಸ್ ಬಿ ಕಭಿ ಬಹು ಥಿ ಸೀಸನ್–2 ಮೂಲಕ ಸ್ಮೃತಿ ಕಿರುತೆರೆಗೆ ಕಂಬ್ಯಾಕ್ ಮಾಡಲಿದ್ದಾರೆ. ಈ ಧಾರಾವಾಹಿ ಈಗಾಗಲೇ ಕಿರುತೆರೆ ಲೋಕದಲ್ಲಿ ನಿರೀಕ್ಷೆ ಹೆಚ್ಚಿಸಿದೆ. ಸ್ಮೃತಿ ಪಾತ್ರದ ಫಸ್ಟ್ ಲುಕ್ ರಿವೀಲ್ ಆಗಿದೆ. ಸಾಂಪ್ರದಾಯಿಕ ಗೃಹಿಣಿ ಲುಕ್‌ನಲ್ಲಿ ಕಾಣಿಸಿಕೊಂಡಿದ್ದು, ಕೆಂಪು ಬಿಂದಿ, ಮಂಗಳ ಸೂತ್ರದಿಂದ ಲೇಯರ್ ಮಾಡಲಾದ ಆಭರಣಗಳಲ್ಲಿ ಮಿಂಚಿದ್ದಾರೆ.

ಮೈಸೂರು ಮಿತ್ರ ಬುಧವಾರ 9 ಜುಲೈ 2025

ಕಾಡಾನೆ ದಾಳಿಗೆ ಅನಾಮಿಕ ವ್ಯಕ್ತಿ ಬಲಿ; ಉದ್ಯಮಿ ಪಾರು

ಮಡಿಕೇರಿ,ಜು.8– ಬಾಳಲೆಯಲ್ಲಿ ಕಾಡಾನೆ ದಾಳಿಯಿಂದ ಉದ್ಯಮಿಯೊಬ್ಬರು ಪಾರಾಗಿದ್ದರೆ, ಅಪರಿಚಿತ ವ್ಯಕ್ತಿಯೊಬ್ಬರು ಮೃತಪಟ್ಟಿರುವ ಘಟನೆ ನಡೆದಿದೆ.

ಪೊನ್ನಪ್ಪಸಂತೆಯ ನಿವಾಸಿ ಉದ್ಯಮಿ ಅಜಯ್ ಮುಂಜಾನೆ 7 ಗಂಟೆ ಸಮಯದಲ್ಲಿ ಎಂದಿನಂತೆ ಬಾಳೆಲೆ ಮುಖ್ಯರಸ್ತೆಯಲ್ಲಿ ಸೈಕಲ್‌ನಲ್ಲಿ ವಾಯುವಿಹಾರ ಮಾಡುತ್ತಿದ್ದಾಗ ಕಾಡಾನೆ ಎದುರಾಗಿ ದಾಳಿ ಮಾಡಲು ಮುಂದಾಗಿದೆ. ಕೂಡಲೆ ಸೈಕಲನ್ನು ಸ್ಥಳದಲ್ಲಿಯೇ ಬಿಟ್ಟು ಓಡಿ ಅಜಯ್ ಜೀವ ಉಳಿಸಿ ಕೊಂಡಿದ್ದಾರೆ. ಇದರಿಂದ ರೋಷಗೊಂಡ ಕಾಡಾನೆ ಸೈಕಲನ್ನು ತುಳಿದು ಜಖಂಗೊಳಿಸಿದೆ. ಆ ರಸ್ತೆಯಲ್ಲಿ ನಡೆದುಕೊಂಡು ಬರುತ್ತಿದ್ದ ಮಾನಸಿಕ ಅಸ್ವಸ್ಥನ ಮೇಲೆ ಕಾಡಾನೆ ದಾಳಿ ಕೊಂದು ಹಾಕಿದೆ


ಕಾಡಾನೆ ದಾಳಿಗೆ ಜಖಂಗೊಂಡಿರುವ ಉದ್ಯಮಿಯ ಸೈಕಲ್

ಮುಖ್ಯ ರಸ್ತೆಯಲ್ಲಿ 2–3 ದಿನಗಳಿಂದ ಸುತ್ತಾಡುತ್ತಿದ್ದ ಈತ ಅರಿವಿಲ್ಲದೆ, ನಡೆದು ಬರುತ್ತಿದ್ದಾಗ ಆನೆ ದಾಳಿಗೆ ಬಲಿಯಾಗಿದ್ದಾನೆ. ಸ್ಥಳಕ್ಕೆ ಅರಣ್ಯಾಧಿಕಾರಿಗಳು ಆಗಮಿಸಿ ಪರಿಶೀಲನೆ ನಡೆಸಿದರು.

ಗಾಂಜಾ ಸೇವನೆ: ಐವರು ಯುವಕರ ಬಂಧನ

ಸಿದ್ದಾಪುರ, ಜು.8– ಗಾಂಜಾ ಸೇವಿಸಿ ಅನುಚಿತವಾಗಿ ವರ್ತಿಸಿದ ಐವರು ಯುವಕರನ್ನು ಪೊಲೀಸರು ಬಂಧಿಸಿದ್ದಾರೆ. ಇಂಜಲಗೆರೆ ಗ್ರಾಮದ ನಿವಾಸಿ ರನೀಶ್ (35), ಕರಡಿಗೋಡು ಗ್ರಾಮದ ಸುರೇಶ್ ಕುಮಾರ್(29) ಹಾಗೂ ಹರೀಶ್ (26), ಅಮ್ಮತ್ತಿ ಗ್ರಾಮದ ಶಿವಕುಮಾರ(22) ಹಾಗೂ ಗುಹ್ಯ ಗ್ರಾಮದ ರಂಜಿತ್ (27)ಬಂಧಿತರಾಗಿದ್ದಾರೆ. ಸಿದ್ದಾಪುರದ ಖಾಸಗಿ ಬಸ್ ನಿಲ್ದಾಣದಲ್ಲಿರುವ ಸಾರ್ವಜನಿಕ ಬಸ್ ತಂಗುದಾಣದಲ್ಲಿ ಕುಳಿತುಕೊಂಡು ಜೋರಾಗಿ ಕಿರುಚಾಡುತ್ತಿರುವುದನ್ನು ಗಮನಿಸಿದ ಸ್ಥಳೀಯರು ನೀಡಿದ ದೂರಿನ ಮೇರೆಗೆ ಗಸ್ತಿನಲ್ಲಿದ್ದ ಪೊಲೀಸರು ವಿಚಾರಣೆ ನಡೆಸಿ, ಯುವಕರು ಮಾದಕ ವಸ್ತು ಸೇವಿಸಿರುವುದು ಗಮನಕ್ಕೆ ಬಂದಿದೆ. ಅವರನ್ನು ಮಡಿಕೇರಿಯ ಜಿಲ್ಲಾಸ್ಪತ್ರೆಯ ವೈದ್ಯಾಧಿಕಾರಿಗಳ ಪರೀಕ್ಷೆ ಮೇರೆಗೆ ಇವರನ್ನು ಬಂಧಿಸಿ ಪೊಲೀಸರು ಮೊಕದ್ದಮೆ ದಾಖಲಿಸಿದ್ದಾರೆ. ಸಿದ್ದಾಪುರ ಠಾಣಾಧಿಕಾರಿ ಮಂಜುನಾಥ್ ನೇತೃತ್ವದಲ್ಲಿ ಪಿಎಸ್ಐ ಶಿವಣ್ಣ, ಸಿಬ್ಬಂದಿಗಳಾದ ಮಣಿಕಂಠ, ಪ್ರಸನ್ನ ಕಾರ್ಯಾಚರಣೆ ನಡೆಸಿದ್ದರು.

ಹಸು ಕಳವು: ನಾಲ್ವರು ಪೊಲೀಸ್ ವಶಕ್ಕೆ


ಕೆ.ಎಂ.ಉಬೈದ್


ಗಜನ್ ಗಣಪತಿ


ಸಿ.ಇ.ಹನೀಫ


ಅಜನಸ್

ಗೋಣಿಕೊಪ್ಪ, ಜು.8–ನೊಕ್ಯ, ಭದ್ರಗೋಳ ಗ್ರಾಮಗಳಲ್ಲಿ ಹಸು ಕಳವು ಸಂಬಂಧ ನಾಲ್ವರು ಆರೋಪಿಗಳನ್ನು ಪೋಲೀಸರು ವಶಕ್ಕೆ ಪಡೆಯಲಾಗಿದ್ದು, ಕೃತ್ಯಕ್ಕೆ ಬಳಸಿದ 3 ವಾಹನ ಮೊಬೈಲ್ ವಶಕ್ಕೆ ಪಡೆದಿದ್ದಾರೆ.

ಚೆನ್ನಯ್ಯನಕೋಟೆ ನಿವಾಸಿ ಕೆ. ಎಂ. ಉಬೈದ್ (37), ಪೊನ್ನಂಪೇಟೆ ಸೀತಾ ಕಾಲೋನಿಯ ಗಜನ್ ಗಣಪತಿ (25), ಬೇಗೂರು ಗ್ರಾಮದಸಿ.ಇ.ಹನೀಫ (36), ಕೇರಳ ರಾಜ್ಯದ ಮಾನಂದವಾಡಿಯ ಅಜನಸ್ (21) ಬಂಧಿತ ಆರೋಪಿಗಳು. ಇವರಿಂದ 7 ಸಾವಿರ ನಗದು, ಕೃತ್ಯಕ್ಕೆ ಬಳಸಿದ್ದ, ಬೊಲೆರೋ ಜೀಪ್, ಓಮ್ನಿ, ಇಂಟ್ರಾ, ಹುಂಡೈ ಸೇರಿದಂತೆ 3 ಮೊಬೈಲ್ ವಶಕ್ಕೆ ಪಡೆಯಲಾಗಿದೆ. ಜೂನ್ ತಿಂಗಳಲ್ಲಿ ನೊಕ್ಯ ಗ್ರಾಮದ ಎ.ಎಸ್. ಆನಂದರ ಕೊಟ್ಟಿಗೆಯಿಂದ 2 ಹಸು, ಭದ್ರಗೋಲ ಗ್ರಾಮದ ಪಿ. ಪಿ. ಮುತ್ತಣ್ಣ ಅವರ ಕೊಟ್ಟಿಗೆಯಿಂದ ಹಸು ಕಳವು ಮಾಡಿದ ಸಂಬಂಧ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಡಿವೈಎಸ್ಪಿ ಎಸ್. ಮಹೇಶ್ ಕುಮಾರ್, ಗೋಣಿಕೊಪ್ಪ ವೃತ್ತ ನಿರೀಕ್ಷಕ ಶಿವರಾಜ ಮುಧೋಳ, ಉಪ ನಿರೀಕ್ಷಕ ಬಿ.ಕೆ. ಪ್ರದೀಪ್ ನೇತೃತ್ವದಲ್ಲಿ ವಿಶೇಷ ತನಿಖಾ ತಂಡ ರಚಿಸಿ, ಕೇರಳ ರಾಜ್ಯ ಮತ್ತು ಕಾನೂರು ಗ್ರಾಮದಲ್ಲಿ ವಶಕ್ಕೆ ಪಡೆಯಲಾಗಿದೆ.

ವಿಕಲಚೇತನರಿಗೆ ಸರ್ಕಾರದಿಂದ ಹಲವು ಸೌಲಭ್ಯ

ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್

ಮಡಿಕೇರಿ ಜು.8– ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆ, ವಿಕಲಚೇತನರ ಇಲಾಖೆಯಿಂದ ಸಾಮಾಜಿಕ ಆಧಾರಿತ ಸಿವಿಲ್ ಯೋಜನೆಯಲ್ಲಿ ದಿವ್ಯಾಂಗರಿಗೆ ಸಾಧನ ಸಲಕರಣೆಗಳನ್ನು ಸಂಸದ ಯದುವೀರ್ ಇಂದು ವಿತರಿಸಿದರು.

ನಗರದ ರೆಡ್‌ಕ್ರಾಸ್ ಭವನದಲ್ಲಿ ವಿಕಲಚೇತನರಿಗೆ ಸಾಧನ ಸಲಕರಣೆಗಳನ್ನು ವಿತರಿಸಿ ಮಾತನಾಡಿದ ಅವರು, ಜಿಲ್ಲೆಯ 201 ವಿಕಲಚೇತನರಿಗೆ 20 ಲಕ್ಷ ರೂ.ವೆಚ್ಚದಲ್ಲಿ 344 ಸಾಧನ ಸಲಕರಣೆಗಳನ್ನು ವಿತರಿಸಲಾಗುತ್ತಿದೆ. ಜೀವನದಲ್ಲಿ ಪ್ರತಿಯೊಬ್ಬರೂ ಒಂದಲ್ಲಾ ಒಂದು ರೀತಿ ಅವಲಂಬಿತರಾಗಿದ್ದಾರೆ. ಆ ನಿಟ್ಟಿನಲ್ಲಿ ವಿಕಲಚೇತನರಿಗೆ ಇನ್ನೂ ಹೆಚ್ಚಿನ ಅವಕಾಶ ನೀಡಬೇಕಿದೆ ಎಂದರು.

ರಾಷ್ಟ್ರದ ಅಭಿವೃದ್ಧಿಗೆ ವಿಕಲಚೇತನರು ಸಹ ಹಲವು ಕೊಡುಗೆ ನೀಡಿದ್ದು, ಇತರರಂತೆ ಬದುಕು ನಡೆಸುವಂತಾಗಲು ಸರ್ಕಾರ ಅವರಿಗೆ ಹಲವು ಸೌಲಭ್ಯ ನೀಡುತ್ತಿದೆ ಬಲಿಷ್ಠ ಹಾಗೂ ಆದರ್ಶ ಸಮಾಜ ನಿರ್ಮಾಣ ಮಾಡಲು ಎಲ್ಲರ ಕೊಡುಗೆ ಅಗತ್ಯ. ಆ ನಿಟ್ಟಿನಲ್ಲಿ ಜವಾಬ್ದಾರಿಯುತ ಸಮಾಜ ನಿರ್ಮಾಣದಲ್ಲಿ ವಿಕಲಚೇತನರಿಗೆ ಸಾಧ್ಯವಾದಷ್ಟು ಸಹಕಾರ ನೀಡುವಂತಾಗಬೇಕೆಂದು ಅಭಿಪ್ರಾಯಪಟ್ಟರು.


ಮಡಿಕೇರಿಯಲ್ಲಿ ವಿಕಲಚೇತನರಿಗೆ ಸಾಧನ ಸಲಕರಣೆಗಳನ್ನು ಸಂಸದ ಯದುವೀರ್ ವಿತರಿಸಿದರು.

ಮಾಜಿ ಸ್ಪೀಕರ್ ಕೆ.ಜಿ.ಬೋಪಯ್ಯ ಮಾತನಾಡಿ, 2047 ರೊಳಗೆ ವಿಕಸಿತ ಭಾರತ ಆಗಬೇಕು ಎಂಬ ದೃಷ್ಟಿಯಿಂದ ಸಮಾಜದ ಕಟ್ಟಕಡೆಯುವರನ್ನು ಗುರುತಿಸಿ ವಿಕಲಚೇತನರು ಸೇರಿದಂತೆ ಎಲ್ಲಾ ಜನ ಸಾಮಾನ್ಯರಿಗೂ ಹಲವು ಕಾರ್ಯಕ್ರಮ ತಲುಪಿಸಲು ಶ್ರಮಿಸಲಾಗುತ್ತಿದೆ. ವಿಕಲಚೇತನರು ಸಮಾಜದಲ್ಲಿ ಸತ್ಪ್ರಜೆಗಳಾಗಿ ಬದುಕುವಂತಾಗಬೇಕು. ಸರ್ಕಾರದ ಸೌಲಭ್ಯಗಳನ್ನು ಪಡೆದು ಎಲ್ಲರಂತೆ ಬದುಕು ನಡೆಸುವಂತಾಗಬೇಕು ಎಂದು ತಿಳಿಸಿದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ತಿಪ್ಪಣ್ಣ ಸಿರಸಗಿ ಮಾತನಾಡಿ, ವಿಕಲತೆ ಶಾಪವಲ್ಲ. ಆದರೆ ಅದನ್ನು ಮೆಟ್ಟಿ ನಿಲ್ಲುವಂತಾಗಬೇಕು. ಸರ್ಕಾರದ ಸೌಲಭ್ಯಗಳನ್ನು ಪಡೆದು ಸ್ವಉದ್ಯೋಗ ಕೈಗೊಳ್ಳುವಂತಾಗಿ ಸ್ವಾವಲಂಬಿ ಬದುಕು ನಡೆಸುವಂತಾಗಬೇಕು ಎಂದರು.

ರೆಡ್‌ಕ್ರಾಸ್ ಸಂಸ್ಥೆಯ ಸಭಾಪತಿ ರವೀಂದ್ರ ರೈ ಮಾತನಾಡಿ, ರೆಡ್‌ಕ್ರಾಸ್ ಸಂಸ್ಥೆಯಿಂದ ವಿಕಲಚೇತನರಿಗೆ ಹಲವು ಸೌಲಭ್ಯಗಳನ್ನು ಕಲ್ಪಿಸಲಾಗುತ್ತದೆ. ಸದ್ಯ 25 ಜನರಿಗೆ ರೈನ್‌ಕೋಟ್ ವಿತರಿಸಲಾಗಿದೆ. ಸರ್ಕಾರದ ಸಹಕಾರದಲ್ಲಿ ರೆಡ್ ಕ್ರಾಸ್ ಭವನ ನಿರ್ಮಿಸಲಾಗಿದ್ದು, ಕಟ್ಟಡದ ಮೇಲ್ಭಾಗದಲ್ಲಿ ನಿರ್ಮಾಣಕ್ಕೆ ಅಗತ್ಯ ಸಹಕಾರ ನೀಡುವಂತೆ ಸಂಸದರಿಗೆ ಮನವಿ ಮಾಡಿದರು. ಜಿಲ್ಲಾ ವಿಕಲಚೇತನ ಅಧಿಕಾರಿ ವಿಮಲ ಮಾತನಾಡಿ, ಜಿಲ್ಲೆಯಲ್ಲಿ ಮಳೆ ಇರುವ ಕಾರಣ ಆಯಾಯ ತಾಲೂಕು ಮಟ್ಟದಲ್ಲಿ ಸಾಧನ ಸಲಕರಣೆ ವಿತರಿಸ ಲಾಗುತ್ತಿದೆ ಎಂದು ಹೇಳಿದರು.

ಜಿಲ್ಲಾ ವಿಕಲಚೇತನರ ಸಂಘಧ ಅಧ್ಯಕ್ಷ ಮಹೇಶ್ವರ, ನಗರಸಭೆ ಉಪಾಧ್ಯಕ್ಷ ಮಹೇಶ್ ಜೈನಿ, ಕಾಫಿ ಬೆಳೆಗಾರರ ಸಂಘದ ಅಧ್ಯಕ್ಷ ನಾಪಂಡ ರವಿಕಾಳಪ್ಪ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕಾರ್ಯಕ್ರಮ ನಿರೂಪಣಾ ಅಧಿಕಾರಿ ಪ್ರಸನ್ನ ಕುಮಾರ್, ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್‌ನ ಅಂಕಾಚಾರಿ, ರೆಡ್‌ಕ್ರಾಸ್ ಸಂಸ್ಥೆಯ ಸಹ ಕಾರ್ಯದರ್ಶಿ ಮಧುಕರ್, ಇತರರು ಇದ್ದರು.

ನಿರ್ಲಕ್ಷ್ಯ ತೋರುವ ಅಧಿಕಾರಿಗಳು ಬೇರೆಡೆಗೆ ವರ್ಗ ಮಾಡಿಸಿಕೊಳ್ಳಿ: ಸಂಕೇತ್ ಪೂವಯ್ಯ

ಮಡಿಕೇರಿ, ಜು.8– ಕ್ಷೇತ್ರದಲ್ಲಿ ಸರಿಯಾಗಿ ಕೆಲಸ ನಿರ್ವಹಿಸದೆ ನಿರ್ಲಕ್ಷ್ಯ ತೋರುತ್ತಿರುವ ಅಧಿಕಾರಿಗಳು ತಮಗೆ ಬೇಕಾದ ಊರುಗಳಿಗೆ ವರ್ಗಾವಣೆ ಮಾಡಿಸಿಕೊಳ್ಳಿ ಎಂದು ರಾಜ್ಯ ವನ್ಯಜೀವಿ ಮಂಡಳಿ ಸದಸ್ಯ ಸಂಕೇತ್ ಪೂವಯ್ಯ ಅರಣ್ಯಾಧಿಕಾರಿಗಳ ವಿರುದ್ಧ ಅಸಮಾಧಾನ ಹೊರ ಹಾಕಿದ್ದಾರೆ.


ಸ್ಥಳೀಯ ರೈತರು ಹಾಗೂ ಬೆಳೆಗಾರರ ಸಮ್ಮುಖದಲ್ಲಿ ನಡೆದ ಮಹತ್ವದ ಸಭೆಯಲ್ಲಿ ಸಂಕೇತ್ ಪೂವಯ್ಯ ಮಾತನಾಡಿದರು.

ಕಾಡಾನೆ ಹಾವಳಿ ನಿಯಂತ್ರಣ ಕುರಿತು ಗೋಣಿಕೊಪ್ಪದ ಮಾನಿಲ್ ಅಯ್ಯಪ್ಪ ಸೇವಾ ಸಮಿತಿ ಅಧ್ಯಕ್ಷ ಸಣ್ಣುವಂಡ ರಮೇಶ್ ಅಧ್ಯಕ್ಷತೆಯಲ್ಲಿ ಮಾಯಮುಡಿಯ ಕಮಟೆ ಈಶ್ವರ ದೇವಾಲಯದ ಆವರಣದಲ್ಲಿ ಅರಣ್ಯಾಧಿಕಾರಿಗಳು, ಸ್ಥಳೀಯ ರೈತರು ಹಾಗೂ ಬೆಳೆಗಾರರ ಸಮ್ಮುಖದಲ್ಲಿ ನಡೆದ ಮಹತ್ವದ ಸಭೆಯಲ್ಲಿ ದಕ್ಷಿಣ ಕೊಡಗಿನ ಮಾಯಮುಡಿ, ತಿತಿಮತಿ, ದೇವಪುರ ಪಂಚಾಯಿತಿ ವ್ಯಾಪ್ತಿಯಲ್ಲಿ ನಿರಂತರ ಕಾಡಾನೆಗಳ ಉಪಟಳದಿಂದ ಬೇಸತ್ತ ಕಾಫಿ ಬೆಳೆಗಾರರು ಹಾಗೂ ರೈತರು ಕಾಡಾನೆ ಉಪಟಳ ಕುರಿತು ಅರಣ್ಯ ಇಲಾಖೆ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಕಾಡಾನೆ ಸಮಸ್ಯೆಗಳ ಬಗ್ಗೆ ಹಲವು ಬಾರಿ ಅಧಿಕಾರಿಗಳಿಗೆ ಲಿಖಿತ ರೂಪದಲ್ಲಿ ನೀಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಕಾಡಾನೆಗಳು ಕಾಫಿ ತೋಟದಲ್ಲಿ ಬೀಡು ಬಿಟ್ಟಿವೆ. ಇದರಿಂದ ಬೆಳೆಗಾರರು ಮತ್ತು ಕಾರ್ಮಿಕರು ಕಾಫಿ ತೋಟಕ್ಕೆ ತೆರಳಲು ಸಾಧ್ಯವಾಗುತ್ತಿಲ್ಲ ಎಂದು ದೇವಸ್ಥಾನದ ಅಧ್ಯಕ್ಷ ಸಣ್ಣುವಂಡ ರಮೇಶ್ ದೂರಿದರು

ಮಾಜಿ ಶಾಸಕ ಸಿ.ಎಸ್. ಅರುಣ್ ಮಾಚಯ್ಯ ಮಾತನಾಡಿ, ಸರ್ಕಾರದ ವತಿಯಿಂದ ಅರಣ್ಯ ಇಲಾಖೆಗೆ ಕೋಟ್ಯಾಂತರ ರೂ. ಅನುದಾನ ಮಂಜೂರಾಗಿದ್ದರೂ ಅರಣ್ಯ ಇಲಾಖೆ ಅಳವಡಿಸುವ ಸೋಲಾರ್ ಬೇಲಿ ನಿರ್ವಹಣೆ ಇಲ್ಲದೆ ಪ್ರಯೋಜನಕ್ಕೆ ಬರುತ್ತಿಲ್ಲ ಆದರೆ ಕಾಫಿ ಬೆಳೆಗಾರರು ತಮ್ಮ ತೋಟಗಳಿಗೆ ಅಳವಡಿಸುವ ಸೋಲಾರ್ ಬೇಲಿಗಳು ಯಾವುದೇ ಅಡೆತಡೆಗಳಿಲ್ಲದೆ ಕೆಲಸ ನಿರ್ವಹಿಸುತ್ತವೆ. ಅರಣ್ಯ ಇಲಾಖೆಗೆ ಯಾಕೆ ಸಾಧ್ಯವಾಗುತ್ತಿಲ್ಲ ಎಂದು ಪ್ರಶ್ನಿಸಿದರೆ, ಡಾ. ಚೆಪ್ಪುಡಿರ ಕುಶಾಲಪ್ಪ ಮಾತನಾಡಿದರು.

ತಿತಿಮತಿ ವಲಯದ ಎಸಿಎಫ್ ಗೋಪಾಲ್ ಮಾತನಾಡಿ, ಈಗಾಗಲೇ ಕಾಡಾನೆಗಳ ನಿಯಂತ್ರಣಕ್ಕೆ ಹಲವೆಡೆ ರೈಲ್ವೆ ಬ್ಯಾರಿಕೇಡ್ ನಿರ್ಮಿಸಿರುವ ಜಾಗದಲ್ಲಿ ಕೆಲವು ಕಾಮಗಾರಿಗಳು ಪೂರ್ಣಗೊಳ್ಳದಿರುವುದರಿಂದ ಈ ಭಾಗದಿಂದ ಕಾಡಾನೆಗಳು ಗ್ರಾಮಕ್ಕೆ ಆಗಮಿಸುತ್ತಿವೆ. ಮುಂದುವರೆದ ಕಾಮಗಾರಿಗೆ ಸದ್ಯದಲ್ಲಿಯೇ ಚಾಲನೆ ದೊರೆಯಲಿದೆ. ಕಾಡಾನೆಗಳು ಬರುವ ಜಾಗವನ್ನು ಸೋಲಾರ್ ಬೇಲಿ, ಕಂದಕಗಳಿಂದ ನಿಯಂತ್ರಿಸುವ ಕಾರ್ಯಗಳು ನಡೆಯುತ್ತಿವೆ ಎಂದು ಸಭೆಗೆ ಮಾಹಿತಿ ನೀಡಿದರು.

ಆರ್‌ಎಫ್ಓ ದೇವರಾಜ್ ಮಾತನಾಡಿ, ಕೆಲವು ಭಾಗದಲ್ಲಿ ಕಂದಕ ನಿರ್ಮಾಣಗೊಂಡಿದ್ದರೂ ಮಣ್ಣಿನ ಸಮಸ್ಯೆಯಿಂದಾಗಿ ಅವುಗಳು ಕುಸಿದು ಬೀಳುತ್ತಿವೆ. ಸೋಲಾರ್ ಬೇಲಿಗಳ ನಿರ್ವಹಣೆಗೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಸಭೆಗೆ ಮಾಹಿತಿ ನೀಡಿದರು.

ಕುಡಿಯುವ ನೀರಿನ ಘಟಕಕ್ಕೆ ಶಾಸಕರಿಂದ ಭೂಮಿ ಪೂಜೆ


ಕುಡಿಯುವ ನೀರಿನ ಘಟಕಕ್ಕೆ ಶಾಸಕ ಪೊನ್ನಣ್ಣ ಭೂಮಿ ಪೂಜೆ ನೆರವೇರಿಸಿದರು.

ವಿರಾಜಪೇಟೆ, ಜು.8–ಸಾರ್ವಜನಿಕರ ಅನುಕೂಲಕ್ಕಾಗಿ ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಾಣಕ್ಕೆ ಶಾಸಕ ಎ.ಎಸ್. ಪೊನ್ನಣ್ಣ ಭೂಮಿ ಪೂಜೆ ನೆರವೇರಿಸಿದರು.

ಪುರಸಭೆ ವ್ಯಾಪ್ತಿಯ ವಾರ್ಡ್ ನಂ.1 ರಲ್ಲಿ ಶಾಂತ ಚಿತ್ರಮಂದಿರದ ಬಳಿ ನಡೆದ ಕಾರ್ಯಕ್ರಮದಲ್ಲಿ ಶಾಸಕ ಪೊನ್ನಣ್ಣ ಮಾತನಾಡಿ ಸರಕಾರದ ಅನುದಾನದಲ್ಲಿ ನಡೆಯುತ್ತಿರುವ ಕಾಮಗಾರಿಗಳು ಅವಧಿಗೆ ಸರಿಯಾಗಿ ಮುಗಿಸುವುದಲ್ಲದೆ, ಕಾಮಗಾರಿ ಉತ್ತಮ ಗುಣಮಟ್ಟದ್ದಾಗಿರಬೇಕು. ಎಂದು ಹೇಳಿದರು.

ಸ್ಥಳೀಯ ವಾರ್ಡ್ ಸದಸ್ಯೆ ಪುರಸಭೆ ಉಪಾಧ್ಯಕ್ಷೆ ಫಸಿಹಾ ತಬಸಮ್, ಮುಖ್ಯಾಧಿಕಾರಿ ಪಿ.ಕೆ.ನಾಚಪ್ಪ, ಸ್ಥಾಯಿ ಸಮಿತಿ ಅಧ್ಯಕ್ಷ ಅಬ್ದುಲ್ ಜಲೀಲ್ ಮತ್ತು ಹೆಚ್. ಎಂ. ಪೂರ್ಣಿಮಾ, ಸದಸ್ಯರಾದ ಸಿ.ಕೆ. ಪೃಥ್ವಿನಾಥ್, ರಜನಿಕಾಂತ್, ಮಹ್ಮದ್ ರಾಫಿ, ಮಹದೇವ್, ಶಭರೀಶ್ ಶೆಟ್ಟಿ, ಜಿ.ಜಿ.ಮೋಹನ್, ಶಹೂಲ್ ಹಮೀದ್, ಸುನಿತ ಜೂನಾ, ವಿಧಾನ ಪರಿಷತ್ ಮಾಜಿ ಸದಸ್ಯ ಸಿ.ಎಸ್.ಅರುಣ್ ಮಾಚಯ್ಯ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಿ.ರಂಜಿ ಪೂಣಚ್ಚ, ಧರ್ಮಜ ಉತ್ತಪ್ಪ, ಸಿ.ಎ.ನಾಸೀರ್, ತಾಲೂಕು ಸಮಿತಿಯ ಜಾನ್ಸನ್ ಮತ್ತು ಸ್ಥಳಿಯ ನಿವಾಸಿಗಳು ಉಪಸ್ಥಿತರಿದ್ದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರ ಆಯ್ಕೆ: ವೀಕ್ಷಕರಿಂದ ಅಭಿಪ್ರಾಯ ಸಂಗ್ರಹ

ಚಾಮರಾಜನಗರ, ಜು. 8– ಜಿಲ್ಲಾ ಕಾಂಗ್ರೆಸ್‌ಗೆ ನೂತನ ಸಾರಥಿಯನ್ನು ನೇಮಕ ಮಾಡುವ ಕುರಿತು ಕಾಂಗ್ರೆಸ್ ಕಚೇರಿಯಲ್ಲಿ ಇಂದು ಕಾಂಗ್ರೆಸ್ ವೀಕ್ಷಕರು ಆಗಮಿಸಿ, ಆಕಾಂಕ್ಷಿಗಳಿಂದ ಅರ್ಜಿ ಪಡೆದುಕೊಳ್ಳುವ ಜೊತೆಗೆ ಪಕ್ಷದ ಮುಖಂಡರು ಹಾಗೂ ಇತರೇ ಪದಾಧಿಕಾರಿಗಳಿಂದ ಅಭಿಪ್ರಾಯವನ್ನು ಸಂಗ್ರಹಿಸಿದರು.


ಜಿಲ್ಲಾ ಕಾಂಗ್ರೆಸ್ ನೂತನ ಅಧ್ಯಕ್ಷರ ಆಯ್ಕೆ ಸಂಬಂಧ ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಮಾಜಿ ಶಾಸಕ ಶಿವಶಂಕರರೆಡ್ಡಿ, ಜಿಲ್ಲಾಕಾಂಗ್ರೆಸ್ ನೂತನಅಧ್ಯಕ್ಷ ಸ್ಥಾನದ ಆಕಾಂಕ್ಷಿಗಳ ಅಭಿಪ್ರಾಂಯ ಸಂಗ್ರಹಣೆ ಸಭೆಯಲ್ಲಿ ಮಾತನಾಡಿದರು.

ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಕೆಪಿಸಿಸಿ ವೀಕ್ಷಕರಾಗಿ ಆಗಮಿಸಿದ್ದ ಮಾಜಿ ಸಚಿವ ಶಿವಶಂಕರ ರೆಡ್ಡಿ ಹಾಗೂ ಶಾಸಕ ಸಂಪಂಗಿ ವರಿಷ್ಟರು ನೀಡಿರುವ ಸೂಚನೆಗಳನ್ನು ತಿಳಿಸಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎ.ಎಸ್. ಗುರುಸ್ವಾಮಿ, ತೋಟೇಶ್, ಮುಕುಂದ ವರ್ಮ, ಜಿಲ್ಲಾ ಉಪಾಧ್ಯಕ್ಷ ಬಿ.ಕೆ. ರವಿಕುಮಾರ್, ಮಾಜಿ ಅಧ್ಯಕ್ಷ ಎಚ್.ಎಸ್. ನಂಜಪ್ಪ, ಯವ ಕಾಂಗ್ರೆಸ್ ಮಾಜಿ ಅಧ್ಯಕ್ಷ ಕೆರೆಹಳ್ಳಿ ನವೀನ್, ಹನೂರು ನಾಗೇಂದ್ರ, ಹೆಗ್ಗೊಠಾರ ಮಹದೇವಸ್ವಾಮಿ ಅವರು ವರಿಷ್ಠರಿಗೆ ಮನವಿ ಮಾಡಿಕೊಂಡರು.

ನಂತರ ನಗರದ ಪ್ರವಾಸಿ ಮಂದಿರದಲ್ಲಿ ಪ್ರತ್ಯೇಕವಾಗಿ ಶಾಸಕರು, ಜಿಲ್ಲಾ ಕಾಂಗ್ರೆಸ್ ಸಮಿತಿಯ ಪದಾಧಿಕಾರಿಗಳು, ಬ್ಲಾಕ್ ಅಧ್ಯಕ್ಷರು, ಮುಂಚೂಣಿ ಘಟಕದ ಅಧ್ಯಕ್ಷರು, ಪಕ್ಷದ ಪ್ರಮುಖರು ವರಿಷ್ಠರನ್ನು ಭೇಟಿ ಮಾಡಿ ತಮ್ಮ ಅಭಿಪ್ರಾಯವನ್ನು ಹೇಳಿಕೊಂಡರು. ಮಾಜಿ ಸಚಿವ ಶಿವಶಂಕರ ರೆಡ್ಡಿ ಮಾತನಾಡಿ, ರಾಜ್ಯದ 31 ಜಿಲ್ಲೆಗಳಲ್ಲೂ ಜಿಲ್ಲಾ ಕಾಂಗ್ರೆಸ್ ನೂತನ ಅಧ್ಯಕ್ಷರ ಆಯ್ಕೆ ಮಾಡಲಾಗುತ್ತಿದ್ದು, ಈಗಾಗಲೇ ಪ್ರದೇಶ ಕಾಂಗ್ರೆಸ್ ಸಮಿತಿ ಆದೇಶ ಹೊರಡಿಸಿದೆ. ಪಕ್ಷ ಸಂಘಟನೆ ಹಿತ ದೃಷ್ಟಿಯಿಂದ ಉತ್ತಮವಾಗಿ ಕೆಲಸ ಮಾಡಿರುವವರನ್ನು ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡಬೇಕಾಗಿದೆ. ಅರ್ಹರು ಹಾಗೂ ಆಸಕ್ತಿವುಳ್ಳವರು ಸಭೆಯಲ್ಲಿ ಇಲ್ಲವೇ ಪ್ರತ್ಯೇಕವಾಗಿ ಭೇಟಿ ಮಾಡಿ ತಮ್ಮ ಅಭಿಪ್ರಾಯವನ್ನು ತಿಳಿಸಬಹುದಾಗಿದೆ. ನಾವು ಕೇವಲ ವರಿಷ್ಟ ಸೂಚನೆಯನ್ನು ಪಾಲನೆ ಮಾಡುತ್ತೇವೆ. ನಿಮ್ಮ ಅಭಿಪ್ರಾಯಗಳನ್ನು ದಾಖಲಿಸಿಕೊಂಡು ವರಿಷ್ಠರಿಗೆ ಕೊಡುತ್ತೇವೆ. ಅವರು ಅಂತಿಮ ತೀರ್ಮಾನ ತೆಗೆದುಕೊಳ್ಳಲಿದ್ದಾರೆ ಎಂದು ತಿಳಿಸಿದರು.

ಜಿಲ್ಲಾಕಾಂಗ್ರೆಸ್ ಅಧ್ಯಕ್ಷರಾಗಿ ತಾವು 9ವರ್ಷಗಳ ಕಾಲ ಪಕ್ಷವಹಿಸಿದ ಎಲ್ಲ ಕೆಲಸಗಳನ್ನು ಸಮರ್ಥವಾಗಿ ನಿರ್ವಹಿಸಲು ಪಕ್ಷದ ಮುಂಚೂಣಿ ಘಟಕದ ಪದಾಧಿಕಾರಿಗಳು ತಮಗೆ ತುಂಬು ಹೃದಯದ ಸಹಕಾರ ನೀಡಿದ್ದಾರೆ. ಕೆಪಿಸಿಸಿ ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರನ್ನು ನೇಮಕ ಮಾಡಲು ಮುಂದಾಗಿದೆ. ಪಕ್ಷದ ಬೆಳವಣಿಗೆ ದೃಷ್ಟಿಯಿಂದ ಪದಾಧಿಕಾರಿಗಳ ಬದಲಾವಣೆ ಮಾಡುವ ಪಕ್ಷದ ನಿಲುವು ಸ್ವಾಗತಾರ್ಹ ಎಂದು ಪಿ.ಮರಿಸ್ವಾಮಿ ಹೇಳಿದರು.

ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಎಚ್.ಎಂ.ಗಣೇಶಪ್ರಸಾದ್ ಮಾತನಾಡಿ ಎಲ್ಲರ ಅಭಿಪ್ರಾಯದಂತೆ ಜಿಲ್ಲೆಯಲ್ಲಿ ಸಮರ್ಥವಾಗಿ ಪಕ್ಷವನ್ನು ಮುನ್ನಡೆಸುವ ಸಾರಥಿಯನ್ನು ಆಯ್ಕೆ ಮಾಡೋಣ. ನಿಮ್ಮೆಲ್ಲರ ಅಭಿಪ್ರಾಯ ಮುಕ್ತವಾಗಿರಲಿ. ಪಕ್ಷವನ್ನು ಪ್ರಬಲವಾಗಿ ಸಂಘಟನೆ ಮಾಡುವ ನಿಟ್ಟಿನಲ್ಲಿ ನಮ್ಮೆಲ್ಲರ ಸಹಕಾರ ಇದ್ದೇ ಇರುತ್ತದೆ ಎಂದರು.

ಕಾಂಗ್ರೆಸ್ ವೀಕ್ಷಕ ಶಾಸಕ ಸಂಪಂಗಿ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಬಸವರಾಜು, ಮಿಲಂದರ್ ಧರ್ಮ ಸೇನಾ, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಆರ್. ಮಹದೇವ್, ಚಿಕ್ಕಮಹದೇವ್, ಬ್ಲಾಕ್ ಅಧ್ಯಕ್ಷ ಹೊಂಗನೂರು ಚಂದ್ರು, ಎ.ಎಸ್.ಗುರುಸ್ವಾಮಿ, ಚುಡಾ ಅಧ್ಯಕ್ಷ ಮಹಮದ್ ಅಸ್ಗರ್, ಮಹಿಳಾ ಅಧ್ಯಕ್ಷೆ ಲತಾರಾಜಶೇಖರ್ ಜತ್ತಿ, ಮಾಜಿ ಶಾಸಕ ಜಿ.ಎನ್.ನಂಜುಂಡಸ್ವಾಮಿ, ಕಾರ್ಯಕರ್ತರು, ಮುಖಂಡರು ಹಾಜರಿದ್ದರು.

ಮಿನಿಬಸ್ ಉರುಳಿ 13 ಮಂದಿಗೆ ಗಾಯ

ಯಳಂದೂರು, ಜು.8(ವಿ.ನಾಗರಾಜು)– ತಾಲೂಕಿನ ಬಿಳಿಗಿರಿರಂಗನಬೆಟ್ಟದ ಚೈನ್‌ಗೇಟ್ ಬಳಿಯ ತಿರುವಿನಲ್ಲಿ ಸೋಮವಾರ ನಡೆದ ರಸ್ತೆ ಅಪಘಾತದಲ್ಲಿ 13 ಮಂದಿ ಗಾಯಗೊಂಡಿರುವ ಘಟನೆ ನಡೆದಿದೆ.

ದೇವರ ದರ್ಶನ ಮುಗಿಸಿ ವಾಪಸ್ಸಾಗುತ್ತಿದ್ದ ವೇಳೆ, ಚೈನ್ ಗೇಟ್‌ನ ಬಳಿ ಇರುವ ತಿರುವಿನಲ್ಲಿ ಚಾಲಕನ ನಿಯಂತ್ರಣ ತಪ್ಪಿದ ಮಿನಿಬಸ್ ಆಯತಪ್ಪಿ ಉರುಳಿ ಬಿದ್ದಿದೆ. ಇದರಲ್ಲಿ ಚಾಲಕ ಸೇರಿದಂತೆ 13ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ನಂತರ ಇವರನ್ನು ಕೂಡಲೇ ಸ್ಥಳೀಯರ ಸಹಕಾರದೊಂದಿಗೆ ಆಂಬುಲೆನ್ಸ್, ಪೊಲೀಸರ ಗಸ್ತು ವಾಹನ ಹಾಗೂ ಸ್ಥಳೀಯರ ವಾಹನಗಳ ಮೂಲಕ ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು ಪ್ರಥಮ ಚಿಕಿತ್ಸೆಯನ್ನು ನೀಡಲಾಗಿದೆ.

ಒಂದೇ ಕುಟುಂಬಕ್ಕೆ ಸೇರಿದ ಇವರೆಲ್ಲಾ ಪ್ರವಾಸಕ್ಕೆ ತುಮಕೂರಿನಿಂದ ಬಿಳಿಗಿರಿರಂಗನಬೆಟ್ಟಕ್ಕೆ ಬಂದಿದ್ದು, ದೇವರ ದರ್ಶನ ಮುಗಿಸಿ ಹಿಂದಿರುಗುತ್ತಿದ್ದಾಗ ಅಪಘಾತ ನಡೆದಿದೆ. ಬಸ್ಸಿನಲ್ಲಿ ಚಾಲಕ, ಸಹಾಯಕರನ್ನು ಬಿಟ್ಟರೆ 16 ಮಂದಿ ಮಹಿಳೆಯರಾಗಿದ್ದಾರೆ. ಇವರಲ್ಲಿ ತೀವ್ರವಾಗಿ ಗಾಯ ಗೊಂಡ ಚಂದನ, ಸುಮಾ, ಸಂಧ್ಯಾ ಸೇರಿದಂತೆ ಆರು ಮಂದಿಯನ್ನು ಹೆಚ್ಚಿನ ಚಿಕಿತ್ಸೆಗೆಂದು ನಗರದ ಜಿಲ್ಲಾಸ್ಪತ್ರೆಗೆ ಕರೆದೊಯ್ಯಲಾಗಿದೆ. ಸ್ಥಳಕ್ಕೆ ಎಸ್.ಪಿ ಬಿ.ಟಿ. ಕವಿತಾ, ಹೆಚ್ಚುವರಿ ಎಸ್.ಪಿ ಶಶಿಧರ್ ಡಿವೈಎಸ್‌ಪಿ ಧರ್ಮೇಂದ್ರ ಭೇಟಿ ನೀಡಿ ಪರಿಶೀಲನೆ ನಡೆಸಿ ಮುಂದಿನ ಕ್ರಮ ವಹಿಸಿದ್ದಾರೆ.


ತಾಲೂಕಿನ ಬಿಳಿಗಿರಿರಂಗನಬೆಟ್ಟದಲ್ಲಿ ಚಾಲಕನ ನಿಯಂತ್ರಣ ತಪ್ಪಿ ಉರುಳಿ ಬಿದ್ದಿರುವ ಮಿನಿ ಬಸ್

ಪಡಿತರ ಅಕ್ಕಿ ಮೂಟೆ ಸಾಗಿಸುತ್ತಿದ್ದ ನಾಲ್ವರು ಆರೋಪಿಗಳ ಬಂಧನ


ಅಕ್ರಮವಾಗಿ ಸಾಗಾಣೆ ಮಾಡುತ್ತಿದ್ದ ಪಡಿತರ ಅಕ್ಕಿಯನ್ನು ವಶಪಡಿಸಿಕೊಂಡಿರುವುದು.

ಕೊಳ್ಳೇಗಾಲ, ಜು.8– ಅಕ್ರಮವಾಗಿ ಪಡಿತರ ಅಕ್ಕಿಯನ್ನು ಗೂಡ್ಸ್ ವಾಹನದಲ್ಲಿ ಸಾಗಾಣಿಕೆ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಪೋಲೀಸರು ಬಂಧಿಸಿ 25 ಮೂಟೆ ಅಕ್ಕಿ ಹಾಗೂ ಸಾಗಣೆಗೆ ಬಳಸಿದ್ದ ಗೂಡ್ಸ್ ವಾಹನವನ್ನು ವಶಕ್ಕೆ ಪಡೆದಿದ್ದಾರೆ. ಮಂಡ್ಯ ಜಿಲ್ಲೆ ಮಳವಳ್ಳಿ ಪಟ್ಟಣದ ಶಿವಕುಮಾರ್(28), ಬಸವರಾಜು(38), ಬಂಧಿತ ಆರೋಪಿಗಳು. ಆರೋಪಿಗಳಿಬ್ಬರು ಸುಮಾರು 25 ಮೂಟೆಯಲ್ಲಿ ಸಾವಿರದ ನೂರಕ್ಕೂ ಕೆಜಿಗೂ ಹೆಚ್ಚು ಪಡಿತರ ಅಕ್ಕಿಯನ್ನು ಸಾಗಣೆ ಮಾಡುತ್ತಿ ರುವ ಬಗ್ಗೆ ಖಚಿತ ಮಾಹಿತಿ ಆಧರಿಸಿ ಗ್ರಾಮಾಂತರ ಠಾಣೆಯ ಎಎಸ್ಐ ಮಲ್ಲಿಕಾರ್ಜುನಸ್ವಾಮಿ, ಆಹಾರ ಇಲಾಖೆಯ ನಿರೀಕ್ಷಕ ಪ್ರಸಾದ್ ಮತ್ತು ಸಿಬ್ಬಂದಿ ದಾಳಿ ನಡೆಸಿ ಗೂಡ್ಸ್ ವಾಹನ ಸಮೇತ 25ಮೂಟೆ ಅಕ್ಕಿ ವಶಕ್ಕೆ ಪಡೆದುಕೊಂಡು ಆರೋಪಿಗಳನ್ನು ಬಂಧಿಸಿ, ಠಾಣಾ ಜಾಮೀನಿನ ಮೇಲೆ ಬಿಡುಗಡೆಗೊಳಿಸಿ ಮುಂದಿನ ಕ್ರಮಕೈಗೊಂಡಿದ್ದಾರೆ. ಆರೋಪಿಗಳು ತಾಲೂಕಿನ ಪಾಳ್ಯ ಸೇರಿದಂತೆ ಸುತ್ತಮುತ್ತಲಿನ ಗ್ರಾಮಸ್ಥರಿಂದ ಕಡಿಮೆ ಬೆಲೆಗೆ ಅಕ್ಕಿ ಖರೀದಿಸಿ ಕಾಳಸಂತೆಯಲ್ಲಿ ಮಾರಲು ಕೊಂಡೊಯ್ಯುತ್ತಿದ್ದರು ಎನ್ನಲಾಗಿದೆ.

ಕೆಂಪಯ್ಯನಹಟ್ಟಿ ಗ್ರಾಮಕ್ಕೆ ಜಿಪಂ ಸಿಇಓ ಭೇಟಿ

ಚಾಮರಾಜನಗರ, ಜು. 8 – ಹನೂರು ತಾಲೂಕಿನ ದೊಡ್ಡಾಲತ್ತೂರು ಗ್ರಾಮ ಪಂಚಾಯಿತಿಯ ಕೆಂಪಯ್ಯನಹಟ್ಟಿ ಗ್ರಾಮದ ಮಕ್ಕಳು ಕೃಷಿ ಚಟುವಟಿಕೆಯಲ್ಲಿ ಪೋಷಕರು ಅನುಭವಿಸುತ್ತಿರುವ ತೊಂದರೆಯ ಬಗ್ಗೆ ಮುಖ್ಯಮಂತ್ರಿಗಳಿಗೆ ಪತ್ರ ಬರೆದ ಹಿನ್ನೆಲೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಅವರ ಪೋಷಕರನ್ನು ಭೇಟಿ ಮಾಡಿ ಸಮಸ್ಯೆಯನ್ನು ಆಲಿಸಿದರು.


ಜಿಲ್ಲಾ ಪಂಚಾಯತ್ ಸಿಇಓ ಮೋನಾ ರೋತ್ ನರೇಗಾ ಯೋಜನೆಯ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಕೆಂಪಯ್ಯನಹಟ್ಟಿ ಗ್ರಾಮಕ್ಕೆ ಹೊಂದಿಕೊಂಡಿರುವ ಆಂಜನೇಯನದೊಡ್ಡಿ ಗ್ರಾಮದಲ್ಲಿರುವ 25 ರಿಂದ 30 ಮನೆಗಳಿಗೆ ಪ್ರತಿ ದಿನ ಅಥವಾ 2 ದಿನಕ್ಕೊಮ್ಮೆ ಕಡ್ಡಾಯವಾಗಿ ನೀರು ಸರಬರಾಜು ಮಾಡಲು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಮೋನಾರೋತ್ ಸೂಚನೆ ನೀಡಿದರು.

ಕೆಂಪಯ್ಯನಹಟ್ಟಿ ಗ್ರಾಮದಲ್ಲಿ ಜಲ ಜೀವನ್ ಮಿಷನ್ ಯೋಜನೆಯಡಿ ಅನುಷ್ಠಾನಗೊಂಡಿರುವ ಕುಡಿಯುವ ನೀರಿನ ಪರಿಶೀಲನೆ ನಡೆಸಿ ಲೋಪದೋಷಗಳು ಕಂಡು ಬಂದರೆ ತ್ವರಿತವಾಗಿ ಸರಿಪಡಿಸುವಂತೆ ಹನೂರು ತಾಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಹಾಗೂ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕೆಂಪಯ್ಯನಹಟ್ಟಿ ಸರ್ಕಾರಿ ಪ್ರೌಢಶಾಲೆಗೆ ಭೇಟಿ ನೀಡಿ, ಈ ಬಾರಿ ಉತ್ತಮ ಫಲಿತಾಂಶ ಬರುವ ನಿಟ್ಟಿನಲ್ಲಿ ಶಿಕ್ಷಕರು ಶ್ರಮವಹಿಸಬೇಕು. ವಿಶೇಷ ತರಗತಿಗಳನ್ನು ನಡೆಸಿ ಮಕ್ಕಳ ಕಲಿಕಾ ಮಟ್ಟವನ್ನು ಹೆಚ್ಚಿಸಬೇಕು. ಆದಷ್ಟೂ ಬೇಗ ಅತಿಥಿ ಶಿಕ್ಷಕರನ್ನು ನೇಮಕ ಮಾಡಲಾಗುವುದು ಎಂದು ಹೇಳಿ ಮಧ್ಯಾಹ್ನದ ಬಿಸಿ ಊಟವನ್ನು ಮಕ್ಕಳ ಜೊತೆ ಸವಿದರು.

ಮಹಾತ್ಮ ಗಾಂಧಿ ನರೇಗಾ ಯೋಜನೆಯ ಕಾಮಗಾರಿ ಸ್ಥಳಕ್ಕೆ ತೆರಳಿ ಪರಿಶೀಲಿಸಿದರು ಕೂಲಿ ಕಾರ್ಮಿಕರಾಗಿ ಕೆಲಸ ನಿರ್ವಹಿಸುತ್ತಿದ್ದವರೊಂದಿಗೆ ಮಾತನಾಡಿ, ನರೇಗಾ ಯೋಜನೆಯನ್ನು ಸದುಪಯೋಗಪಡಿಸಿಕೊಳ್ಳುವಂತೆ ಮೋನಾ ರೋತ್ ಸಲಹೆ ನೀಡಿದರು. ತಾ. ಪಂ. ಇಓ ಆರ್. ಉಮೇಶ್, ದೊಡ್ಡಾಲತ್ತೂರು ಗ್ರಾಮ ಪಿಡಿಓ ಸೆಲ್ವರಾಜ್, ಅಧಿಕಾರಿಗಳು ಇದ್ದರು.

ಸಾಹಿತಿ ಕಾತ್ಯಾಯಿನಿ ಅವರಿಗೆ ಕಲಾಭೂಷಣ ಗೌರವ

ಕೊಳ್ಳೇಗಾಲ. ಜು.8– ಸಾಹಿತ್ಯ ಕ್ಷೇತ್ರದಲ್ಲಿನ ಸಾಧನೆಗಾಗಿ ಪಟ್ಟಣದ ಸಾಹಿತಿ ಕಾತ್ಯಾಯಿನಿ ಅವರಿಗೆ ಕಲಾಭೂಷಣ ಪ್ರಶಸ್ತಿ ಲಭಿಸಿದೆ. ಈಗಾಗಲೇ ಇವರ ಸಂಪ್ರಾಪ್ತಿ



ಕವನ ಸಂಕಲನ ಬಿಡುಗಡೆಯಾಗಿದ್ದು, ಊರುಗೋಲು ಸಂಕಲನ ಜು.13 ರಂದು ಬಿಡುಗಡೆಯಾಗಲಿದೆ. ಇವರ ಸಾಹಿತ್ಯ ಹಾಗೂ ನಾಡಿ, ನುಡಿಯ ಸೇವೆಗಾಗಿ ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ ರಾಜ್ಯಮಟ್ಟದ ಕಲಾಭೂಷಣ ಪ್ರಶಸ್ತಿ ಪುರಸ್ಕೃತರಾಗಿದ್ದು, ಡಾ. ಪ್ರೇಮ. ಶಿವಶಂಕರ್, ವೃಷಭೇಂದ್ರ ಇನ್ನಿತರರು ಪ್ರಶಸ್ತಿ ನೀಡಿ ಗೌರವಿಸಿದ್ದರು. ಸಾಹಿತ್ಯ ಕ್ಷೇತ್ರದ ಸಾಧನೆಗೆ ನನಗೆ ಸಿಕ್ಕ ಗೌರವ ಸಂತಸದ ಜೊತೆ ಜವಾಬ್ದಾರಿ ಹೆಚ್ಚಿಸಿದ್ದು ಸಾಹಿತ್ಯ ಕ್ಷೇತ್ರದಲ್ಲಿ ಇನ್ನಷ್ಟು ಸೇವೆಗೆ ತೊಡಗಿಸಿಕೊಳ್ಳಲು ಸಹಕಾರಿಯಾಗಿದೆ ಎಂದು ಅವರು 'ಮೈಸೂರು ಮಿತ್ರ'ನೊಂದಿಗೆ ಹರ್ಷ ವ್ಯಕ್ತಪಡಿಸಿದರು.

ಯಳಂದೂರು: ಭಾರಿ ಗಾತ್ರದ ಹೆಬ್ಬಾವು ರಕ್ಷಣೆ

ಯಳಂದೂರು, ಜು.8(ವಿ.ನಾಗರಾಜು)– ಸಮೀಪದ ಕಾಗಲವಾಡಿ ಗ್ರಾಮದ ಕಬ್ಬಿನ ಗದ್ದೆಯೊಂದರಲ್ಲಿ ಇದ್ದ ಭಾರಿ ಗಾತ್ರದ ಹೆಬ್ಬಾವನ್ನು ಸಂತೇಮರಹಳ್ಳಿಯ ಉರಗ ತಜ್ಞ ಸ್ನೇಕ್ ಮಹೇಶ್ ರಾತ್ರಿ ಸುರಕ್ಷಿತವಾಗಿ ಹಿಡಿದು ಅರಣ್ಯ ಇಲಾಖೆಯ ಸಹಯೋಗದೊಂದಿಗೆ ಬಿಆರ್‌ಟಿ ಹುಲಿ ರಕ್ಷಿತ ಅರಣ್ಯಕ್ಕೆ ಬಿಟ್ಟಿದ್ದಾರೆ.


ಕಾಗಲವಾಡಿ ಗ್ರಾಮದ ಕಬ್ಬಿನ ಗದ್ದೆಯಲ್ಲಿ ಕಂಡುಬಂದ ಹೆಬ್ಬಾವನ್ನು ಸುರಕ್ಷಿತವಾಗಿ ಹಿಡಿದ ಉರಗ ತಜ್ಞ ಸ್ನೇಕ್ ಮಹೇಶ್

ತಮ್ಮ ಜಮೀನಿನಲ್ಲಿ ಹೆಬ್ಬಾವು ಇದೆ ಎಂದು ಕಾಗಲವಾಡಿ ಗ್ರಾಮದ ಗುರು ಎಂಬುವರು ದೂರವಾಣಿ ಮೂಲಕ ಕರೆ ಮಾಡಿದ್ದಾರೆ. ಸ್ಥಳಕ್ಕೆ ತೆರಳಿ ಹೆಬ್ಬಾವನ್ನು ಸುರಕ್ಷಿತವಾಗಿ ಹಿಡಿದು ಅರಣ್ಯ ಇಲಾಖೆಯ ಸಿಬ್ಬಂದಿಯ ನೆರವಿನೊಂದಿಗೆ ಬಿಆರ್‌ಟಿ ಹುಲಿ ರಕ್ಷಿತ ಅರಣ್ಯ ಪ್ರದೇಶಕ್ಕೆ ಬಿಟ್ಟಿದ್ದಾರೆ. ಈ ಸಂದರ್ಭದಲ್ಲಿ ಮಾತನಾಡಿದ ಇವರು, ಇದು ದಟ್ಟ ಅರಣ್ಯದಲ್ಲಿ ಇರುತ್ತದೆ. ಆದರೆ ಕಾಲುವೆಗಳಲ್ಲಿ ನೀರು ಬಿಟ್ಟ ಸಂದರ್ಭದಲ್ಲಿ ಇದರ ಮರಿಗಳು ನೀರಿನ ಮೂಲಕ ಹೊಲಗದ್ದೆಗಳಿಗೆ ಬಂದಿರುವ ಶಂಕೆ ಇದ್ದು ಇದು ಇಲ್ಲಿ ಪತ್ತೆಯಾಗಿರಬಹುದೆಂಬ ಅನುಮಾನ ವ್ಯಕ್ತಪಡಿಸಿದ್ದಾರೆ.

ಇಂದು ಮೈಸೂರಿಗೆ ಡಿಜಿಪಿ ಡಾ. ಎಂ.ಎ.ಸಲೀಂ ಭೇಟಿ



ಮೈಸೂರು, ಜು.8(ಆರ್‌ಕೆ)–ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಡಾ. ಎಂ.ಎ.ಸಲೀಂ ಅವರು ನಾಳೆ (ಜು.9) ಮೈಸೂರಿಗೆ ಆಗಮಿಸುವರು.

ಬೆಳಗ್ಗೆ 11 ಗಂಟೆಗೆ ಬೆಂಗಳೂರಿನಿಂದ ಹೊರಟು ಮಧ್ಯಾಹ್ನ 1 ಗಂಟೆಗೆ ಮೈಸೂರಿಗೆ ಆಗಮಿಸುವ ಅವರು, ನಜರ್‌ಬಾದ್‌ನ ನಗರ ಪೊಲೀಸ್ ಕಮಿಷ್ನರ್ ಕಚೇರಿ ಸಭಾಂಗಣದಲ್ಲಿ ಆಷಾಢ ಶುಕ್ರವಾರ ಆಚರಣೆಗೆ ಕೈಗೊಂಡಿರುವ ಭದ್ರತಾ ವ್ಯವಸ್ಥೆ ಹಾಗೂ ನಗರದ ಪೊಲೀಸ್ ಠಾಣೆಗಳ ಕಾರ್ಯ ನಿರ್ವಹಣೆ ಕುರಿತಂತೆ ಪೊಲೀಸ್ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಪ್ರಗತಿ ಪರಿಶೀಲಿಸುವರು.

ನಂತರ ಯಾವುದಾದರೊಂದು ಪೊಲೀಸ್ ಠಾಣೆಗೆ ಭೇಟಿ ನೀಡಿ ಪರಿಶೀಲಿಸಲಿರುವ ಡಾ. ಸಲೀಂ, ಸಂಜೆ 7 ಗಂಟೆಗೆ ಮೈಸೂರಿನಿಂದ ಬೆಂಗಳೂರಿಗೆ ಪ್ರಯಾಣ ಬೆಳೆಸುವರು.

ನೀರು ಕಲುಷಿತಗೊಂಡು ದುಷ್ಪರಿಣಾಮವಾದರೆ ಎಂಜಿನಿಯರ್, ಪಿಡಿಒಗಳು ಹೊಣೆ

ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಎಚ್ಚರಿಕೆ



ಬೆಂಗಳೂರು, ಜು.8– ರಾಜ್ಯದಲ್ಲಿ ನೀರು ಕಲುಷಿತಗೊಂಡು ಯಾವುದೇ ದುಷ್ಪರಿಣಾಮಗಳಾದಲ್ಲಿ ಸಂಬಂಧಿಸಿದ ಎಂಜಿನಿಯರ್‌ಗಳು ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳನ್ನು (ಪಿಡಿಒ) ನೇರ ಹೊಣೆಗಾರರನ್ನಾಗಿ ಮಾಡುವುದಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಖಡಕ್ ಎಚ್ಚರಿಕೆ ನೀಡಿದ್ದಾರೆ.

ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ತಿಪ್ಪನಟಗಿ ಗ್ರಾಮದಲ್ಲಿ ಕಲುಷಿತ ನೀರು ಸೇವಿಸಿ ಮೂವರು ಮೃತಪಟ್ಟಿರುವ ಮತ್ತು ಆರು ಜನರ ಸ್ಥಿತಿ ಗಂಭೀರವಾಗಿರುವ ಘಟನೆ ಹಿನ್ನೆಲೆಯಲ್ಲಿ ಪ್ರಿಯಾಂಕ್ ಖರ್ಗೆ ಈ ಎಚ್ಚರಿಕೆ ನೀಡಿದ್ದಾರೆ.

ಬೆಂಗಳೂರಿನಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳೊಂದಿಗೆ ಐದು ಗಂಟೆಗಳಿಗೂ ಹೆಚ್ಚು ಕಾಲ ವಿಡಿಯೋ ಸಭೆ ನಡೆಸಿದ ಸಚಿವರು, ಕಲುಷಿತ ನೀರು ಸೇವನೆಯಿಂದಾದ ದುಷ್ಪರಿಣಾಮಗಳ ಬಗ್ಗೆ ಚರ್ಚೆ ನಡೆಸಿದ ಅವರು, ಇಂತಹ ಘಟನೆಗಳಿಗೆ ಸ್ಥಳೀಯ ಎಂಜಿನಿಯರ್‌ಗಳು ಮತ್ತು ಪಿಡಿಒಗಳೇ ಜವಾಬ್ದಾರರು ಎಂದು ಸ್ಪಷ್ಟಪಡಿಸಿದರು.

ಜುಲೈ 15 ರಿಂದ ಜುಲೈ 31ರವರೆಗೆ, ಜಿಲ್ಲಾ ಪಂಚಾಯತ್ ಸಿಇಒಗಳು ಜಿಲ್ಲೆಯಲ್ಲಿ ಪ್ರವಾಸ ಮಾಡಿ ಗುಣಮಟ್ಟವನ್ನು ಪರಿಶೀಲನೆ ನಡೆಸುವಂತೆ ಸೂಚಿಸಲಾಗಿದೆ. ಸ್ಥಗಿತಗೊಂಡಿರುವ ಯೋಜನೆಗಳ ಕೆಲಸ ಪುನರಾರಂಭವಾಗುವಂತೆ ನೋಡಿಕೊಳ್ಳುವಂತೆಯೂ ಅವರು ಅವರಿಗೆ ತಿಳಿಸಿದ್ದಾರೆ. ತೆಗೆದುಕೊಳ್ಳಲಾದ ಎಲ್ಲಾ ಕ್ರಮಗಳನ್ನು ವಿವರಿಸುವ ಸಮಗ್ರ ವರದಿಯನ್ನು ಆಗಸ್ಟ್ ಮೊದಲ ವಾರದಲ್ಲಿ ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ಸಚಿವರು ತಿಳಿಸಿದ್ದಾರೆ.

ಐಶ್ವರ್ಯಾ ಗೌಡ ಚಿನ್ನಾಭರಣ ವಂಚನೆ ಪ್ರಕರಣ

ಇಡಿ ವಿಚಾರಣೆಗೆ ಹಾಜರಾದ ಡಿ.ಕೆ. ಸುರೇಶ್



ಬೆಂಗಳೂರು: ಐಶ್ವರ್ಯಾ ಗೌಡ ಚಿನ್ನಾಭರಣ ವಂಚನೆ ಪ್ರಕರಣದಲ್ಲಿ ಕಾಂಗ್ರೆಸ್‌ನ ಡಿ.ಕೆ.ಸುರೇಶ್ ಅವರನ್ನು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಮಂಗಳವಾರ ವಿಚಾರಣೆ ನಡೆಸಿದರು.

ಡಿ.ಕೆ.ಸುರೇಶ್ ಅವರ ಮನೆಗೆ ಜೂನ್ 17ರಂದು ತೆರಳಿದ್ದ ಇ.ಡಿ ಅಧಿಕಾರಿಗಳು, ವಿಚಾರಣೆಗೆ ಹಾಜರಾಗುವಂತೆ ಸಮನ್ಸ್ ನೀಡಿದ್ದರು. ನಗರದ ಶಾಂತಿನಗರದಲ್ಲಿರುವ ಇ.ಡಿ ಕಚೇರಿಗೆ ಮಂಗಳವಾರ ತೆರಳಿದ್ದ ಸುರೇಶ್ ವಿಚಾರಣೆಗೆ ಹಾಜರಾಗಿದ್ದರು. 'ಆಸ್ತಿಗೆ ಸಂಬಂಧಿಸಿದ ಮಾಹಿತಿ ಮತ್ತು ದಾಖಲೆಗಳನ್ನು ಅಧಿಕಾರಿಗಳು ಕೇಳಿದ್ದರು, ನೀಡಿದ್ದೇನೆ. ಅವರ ವಿಚಾರಣೆಗೆ ಸಹಕರಿಸಿದ್ದೇನೆ' ಎಂದು ವಿಚಾರಣೆಯ ನಂತರ ಅವರು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

'ನನಗೂ ಐಶ್ವರ್ಯಾ ಗೌಡಗೂ ಯಾವುದೇ ರೀತಿಯ ಸಂಬಂಧ ಇಲ್ಲ. ಹೀಗಿದ್ದೂ ಅವರ ವಂಚನೆ ಪ್ರಕರಣಕ್ಕೆ ನನ್ನನ್ನು ಹೇಗೆ ತಳಕು ಹಾಕುತ್ತಿದ್ದಾರೆ ಎಂಬುದು ಗೊತ್ತಾಗಿಲ್ಲ. ಅವರು ತನಿಖೆ ನಡೆಸುತ್ತಿದ್ದಾರೆ, ನಡೆಸಲಿ. ನಾನು ಸಂಪೂರ್ಣ ಸಹಕಾರ ನೀಡುತ್ತೇನೆ' ಎಂದರು.

'ಐಶ್ವರ್ಯಾ ಗೌಡ ಅವರು ಚಿನ್ನ ಮತ್ತು ಹಣ ಹೂಡಿಕೆಗೆ ದುಪ್ಪಟ್ಟು ಲಾಭ ಕೊಡಿಸುತ್ತೇನೆ ಎಂದು ಹೇಳಿ ಹಲವು ಚಿನ್ನಾಭರಣ ವ್ಯಾಪಾರಿಗಳಿಂದ ಚಿನ್ನ ಪಡೆದುಕೊಂಡಿದ್ದರು. ಆದರೆ ಹಣವನ್ನೂ ನೀಡಿಲ್ಲ, ಚಿನ್ನವನ್ನೂ ವಾಪಸ್ ಮಾಡಿಲ್ಲ' ಎಂದು ಕೆಲ ಚಿನ್ನಾಭರಣ ವ್ಯಾಪಾರಿಗಳು ಪೊಲೀಸರಿಗೆ ದೂರು ನೀಡಿದ್ದರು. 'ಹಣ ವಾಪಸ್ ಕೇಳಿದಾಗ, ತಾನು ಡಿ.ಕೆ.ಸುರೇಶ್ ಅವರ ಸೋದರಿ ಎಂದು ಹೇಳಿ ಬೆದರಿಕೆ ಹಾಕಿದ್ದರು' ಎಂದೂ ದೂರಿನಲ್ಲಿ ವಿವರಿಸಿದ್ದರು.

'ನನ್ನ ಹೆಸರನ್ನು ದುರುಪಯೋಗ ಮಾಡಿಕೊಳ್ಳಲಾಗಿದೆ' ಎಂದು ಡಿ.ಕೆ.ಸುರೇಶ್ ಅವರು ಸಹ ಪೊಲೀಸರಿಗೆ ದೂರು ನೀಡಿದ್ದರು.

ಐಶ್ವರ್ಯಾ ಗೌಡ ವಿರುದ್ಧ ದಾಖಲಾಗಿದ್ದ ದೂರಿನ ಸಂಬಂಧ ಇ.ಡಿ ಪ್ರತ್ಯೇಕ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದೆ. ತನಿಖೆಯ ಭಾಗವಾಗಿ ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ, ಕೆಲ ಉದ್ಯಮಿಗಳು ಮತ್ತು ಐಶ್ವರ್ಯ ಅವರ ಮನೆಯಲ್ಲಿ ಇ.ಡಿ ಅಧಿಕಾರಿಗಳು ಈಚೆಗೆ ಶೋಧ ನಡೆಸಿದ್ದರು. ಐಶ್ವರ್ಯ ಅವರ ಮನೆಯಿಂದ 2.25 ಕೋಟಿ ನಗದು ವಶಕ್ಕೆ ಪಡೆದಿದ್ದರು.

'ತಮ್ಮಲ್ಲಿ ಹೂಡಿಕೆ ಮಾಡಿದವರು ಹಣವನ್ನು ವಾಪಸ್ ಕೇಳಿದಾಗ ಐಶ್ವರ್ಯಾ ಅವರು ರಾಜ್ಯದ ಕೆಲ ಪ್ರಭಾವಿ ರಾಜಕಾರಣಿಗಳ ಹೆಸರು ಬಳಸಿಕೊಂಡಿದ್ದಾರೆ. ಕೆಲ ರಾಜಕಾರಣಿಗಳ ಜತೆ ಐಶ್ವರ್ಯ ಸಂಪರ್ಕದಲ್ಲಿ ಇದ್ದುದಕ್ಕೆ ಮತ್ತು ಅವರೊಂದಿಗೆ ಹಣಕಾಸು ವ್ಯವಹಾರ ನಡೆಸಿರುವುದಕ್ಕೆ ಸಾಕ್ಷ್ಯಗಳು ದೊರೆತಿವೆ. ವಂಚನೆಯಲ್ಲಿ ರಾಜಕಾರಣಿಗಳ ಪಾತ್ರ ಇದೆಯೇ ಎಂಬ ದಿಕ್ಕಿನಲ್ಲಿ ತನಿಖೆ ನಡೆಸಲಾಗುತ್ತಿದೆ' ಎಂದು ಇ.ಡಿ ಮೂಲಗಳು ತಿಳಿಸಿದ್ದವು.

ಇಂದಿನಿಂದ ಮೂರು ದಿನ ಶ್ರೀ ಸತ್ಯಸಂಕಲ್ಪ ತೀರ್ಥರ ಆರಾಧನೆ

ಮೈಸೂರು, ಜು.8– ನಗರದ ಅಗ್ರಹಾರದಲ್ಲಿನ ಉತ್ತರಾದಿ ಮಠದಲ್ಲಿ ನಾಳೆ(ಜು.9)ಯಿಂದ ಜು.11ರವರೆಗೆ ಶ್ರೀ ಸತ್ಯಸಂಕಲ್ಪ ತೀರ್ಥರ 186ನೇ ವರ್ಷದ ಆರಾಧನಾ ಮಹೋತ್ಸವ ನೆರವೇರಲಿದೆ. ಮೂರೂ ದಿನ ಬೆಳಗ್ಗೆ 6ಕ್ಕೆ ಮೂಲ ವೃಂದಾವನಕ್ಕೆ ವಿಶೇಷ ಅಭಿಷೇಕ, 8ಕ್ಕೆ ಪಂಚಾಮೃತ, 10ಕ್ಕೆ ಅಲಂಕಾರ, ವಿಶೇಷ ಪೂಜೆ ಮತ್ತು ಮಹಾನೈವೇದ್ಯ ಸಮರ್ಪಣೆ, ವಿದ್ವಾಂಸರಿಂದ ಪ್ರವಚನ, ಮಧ್ಯಾಹ್ನ 12ಕ್ಕೆ ಪಲ್ಲಕ್ಕಿ ಉತ್ಸವ ನೆರವೇರಲಿದೆ. ಸಾಂಸ್ಕೃತಿಕ ಕಾರ್ಯಕ್ರಮ ಸರಣಿಯಲ್ಲಿ ನಾಳೆ(ಜು.9) ಸಂಜೆ 6ಕ್ಕೆ ಬಾಲೋತ್ಸಾಹಿ ಚಿಕ್ಕಮಕ್ಕಳಿಗೆ ವಿವಿಧ ಸ್ಪರ್ಧೆ ನಡೆಯಲಿದೆ. ಜು.10ರಂದು ಸಂಜೆ 6ಕ್ಕೆ ಖ್ಯಾತ ಗಾಯಕ ಮೈಸೂರು ರಾಮಚಂದ್ರಾಚಾರ್ಯರು ದಾಸವಾಣಿ ಪ್ರಸ್ತುತಪಡಿಸಲಿದ್ದಾರೆ.

7ನೇ ವೇತನ ಆಯೋಗದ ಶಿಫಾರಸು ಜಾರಿಗೆ ಆಗ್ರಹಿಸಿ

ಮೈಸೂರು ಸೇರಿ ರಾಜ್ಯದ ಹತ್ತು ನಗರಪಾಲಿಕೆ ನೌಕರರ ಮುಷ್ಕರ

- ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಸಾವಿರಾರು ನೌಕರರ ಧರಣಿ
- ಇಂದು ಆಯಾ ಪಾಲಿಕೆ ಕಚೇರಿಗಳಲ್ಲೇ ಕೆಲಸಕ್ಕೆ ರಜೆ ಹಾಕಿ ಪ್ರತಿಭಟನೆ ನಿರ್ಧಾರ
- ಒಂದೇ ದಿನಕ್ಕೆ ಮೈಸೂರಲ್ಲಿ ಸ್ವಚ್ಛತೆ ಸ್ಥಗಿತ; ಅಲ್ಲಲ್ಲಿ ರಾರಾಜಿಸಿದ ಕಸದ ರಾಶಿ





ಮೈಸೂರು ಮಹಾನಗರ ಪಾಲಿಕೆ ಪೌರಕಾರ್ಮಿಕರು ಹಾಗೂ ನೌಕರರು ಮಂಗಳವಾರ ಪ್ರಧಾನ ಕಚೇರಿ ಆವರಣದಲ್ಲಿ ಪ್ರತಿಭಟನೆ ನಡೆಸಿದರು.

ಮೈಸೂರು, ಜು. 8(ಆರ್‌ಕೆ)– 7ನೇ ವೇತನ ಆಯೋಗದ ಶಿಫಾರಸ್ಸಿನನ್ವಯ ಸೌಲಭ್ಯಗಳನ್ನು ತಮಗೂ ಒದಗಿಸುವಂತೆ ಆಗ್ರಹಿಸಿ ಮೈಸೂರು ಸೇರಿದಂತೆ ರಾಜ್ಯದ ಎಲ್ಲಾ 10 ಮಹಾನಗರ ಪಾಲಿಕೆಗಳ ಸಾವಿರಾರು ಪೌರಕಾರ್ಮಿಕರು ಹಾಗೂ ನೌಕರರು ಇಂದು ಕೆಲಸಕ್ಕೆ ಸಾಮೂಹಿಕ ರಜೆ ಹಾಕಿ ಮುಷ್ಕರ ನಡೆಸಿದರು.

ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಜಮಾವಣೆಗೊಂಡಿದ್ದ ನೌಕರರು, ಇತರ ರಾಜ್ಯ ಸರ್ಕಾರಿ ನೌಕರರಿಗೆ ನೀಡುತ್ತಿರುವಂತೆಯೇ ಪಾಲಿಕೆ ನೌಕರರಿಗೂ 7ನೇ ವೇತನ ಆಯೋಗದ ಸೌಲಭ್ಯಗಳನ್ನು ನೀಡಬೇಕೆಂದು ಪ್ರತಿಭಟನಾ ಧರಣಿ ನಡೆಸಿದರು.

7ನೇ ವೇತನ ಆಯೋಗ ಜಾರಿ ಮಾಡಿ ಎಲ್ಲಾ ಇಲಾಖೆಗಳ ಸಿಬ್ಬಂದಿಗೆ ಪೂರ್ಣ ಪ್ರಮಾಣದ ವೇತನ ಪಾವತಿಸುತ್ತಿರುವ ಸರ್ಕಾರವು, ಮಹಾನಗರ ಪಾಲಿಕೆ ನೌಕರರಿಗೆ ಮಾತ್ರ ಹೆಚ್ಚುವರಿ ಹಣದ ಶೇಕಡಾ 80ರಷ್ಟನ್ನು ನೀಡಿ ಉಳಿದ ಶೇ. 20 ರಷ್ಟನ್ನು ಆಯಾ ಪಾಲಿಕೆಗಳೇ ಭರಿಸಬೇಕೆಂದು ಆದೇಶ ನೀಡಿದೆ. ಸಂಪನ್ಮೂಲದ ಕೊರತೆಯಿಂದಾಗಿ ಆರ್ಥಿಕ ಸಂಕಷ್ಟ ಎದುರಿಸುತ್ತಿರುವ ಪಾಲಿಕೆಗಳು ಆ ಹೆಚ್ಚುವರಿ ಹಣ ಭರಿಸಲು ಸಾಧ್ಯವಾಗದಿರುವ ಕಾರಣ ತಮಗೆ ಶೇ. 20ರಷ್ಟು ವೇತನ ನಷ್ಟವಾಗುತ್ತಿದೆ ಎಂದು ಆರೋಪಿಸಿದರು.

ಇಂದು ಫ್ರೀಡಂ ಪಾರ್ಕ್‌ನಲ್ಲಿ ಧರಣಿ ನಿರತ ನೌಕರರ ಬಳಿ ಪೌರಾಡಳಿತ ಇಲಾಖೆ ಅಧಿಕಾರಿಗಳು ಬಂದು ಮಾತನಾಡಿದ್ದಾರೆಯೇ ಹೊರತು, ನಗರಾಭಿವೃದ್ಧಿ ಇಲಾಖೆ ಸಚಿವರಾಗಲೀ, ಹಿರಿಯ ಅಧಿಕಾರಿಗಳಾಗಲೀ ಬಾರದಿರುವುದರಿಂದ ನಾಳೆ (ಜು. 9) ರಾಜ್ಯದಾದ್ಯಂತ ಆಯಾ ಪಾಲಿಕೆ ಕಚೇರಿಗಳಲ್ಲೇ ಕರ್ತವ್ಯ ಬಹಿಷ್ಕರಿಸಿ ಧರಣಿ ನಡೆಸುವುದಾಗಿ ನಿರ್ಧರಿಸಲಾಗಿದೆ.

ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ ನೌಕರರ ಸಂಘಗಳ ಪರಿಷತ್ತು ಕರೆ ನೀಡಿದಂತೆ ಮೈಸೂರು ಮಹಾನಗರ ಪಾಲಿಕೆ ಪ್ರಧಾನ ಕಚೇರಿ ಹಾಗೂ ಎಲ್ಲಾ ವಲಯ ಕಚೇರಿಗಳ ನೌಕರರು ಸಾಮೂಹಿಕ ರಜೆ ಹಾಕಿ ಇಂದು ಪ್ರತಿಭಟನೆ ನಡೆಸಿದರು. ಪರಿಣಾಮ ಪಾಲಿಕೆ ಕಚೇರಿಗಳನ್ನು ಬಂದ್ ಮಾಡಲಾಗಿತ್ತು.

ಇದರಿಂದಾಗಿ ಜನನ–ಮರಣ ಪ್ರಮಾಣ ಪತ್ರ, ಇ–ಖಾತಾ, ಕಂದಾಯ ಪಾವತಿ, ಟ್ರೇಡ್ ಲೈಸೆನ್ಸ್, ಖಾತಾ ವರ್ಗಾವಣೆ, ಬಿಲ್ಡಿಂಗ್ ಲೈಸೆನ್ಸ್ ಸೇರಿದಂತೆ ಇನ್ನಿತರ ಸೇವೆಗಳು ಸಾರ್ವಜನಿಕರಿಗೆ ಇಂದು ಲಭ್ಯವಾಗದೇ ತೀವ್ರ ತೊಂದರೆ ಉಂಟಾಯಿತು.

ಪೌರಕಾರ್ಮಿಕರ್ಯಾರೂ ಇಂದು ಸ್ವಚ್ಛತೆ, ಮನೆ ಮನೆಯಿಂದ ಕಸ ಸಂಗ್ರಹಿಸುವುದು, ಗಿಡಗಂಟಿ ತೆರವುಗೊಳಿಸುವ ಕೆಲಸ ಮಾಡದ ಕಾರಣ ಮೈಸೂರು ನಗರದಾದ್ಯಂತ ಅಶುಚಿತ್ವ ಉಂಟಾಗಿ ರಸ್ತೆಗಳಲ್ಲಿ ಕಸ ಹಾಗೆಯೇ ಬಿದ್ದು ಚೆಲ್ಲಾಡುತ್ತಿವೆ. ಒಂದು ವೇಳೆ ನಾಳೆ (ಜು. 9)ಯೂ ಮುಷ್ಕರ ಮುಂದುವರೆದಲ್ಲಿ ಸಮಸ್ಯೆ ಮತ್ತಷ್ಟು ಬಿಗಡಾಯಿಸಲಿದೆ.

ಬೇಡಿಕೆಗಳು

- 7ನೇ ವೇತನ ಆಯೋಗದ ಸೌಲಭ್ಯವನ್ನು ರಾಜ್ಯ ಸರ್ಕಾರಿ ನೌಕರರಿಗೆ ಅನ್ವಯಿಸದಂತೆ ಮಹಾನಗರ ಪಾಲಿಕೆ ನೌಕರರಿಗೆ ಯಥಾವತ್ತಾಗಿ ವಿಸ್ತರಿಸಿ, ಸರ್ಕಾರದ ಆರ್ಥಿಕ ಇಲಾಖೆಯಿಂದಲೇ ರಾಜ್ಯ ಹಣಕಾಸು ಆಯೋಗದ ಶಿಫಾರಸ್ಸಿನನ್ವಯ ಶೇ. 100ರಷ್ಟು ಅನುದಾನವನ್ನು ಬಿಡುಗಡೆ ಮಾಡಬೇಕು.
- ಕರ್ನಾಟಕ ಮಹಾನಗರ ಪಾಲಿಕೆಗಳು (ಅಧಿಕಾರಿಗಳು ಮತ್ತು ಸಿಬ್ಬಂದಿಗಳ) ಸಾಮಾನ್ಯ ನೇಮಕಾತಿ ನಿಯಮಗಳು 2011ಕ್ಕೆ ಸಮಗ್ರ ತಿದ್ದುಪಡಿ ಮಾಡಿ ಶೀಘ್ರವಾಗಿ ಕರಡು ಅಧಿಸೂಚನೆ ಹೊರಡಿಸಬೇಕು.
- ಕರ್ನಾಟಕ ರಾಜ್ಯ ಸರ್ಕಾರಿ ನೌಕರರಿಗೆ ಜಾರಿ ಮಾಡಿರುವಂತೆ ಕೆಜಿಐಡಿ, ಜಿಐಎಸ್ (ಗ್ರೂಪ್ ಇನ್ಶೂರೆನ್ಸ್) ಹಾಗೂ ಜಿಪಿಎಫ್ ಸೌಲಭ್ಯವನ್ನು ಯಥಾವತ್ತಾಗಿ ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ ಅಧಿಕಾರಿ, ನೌಕರರಿಗೂ ಜಾರಿಗೊಳಿಸಬೇಕು.
- ಸರ್ಕಾರಿ ನೌಕರರಿಗೆ ಜಾರಿಗೊಳಿಸಿರುವ ಜ್ಯೋತಿ ಸಂಜೀವಿನಿ ಯೋಜನೆಯನ್ನು ಯಥಾವತ್ತಾಗಿ ಮಹಾನಗರ ಪಾಲಿಕೆ ನೌಕರರಿಗೆ ನಗದು ರಹಿತವಾಗಿ ಸೌಲಭ್ಯ ವಿಸ್ತರಿಸಬೇಕು
- ರಾಜ್ಯದ ಮಹಾನಗರ ಪಾಲಿಕೆ ಅಧಿಕಾರಿಗಳಿಗೆ ಕೆಎಂಸಿ ಆಕ್ಟ್ 1976 ಸೆಕ್ಷನ್ 83ರಂತೆ ಹಾಗೂ ಕೆಎಂಎಎಸ್ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಕೆಎಂಎಎಸ್ ಹುದ್ದೆಗೆ ಮುಂಬಡ್ತಿ ನೀಡಲು ಅವಕಾಶವಿದ್ದರೂ ಕಳೆದ 50 ವರ್ಷಗಳಿಂದಲೂ ಕೆಎಂಎಎಸ್ ಹುದ್ದೆಗಳಿಗೆ ಮುಂಬಡ್ತಿ ನೀಡಿರುವುದಿಲ್ಲ. ಈ ಸಂಬಂಧ ರಾಜ್ಯ ಉಚ್ಛನ್ಯಾಯಾಲಯವು ತೀರ್ಪು ನೀಡಲಾಗಿದ್ದರೂ 2022ರ ಕೆಎಂಎಎಸ್ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಮಹಾನಗರ ಪಾಲಿಕೆ ಅಧಿಕಾರಿಗಳಿಗೆ ತಾರತಮ್ಯ ಉಂಟು ಮಾಡಿರುವುದನ್ನು ಸರಿಪಡಿಸಬೇಕು.

ಬಿಹಾರದಲ್ಲಿ ಸರ್ಕಾರಿ ಉದ್ಯೋಗದಲ್ಲಿ ಮಹಿಳೆಯರಿಗೆ ಶೇ.35ರಷ್ಟು ಮೀಸಲಾತಿ

ಸಿಎಂ ನಿತೀಶ್ ಕುಮಾರ್ ಘೋಷಣೆ



ಪಾಟ್ನಾ, ಜು.8– ಬಿಹಾರ ವಿಧಾನಸಭಾ ಚುನಾವಣೆಗೆ ಕೆಲ ದಿನಗಳ ಬಾಕಿ ಇರುವಂತೆಯೇ ರಾಜ್ಯದ ಎಲ್ಲಾ ಸರ್ಕಾರಿ ಉದ್ಯೋಗಗಳಲ್ಲಿ ಮಹಿಳೆಯರಿಗೆ ಶೇ. 35 ರಷ್ಟು ಮೀಸಲಾತಿಯನ್ನು ಸಿಎಂ ನಿತೀಶ್ ಕುಮಾರ್ ಮಂಗಳವಾರ ಘೋಷಿಸಿದ್ದಾರೆ. ಬಿಹಾರದ ಖಾಯಂ ನಿವಾಸಿಗಳಿಗೆ ಮಾತ್ರ ಇದು ಅನ್ವಯವಾಗುತ್ತದೆ.

ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಮಾಹಿತಿ ಹಂಚಿಕೊಂಡಿರುವ ನಿತೀಶ್ ಕುಮಾರ್, ರಾಜ್ಯದ ಸರ್ಕಾರಿ ಸೇವೆಗಳಲ್ಲಿ ನೇರ ನೇಮಕಾತಿಯಾದ ಎಲ್ಲಾ ವರ್ಗದ, ಹಂತದ ಬಿಹಾರದ ಮೂಲ ನಿವಾಸಿಗಳಾದ ಮಹಿಳಾ ಅಭ್ಯರ್ಥಿಗಳಿಗೆ ಪ್ರತ್ಯೇಕವಾಗಿ ಶೇ.35ರಷ್ಟು ಮೀಸಲಾತಿ ಒದಗಿಸಲಾಗುವುದು. ಈ ನಿರ್ಧಾರವು ಆಡಳಿತ ಮತ್ತು ಆಡಳಿತದಲ್ಲಿ ಹೆಚ್ಚಿನ ಮಹಿಳೆಯರ ಭಾಗವಹಿಸುವಿಕೆಯತ್ತ ಒಂದು ಪ್ರಮುಖವಾದ ಹೆಜ್ಜೆಯಾಗಿದೆ ಎಂದು ಅವರು ಹೇಳಿದ್ದಾರೆ.

ಪಾಟ್ನಾದಲ್ಲಿ ಮುಖ್ಯಮಂತ್ರಿ ನೇತೃತ್ವದಲ್ಲಿ ನಡೆದ ಸಂಪುಟ ಸಭೆಯ ನಂತರ ಈ ಘೋಷಣೆ ಹೊರಬಿದ್ದಿದೆ. ಈ ನಿರ್ಧಾರವು ಮಹಿಳಾ ಸಬಲೀಕರಣಕ್ಕೆ ರಾಜ್ಯದ ಬದ್ಧತೆಯನ್ನು ಬಲಪಡಿಸುವ ಗುರಿಯನ್ನು ಹೊಂದಿದೆ ಮತ್ತು ಎಲ್ಲಾ ಇಲಾಖೆಗಳಾದ್ಯಂತ ಹೆಚ್ಚಿನ ಮಹಿಳೆಯರನ್ನು ತರುವ ಗುರಿಯನ್ನು ಹೊಂದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೀಸಲಾತಿಯ ಜೊತೆಗೆ, ಬಿಹಾರ ಸರ್ಕಾರ ಬಿಹಾರ ಯುವ ಆಯೋಗ ರಚನೆಗೆ ಮುಂದಾಗಿದೆ. ಇದು ರಾಜ್ಯದ ಯುವ ಜನಸಂಖ್ಯೆಯ ಅಗತ್ಯತೆಗಳು ಮತ್ತು ಆಕಾಂಕ್ಷೆಗಳನ್ನು ಈಡೇರಿಸುವ ಗುರಿ ಹೊಂದಿದೆ. ಬಿಹಾರದಲ್ಲಿನ ಯುವ ಜನಾಂಗಕ್ಕೆ ಹೆಚ್ಚಿನ ಉದ್ಯೋಗಾವಕಾಶ, ತರಬೇತಿ ಮತ್ತು ಸಬಲೀಕರಣ, ಸಾಮರ್ಥ್ಯ ವೃದ್ಧಿಸುವ ಗುರಿಯೊಂದಿಗೆ ಬಿಹಾರ ಯುವ ಆಯೋಗ ಸ್ಥಾಪಿಸಲು ನಿರ್ಧರಿಸಲಾಗಿದೆ. ಇದಕ್ಕೆ ಸಂಪುಟ ಇಂದು ಒಪ್ಪಿಗೆ ನೀಡಿದೆ ಎಂದು ನಿತೀಶ್ ಕುಮಾರ್ ಹೇಳಿದ್ದಾರೆ.

ಆಯೋಗವು ಅಧ್ಯಕ್ಷರು, ಇಬ್ಬರು ಉಪಾಧ್ಯಕ್ಷರು ಮತ್ತು ಏಳು ಸದಸ್ಯರನ್ನು ಒಳಗೊಂಡಿರುತ್ತದೆ. ಎಲ್ಲರೂ 45 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿರುತ್ತಾರೆ. ಇದು ಮದ್ಯಪಾನ ಮತ್ತು ಮಾದಕ ವ್ಯಸನದಂತಹ ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸಲು ಕಾರ್ಯಕ್ರಮಗಳನ್ನು ರೂಪಿಸುತ್ತದೆ. ಈ ಉಪಕ್ರಮವನ್ನು ಬಿಹಾರದ ಭವಿಷ್ಯದಲ್ಲಿ ದೀರ್ಘಾವಧಿಯ ಹೂಡಿಕೆ ಎಂದು ಸರ್ಕಾರ ಕರೆದಿದ್ದು, ರಾಜ್ಯದ ಯುವಕರನ್ನು ಸ್ವಾವಲಂಬಿ, ಕೌಶಲ್ಯ ಮತ್ತು ಉದ್ಯೋಗಕ್ಕೆ ಸಜ್ಜುಗೊಳಿಸುವ ಗುರಿಯಾಗಿದೆ ಎಂದು ತಿಳಿಸಿದೆ.

ಚಿನ್ನ ಅಡವಿಟ್ಟುಕೊಂಡು ಮಾರಾಟ ಮಾಡುತ್ತಿದ್ದ ಜಾಲ ಪತ್ತೆ

ಮಂಡ್ಯ ಪಶ್ಚಿಮ ಠಾಣೆ ಪೊಲೀಸರಿಂದ ಮೂವರ ಬಂಧನ

ಮಂಡ್ಯ, ಜು.8– ಕಡಿಮೆ ಬಡ್ಡಿ ಆಸೆ ತೋರಿಸಿ ಗ್ರಾಹಕರಿಂದ ಚಿನ್ನ ಅಡವಿಟ್ಟುಕೊಂಡು ನಂತರ ಮಾರಾಟ ಮಾಡುತ್ತಿದ್ದ ಜಾಲವನ್ನು ಪತ್ತೆ ಹಚ್ಚುವಲ್ಲಿ ನಗರದ ಪಶ್ಚಿಮ ಠಾಣೆ ಪೊಲೀಸರು ಯಶಸ್ವಿಯಾಗಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರನ್ನು ಬಂಧಿಸಿದ್ದಾರೆ.

ನಗರದ ಅನಘ ಗೋಲ್ಡ್ ಕಂಪನಿ ಮಾಲೀಕ ಪ್ರವೀಣ್, ಪತ್ನಿ ಮಂಜುಳಾ ಹಾಗೂ ಸಿಬ್ಬಂದಿ ಶ್ರೀಲಕ್ಷ್ಮಿ ಬಂಧಿತ ಆರೋಪಿಗಳು. ಬಂಧಿತರಿಂದ 525 ಗ್ರಾಂ ಚಿನ್ನ ವಶಪಡಿಸಿಕೊಳ್ಳಲಾಗಿದ್ದು, ಸುಮಾರು 3 ಕೋಟಿ ರೂ. ಮೌಲ್ಯದ 2 ಕೆಜಿ ಚಿನ್ನವನ್ನು ಗ್ರಾಹಕರಿಂದ ಅಡವಿಟ್ಟುಕೊಂಡು ಮಾರಾಟ ಮಾಡಿ ವಂಚನೆ ಮಾಡಿದ್ದಾರೆ ಎನ್ನಲಾಗಿದೆ.

ಚಿನ್ನ ಅಡವಿಟ್ಟುಕೊಳ್ಳಲು ಟೆಲಿಕಾಲರ್ ಮೂಲಕ ಗ್ರಾಹಕರನ್ನು ಸಂಪರ್ಕಿಸಿ ಬ್ಯಾಂಕ್‌ಗಿಂತ ಕಡಿಮೆ 60 ಪೈಸೆ ಬಡ್ಡಿಗೆ ಚಿನ್ನ ಅಡವಿಡಬಹುದು ಎಂದು ನಂಬಿಸುತ್ತಿದ್ದರು. ಕಡಿಮೆ ಬಡ್ಡಿ ಎಂದು ಗ್ರಾಹಕರು ಬೇರೆ ಬ್ಯಾಂಕ್‌ಗಳಲ್ಲಿ ಅಡವಿಟ್ಟಿದ್ದ ಚಿನ್ನ ಬಿಡಿಸಿ ಅನಘ ಗೋಲ್ಡ್‌ನಲ್ಲಿ ಅಡವಿಡುತ್ತಿದ್ದರು. ಈ ವೇಳೆ ಗ್ರಾಹಕರಿಗೆ ಆರೋಪಿಗಳು ಚಿನ್ನಕ್ಕೆ ಶೇ.70ರಿಂದ 80ರಷ್ಟು ಮಾತ್ರ ಹಣ ನೀಡುತ್ತಿದ್ದರು. ನಂತರ ಚಿನ್ನವನ್ನು ಕರಗಿಸಿ ಹೆಚ್ಚಿನ ಹಣಕ್ಕೆ ಮಾರಾಟ ಮಾಡುತ್ತಿದ್ದರು. ಬಂದ ಹಣವನ್ನು ಸಮಾನವಾಗಿ ಮೂವರು ಹಂಚಿಕೊಳ್ಳುತ್ತಿದ್ದರು. ಇದೇ ರೀತಿ 70ಕ್ಕೂ ಹೆಚ್ಚು ಗ್ರಾಹಕರಿಗೆ ವಂಚನೆ ಮಾಡಲಾಗಿದೆ ಎನ್ನಲಾಗಿದೆ.

ಆರೋಪಿಗಳ ವಿರುದ್ಧ ಮೊದಲು ಒಂದು ಪ್ರಕರಣ ದಾಖಲಾಗಿತ್ತು ನಂತರ ಪೊಲೀಸರ ತನಿಖೆ ಕೈಗೊಂಡಾಗ ವಂಚನೆಗೊಳಗಾದ ಗ್ರಾಹಕರು ದೂರು ನೀಡಲು ಮುಂದಾಗಿದ್ದಾರೆ. ಇದೀಗ 13 ಮಂದಿ ಗ್ರಾಹಕರು ದೂರು ನೀಡಿದ್ದು, ಮೊದಲ ದೂರಿನ ಜೊತೆಯಲ್ಲಿಯೇ ಪೊಲೀಸರು ಮತ್ತಷ್ಟು ತನಿಖೆ ಕೈಗೊಂಡಿದ್ದಾರೆ.

ಚಾಮುಂಡಿಬೆಟ್ಟದ ಲಾಡು ಪ್ರಸಾದ ಘಟಕ ಸ್ಥಳಾಂತರಕ್ಕೆ ಆಗ್ರಹ

ಈಗಿನ ಸ್ಥಳ ಕಿರಿದು, ಅನೈರ್ಮಲ್ಯ ಆರೋಪ

ಮೈಸೂರು, ಜು.8– ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಲಾಡು ಪ್ರಸಾದ ತಯಾರಿಸುವ ಸ್ಥಳದಲ್ಲಿ ಅಶುಚಿತ್ವ ತಾಂಡವವಾಡುತ್ತಿದೆ ಎಂದು ಕನ್ನಡಾಂಬೆ ರಕ್ಷಣಾ ವೇದಿಕೆ ಆರೋಪಿಸಿದೆ.

ಲಾಡು ತಯಾರಿಕಾ ಘಟಕದಲ್ಲಿನ ಅವ್ಯವಸ್ಥೆ ಮತ್ತು ಅಶುಚಿತ್ವವನ್ನು ಕಂಡರೆ ಪ್ರಸಾದ ಸ್ವೀಕರಿಸಲು ಭಕ್ತರು ನಿರಾಕರಿಸುವುದಂತು ನಿಜ. ನಿತ್ಯ 20 ರಿಂದ 30ಸಾವಿರ ಲಾಡು ತಯಾರಿಸಲಾಗುತ್ತಿದೆ ಆದರೆ ಈ ಜಾಗ ಅತ್ಯಂತ ಚಿಕ್ಕದಾಗಿದೆ. ಸ್ವಚ್ಛತೆಗೆ ಆದ್ಯತೆ ನೀಡಿಲ್ಲ. ಪಕ್ಕದಲ್ಲೇ ಕಸದ ರಾಶಿ, ಗಲೀಜು ನೀರು ಹರಿಯುತ್ತಿದೆ ಎಂದು ವೇದಿಕೆಯ ಸಂಸ್ಥಾಪಕ ರಾಜ್ಯಾಧ್ಯಕ್ಷ ಬಿ.ಬಿ.ರಾಜಶೇಖರ್ ದೂರಿದ್ದಾರೆ.

ಮಂಗಳವಾರ ಬೆಟ್ಟಕ್ಕೆ ತೆರಳಿದ್ದಾಗ ಲಾಡು ಪ್ರಸಾದ ಘಟಕದ ಅವ್ಯವಸ್ಥೆ ಅನಾವರಣವಾಯಿತು. ಕಟ್ಟಡವೂ ಸುಸ್ಥಿತಿಯಲ್ಲಿಲ್ಲ, ಅಲ್ಲಿನ ಕಾರ್ಮಿಕರಿಗೂ ಯಾವುದೇ ಸೌಲಭ್ಯಗಳನ್ನು ನೀಡಿಲ್ಲ. ಈ ಅವ್ಯವಸ್ಥೆ ಹಾಗೂ ಅಶುಚಿತ್ವದಿಂದಾಗಿ ಬೆಟ್ಟಕ್ಕೆ ಬರುವ ಲಕ್ಷಾಂತರ ಭಕ್ತರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆ ಇದೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಂಡು, ಲಾಡು ತಯಾರಿಕಾ ಘಟಕವನ್ನು ಸುಸಜ್ಜಿತ ಪ್ರದೇಶಕ್ಕೆ ಸ್ಥಳಾಂತರಿಸದಿದ್ದರೆ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಕೆ ನೀಡಿದ್ದಾರೆ. ಈ ವೇಳೆ ವೇದಿಕೆಯ ಪ್ರತಾಪ್, ಮಹದೇವ ಸ್ವಾಮಿ, ಸಂತೋಷ್ ಮತ್ತಿತರರು ಉಪಸ್ಥಿತರಿದ್ದರು.

ಇಂದಿನಿಂದ ಜು.13ರವರೆಗೆ

ಮೈಸೂರು, ಮಂಡ್ಯ, ಚಾ.ನಗರ ಜಿಲ್ಲೆಗಳಲ್ಲಿ ತುಂತುರು, ಕೊಡಗು ಜಿಲ್ಲೆಯಲ್ಲಿ ಭಾರಿ ಮಳೆ ಸಂಭವ

ಮೈಸೂರು, ಜು.8(ಪಿಎಂ)– ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯಂತೆ ಜು.9ರಿಂದ 13ರವರೆಗೆ ಮೈಸೂರು, ಮಂಡ್ಯ ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಮೋಡ ಕವಿದ ವಾತಾವರಣದೊಂದಿಗೆ ತುಂತುರು ಮಳೆಯಾಗುವ ಸಾಧ್ಯತೆ ಇದ್ದರೆ, ಕೊಡಗು ಜಿಲ್ಲೆಯಲ್ಲಿ ಭಾರಿ ಮಳೆಯಾಗುವ ಸಂಭವವಿದೆ ಎಂದು ನಾಗನಹಳ್ಳಿಯ ಕೃಷಿ ಹವಾಮಾನ ಕ್ಷೇತ್ರ ವಿಭಾಗದ ಪ್ರಕಟಣೆ ತಿಳಿಸಿದೆ. ಮೈಸೂರು ಜಿಲ್ಲೆಯಲ್ಲಿ ಗಾಳಿಯು ಗಂಟೆಗೆ 10ರಿಂದ 14 ಕಿಲೋಮೀಟರ್ ವೇಗದಲ್ಲಿ ಬೀಸುವ ಸಾಧ್ಯತೆ ಇದೆ. ಮಂಡ್ಯ ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಗಾಳಿಯು ಗಂಟೆಗೆ 10ರಿಂದ 12 ಕಿಲೋಮೀಟರ್ ವೇಗದಲ್ಲಿ ಬೀಸುವ ಸಂಭವವಿದೆ. ಕೊಡಗು ಜಿಲ್ಲೆಯಲ್ಲಿ ಗಾಳಿಯು ಗಂಟೆಗೆ 6 ಕಿಲೋಮೀಟರ್ ವೇಗದಲ್ಲಿ ಬೀಸುವ ಸಂಭವವಿದೆ.

ಜನೌಷಧ ಕೇಂದ್ರಗಳ ಸ್ಥಗಿತಕ್ಕೆ ರಾಜ್ಯ ಸರ್ಕಾರ ಹೊರಡಿಸಿದ್ದ ಆದೇಶಕ್ಕೆ ಹೈಕೋರ್ಟ್ ತಡೆ

ಇವುಗಳ ಮುಚ್ಚುವುದಕ್ಕೆ ಜನರಿಂದ ಭಾರಿ ವಿರೋಧ; 16 ಮಂದಿ ಹೈಕೋರ್ಟ್ ಮೊರೆ ಹೋಗಿದ್ದರು



ಬೆಂಗಳೂರು, ಜು. 8(ಕೆಎಂಶಿ)– ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿನ ಪ್ರಧಾನಮಂತ್ರಿ ಜನೌಷಧ ಕೇಂದ್ರಗಳನ್ನು ಸ್ಥಗಿತಗೊಳಿಸುವಂತೆ ರಾಜ್ಯ ಸರ್ಕಾರ ಹೊರಡಿಸಿದ್ದ ಆದೇಶಕ್ಕೆ ಕರ್ನಾಟಕ ಹೈಕೋರ್ಟ್ ಇಂದು ತಡೆಯಾಜ್ಞೆ ನೀಡಿದೆ.

ಜನೌಷಧ ಕೇಂದ್ರಗಳ ಸ್ಥಗಿತಕ್ಕೆ ಬಡಜನರಿಂದ ಭಾರಿ ವಿರೋಧ ವ್ಯಕ್ತವಾಗಿತ್ತು, ಅಲ್ಲದೇ, ಈ ಕ್ರಮ ಪ್ರಶ್ನಿಸಿ 16 ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು.

ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ಐ.ಅರುಣ್ ನೇತೃತ್ವದ ನ್ಯಾಯಪೀಠ, ಮುಂದಿನ ವಿಚಾರಣೆವರೆಗೆ ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿನ ಜನೌಷಧ ಕೇಂದ್ರಗಳನ್ನು ಸ್ಥಗಿತಗೊಳಿಸಬಾರದು ಎಂದು ಮಧ್ಯಂತರ ಆದೇಶ ನೀಡಿತು.

ಜನೌಷಧ ಕೇಂದ್ರಗಳಲ್ಲಿ ಬಡಜನರಿಗೆ ಶೇ.50ರಿಂದ ಶೇ.90ರ ರಿಯಾಯಿತಿ ದರದಲ್ಲಿ ಔಷಧಗಳನ್ನು ನೀಡಲಾಗುತ್ತಿದೆ. ಔಷಧ ಮಳಿಗೆಗಳ ಸ್ಥಾಪನೆಗೂ ಹಣ ವೆಚ್ಚವಾಗಿದೆ. ರಾಜ್ಯ ಸರ್ಕಾರದ ಆದೇಶದಿಂದ ಬಡಜನರ ಮೂಲಭೂತ ಹಕ್ಕಿಗೆ ಧಕ್ಕೆ ಆಗಿದೆ ಎಂದು ಅರ್ಜಿದಾರರ ಪರ ವಕೀಲರು ವಾದ ಮಂಡಿಸಿದರು.

ವಾದ ಆಲಿಸಿದ ಹೈಕೋರ್ಟ್, ಮುಂದಿನ ವಿಚಾರಣೆವರೆಗೆ ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿನ ಅರ್ಜಿದಾರರ ಜನೌಷಧ ಕೇಂದ್ರಗಳನ್ನು ಸ್ಥಗಿತಗೊಳಿಸದಂತೆ ಸೂಚಿಸಿತು.

ರಾಜ್ಯ ಆರೋಗ್ಯ ಇಲಾಖೆ ವ್ಯಾಪ್ತಿಯ ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿನ ಜನೌಷಧ ಕೇಂದ್ರಗಳನ್ನು ಮಾತ್ರ ಸ್ಥಗಿತಗೊಳಿಸುವಂತೆ ಸರ್ಕಾರ ಆದೇಶ ಹೊರಡಿಸಿದ ಹಿನ್ನೆಲೆಯಲ್ಲಿ ಪ್ರಧಾನಮಂತ್ರಿ ಜನೌಷಧ ಕೇಂದ್ರಗಳನ್ನು ಮುಚ್ಚಲಾಗಿತ್ತು.

ವಿರೋಧ ಪಕ್ಷ ಬಿಜೆಪಿ ಸೇರಿದಂತೆ ಸಾರ್ವಜನಿಕರು ಸರ್ಕಾರದ ಈ ಕ್ರಮಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದ್ದರು, ಅಲ್ಲದೆ, ಕಡಿಮೆ ದರದಲ್ಲಿ ಬಡವರಿಗೆ ಔಷಧಗಳನ್ನು ನೀಡುವ ಜನೌಷಧ ಕೇಂದ್ರಗಳನ್ನು ಮುಚ್ಚುವುದು ಸರಿಯಲ್ಲ, ರಾಜ್ಯ ಸರ್ಕಾರ ಈ ಕೂಡಲೇ ತನ್ನ ಆದೇಶ ವಾಪಸ್ ಹಿಂಪಡೆಯಬೇಕು ಎಂದು ಆಗ್ರಹಿಸಿದ್ದವು.


ರಾಜ್ಯ ಸರ್ಕಾರಿ ಆಸ್ಪತ್ರೆಯಲ್ಲಿನ ವೈದ್ಯರುಗಳು ಬ್ರ್ಯಾಂಡೆಡ್ ಔಷಧಿಗಳನ್ನು ಹೊರಗಡೆಯಿಂದ ತರುವಂತೆ ರೋಗಿಗಳಿಗೆ ಸಲಹಾ ಚೀಟಿ ನೀಡುವುದನ್ನು ಸರ್ಕಾರ ನಿಷೇಧಿಸಿತ್ತು. ಇದರಿಂದ ರೋಗಿಗಳು ಹೊರಗಿನಿಂದ ಯಾವುದೇ ಔಷಧ ಖರೀದಿಸಲು ಶಿಫಾರಸ್ಸು ಮಾಡದಿರುವುದು ಸರ್ಕಾರದ ನೀತಿಯಾಗಿದೆ.

ಈ ಹಿನ್ನೆಲೆಯಲ್ಲಿ ಸರ್ಕಾರಿ ಆಸ್ಪತ್ರೆ ಆವರಣದಲ್ಲಿನ ಪ್ರಧಾನಮಂತ್ರಿ ಜನೌಷಧಿ ಕೇಂದ್ರಗಳು ವಹಿವಾಟು ನಡೆಸುವುದು, ಜನೌಷಧ ಮಳಿಗೆ ತೆರೆಯುವುದು ಸರ್ಕಾರದ ನೀತಿಗೆ ವಿರುದ್ಧವಾಗಿದೆ.

ಈ ಕಾರಣದಿಂದ ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿನ ಜನೌಷಧಿ ಕೇಂದ್ರಗಳನ್ನು ಬಂದ್ ಮಾಡಲು ರಾಜ್ಯ ಸರ್ಕಾರ ಆದೇಶ ಹೊರಡಿಸಿತ್ತು. ಅಲ್ಲದೇ ಜನೌಷಧ ಮಳಿಗೆ ಆರಂಭಿಸಲು ಅನುಮತಿ ಕೋರಿ ಸಲ್ಲಿಸಲಾಗಿರುವ ಸುಮಾರು 31 ಅರ್ಜಿಗಳು ಪರಿಶೀಲನೆ ಹಂತದಲ್ಲಿದ್ದು, ಇವುಗಳಿಗೆ ಅನುಮತಿ ನೀಡದಂತೆ ಆರೋಗ್ಯ ಇಲಾಖೆಗೆ ಸೂಚಿಸಲಾಗಿತ್ತು

ಮೈಸೂರು ವಕೀಲರ ಸಂಘದ ಗ್ರಂಥಾಲಯಕ್ಕೆ ಸಿಬಿಐ ವಕೀಲ ಪ್ರಸನ್ನಕುಮಾರ್ ಕಾನೂನು ಪುಸ್ತಕಗಳ ಕೊಡುಗೆ

ಹಿರಿಯ ವಕೀಲ ಹೆಚ್.ಎನ್.ವೆಂಕಟೇಶ್ ಮೂಲಕ ಸಲ್ಲಿಕೆ



ಹೈಕೋರ್ಟ್‌ನ ಸಿಬಿಐ ವಕೀಲರಾದ ಪಿ.ಪ್ರಸನ್ನ ಕುಮಾರ್ ಅವರು ನೀಡಿದ ಕಾನೂನು ಪುಸ್ತಕಗಳನ್ನು ವಕೀಲ ಹೆಚ್.ಎನ್.ವೆಂಕಟೇಶ್, ಮೈಸೂರು ವಕೀಲರ ಸಂಘದ ಗ್ರಂಥಾಲಯಕ್ಕೆ ಸಲ್ಲಿಸಿದ ಸಂದರ್ಭ.

ಮೈಸೂರು, ಜು.8– ಕರ್ನಾಟಕ ಹೈಕೋರ್ಟ್‌ನ ಸಿಬಿಐ ವಕೀಲರಾದ ಪಿ.ಪ್ರಸನ್ನಕುಮಾರ್ ಅವರು ಮೈಸೂರು ವಕೀಲರ ಸಂಘದ ಗ್ರಂಥಾಲಯಕ್ಕೆ ಕಾನೂನು ಪುಸ್ತಕಗಳನ್ನು ಕೊಡುಗೆಯಾಗಿ ನೀಡಿದ್ದಾರೆ.

ಹಿರಿಯ ವಕೀಲ ಪಿ.ಪ್ರಸನ್ನಕುಮಾರ ಅವರು ಸುಮಾರು 50 ಸಾವಿರ ರೂ. ಮೌಲ್ಯದ ಹಲವು ಕಾನೂನು ಪುಸ್ತಕಗಳನ್ನು ಲಾಗೈಡ್ ಕನ್ನಡ ಕಾನೂನು ಮಾಸಪತ್ರಿಕೆಯ ಗೌರವ ಸಂಪಾದಕರೂ ಆದ ಹಿರಿಯ ವಕೀಲ ಹೆಚ್.ಎನ್. ವೆಂಕಟೇಶ್ ಅವರ ಮೂಲಕ ಮೈಸೂರು ವಕೀಲರ ಸಂಘಕ್ಕೆ ತಲುಪಿಸಿದ್ದಾರೆ.

ಈ ವೇಳೆ ವಕೀಲ ಹೆಚ್.ಎನ್.ವೆಂಕಟೇಶ್ ಮಾತನಾಡಿ, ಹಿರಿಯ ವಕೀಲರಾದ ಪ್ರಸನ್ನಕುಮಾರ್ ಅವರು ಓದುವುದನ್ನು ಉತ್ತೇಜಿಸುವ ಉದ್ದೇಶದಿಂದ ಪುಸ್ತಕಗಳನ್ನು ಕೊಡುಗೆಯಾಗಿ ನೀಡಿದ್ದಾರೆ. ಇದರಿಂದ ಕಿರಿಯ ವಕೀಲರಿಗೆ ತುಂಬಾ ಉಪಯೋಗವಾಗಲಿದೆ ಎಂದರು.

ಸಂಘದ ಅಧ್ಯಕ್ಷ ಎಸ್.ಲೋಕೇಶ್ ಅವರು ಮಾತನಾಡಿ, ಪುಸ್ತಕಗಳನ್ನು ಕೊಡುಗೆ ನೀಡಿದ ಹಿರಿಯರಾದ ಪ್ರಸನ್ನಕುಮಾರ್ ಅವರಿಗೆ ಕೃತಜ್ಞತೆಗಳು. ಲಾ ಗೈಡ್ ವೆಂಕಟೇಶ್, ಹರೀಶ್‌ಕುಮಾರ್ ಹೆಗಡೆ ಹಾಗೂ ರಾಮಮೂರ್ತಿಯವರು ಸಂಘದ ಗ್ರಂಥಾಲಯ ಉನ್ನತೀಕರಣಕ್ಕೆ ಮತ್ತಷ್ಟು ಸಹಕಾರ ನೀಡುವಂತೆ ಮನವಿ ಮಾಡಿದರು.

ಹಿರಿಯ ವಕೀಲ ಹರೀಶ್ ಕುಮಾರ್ ಹೆಗಡೆ ಮಾತನಾಡಿ, ಪ್ರಸನ್ನಕುಮಾರ್ ಅವರು ಸಂಘದ ಗ್ರಂಥಾಲಯಕ್ಕೆ ಪುಸ್ತಕಗಳನ್ನು ನೀಡಿರುವುದು ಪ್ರಶಂಸನೀಯ. ವಕೀಲರಿಗೆ ಪುಸ್ತಕ, ಪೆನ್ನು ಹಾಗೂ ಡೈರಿ ತುಂಬಾ ಮುಖ್ಯ, ಹಾಗಾಗಿ ಗ್ರಂಥಾಲಯ ಉನ್ನತೀಕರಣಕ್ಕೆ ನಾವೂ ಕೈಜೋಡಿಸುತ್ತೇವೆ ಎಂದು ಭರವಸೆ ನೀಡಿದರು.

ಈ ವೇಳೆ ಸಂಘದ ಕಾರ್ಯದರ್ಶಿ ಎ.ಜಿ.ಸುಧೀರ್, ಉಪಾಧ್ಯಕ್ಷ ಚಂದ್ರಶೇಖರ್, ಜಂಟಿ ಕಾರ್ಯದರ್ಶಿ ಚರಣ್‌ರಾಜ್, ಮಾಜಿ ಅಧ್ಯಕ್ಷ ಜಿ.ವಿ.ರಾಮಮೂರ್ತಿ, ಹಿರಿಯ ಕಮಿಟಿ ಸದಸ್ಯೆ ಕನ್ಯಾಕುಮಾರಿ, ಖಜಾಂಚಿ ಭರತ್ ಕುಮಾರ್, ವಕೀಲರಾದ ಸಿ.ಎಸ್.ಲೋಕೇಶ್, ಸರಗೂರು ಸ್ವಾಮಿ, ಕಣಿಯನಹುಂಡಿ ಶಿವಣ್ಣ, ಸುರೇಶ್, ಡಿ.ಕೆ.ವೆಂಕಟೇಶ್, ಪ್ರಭಾಕರ, ರಾಮಶೇಖರ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ

ವ್ಯಾಸಶ್ರೀಶ ಉಚಿತ ಸಂಚಾರಿ ಚಿಕಿತ್ಸಾಲಯಕ್ಕೆ ಚಾಲನೆ

ತಿ.ನರಸೀಪುರ, ಜು.8– ತಾಲೂಕಿನ ಸೋಸಲೆಯಲ್ಲಿರುವ ಶ್ರೀವ್ಯಾಸರಾಜ ಮಠದ ವತಿಯಿಂದ ಸಾರ್ವಜನಿಕ ಸೇವೆಗೆ ಸಮರ್ಪಿಸಲಾಗಿರುವ ವ್ಯಾಸಶ್ರೀಶ ಉಚಿತ ಸಂಚಾರಿ ಚಿಕಿತ್ಸಾಲಯಕ್ಕೆ ಚಾಲನೆ ನೀಡಲಾಯಿತು.

ತಾಲೂಕಿನ ಹಳೇ ತಿರುಮಕೂಡಲಿನಲ್ಲಿ ಉಚಿತ ಸಂಚಾರಿ ಚಿಕಿತ್ಸಾಲಯಕ್ಕೆ ಚಾಲನೆ ನೀಡಿ ಮಾತನಾಡಿದ ಡಿಕೆಶಿ ಅಭಿಮಾನಿ ಬಳಗದ ಅಧ್ಯಕ್ಷ ಹಾಗೂ ಪುರಸಭೆ ಸದಸ್ಯ ಆರ್.ಚೇತನ್ ಮಾತನಾಡಿ, ಪ್ರಸ್ತುತ ಪ್ರತಿಯೊಬ್ಬರೂ ಉತ್ತಮ ಆರೋಗ್ಯಕ್ಕೆ ಒತ್ತು ಕೊಡುವ ಅವಶ್ಯಕತೆ ಇದೆ. ಗ್ರಾಮೀಣ ಜನತೆ ಯಾವುದೇ ಕಾಯಿಲೆ ಬಂದರೂ ನಿರ್ಲಕ್ಷ್ಯ ಮಾಡುವ ಮೂಲಕ ರೋಗ ಉಲ್ಬಣ ಮಾಡಿಕೊಂಡು ತೊಂದರೆಗೆ ಸಿಲುಕುತ್ತಿದ್ದು, ತಮ್ಮ ಆರೋಗ್ಯದ ಕಡೆ ಗಮನಹರಿಸುತ್ತಿಲ್ಲ. ಹಾಗಾಗಿ ಸೋಸಲೆ ವ್ಯಾಸರಾಜ ಮಠದ ಸ್ವಾಮೀಜಿಗಳು ಬಡ ಜನರ ಅನುಕೂಲಕ್ಕಾಗಿ, ಅವರ ಆರೋಗ್ಯಕ್ಕೆ ಪೂರಕವಾಗಿ ಕೆಲಸ ನಿರ್ವಹಿಸುವ ಉಚಿತ ಸಂಚಾರಿ ಚಿಕಿತ್ಸಾಲಯ ಕೊಡುಗೆ ನೀಡಿದ್ದು, ಈ ಸಂಚಾರಿ ವಾಹನ ಗ್ರಾಮದ ಮನೆ ಮನೆಗೆ ಹೋಗಿ ರೋಗಿಗಳನ್ನು ತಪಾಸಣೆ ಮಾಡುವ ಕೆಲಸ ಮಾಡುತ್ತದೆ. ಗ್ರಾಮೀಣ ಜನರು ಇದರ ಸದುಪಯೋಗಕ್ಕೆ ಮುಂದಾಗಬೇಕೆಂದು ಮನವಿ ಮಾಡಿದರು.



ವ್ಯಾಸಶ್ರೀಶ ಉಚಿತ ಸಂಚಾರಿ ಚಿಕಿತ್ಸಾಲಯಕ್ಕೆ ಹಳೇ ತಿರುಮಕೂಡಲಿನಲ್ಲಿ ಚಾಲನೆ ನೀಡಲಾಯಿತು.

ಜನತೆಯ ಆರೋಗ್ಯ ದೃಷ್ಟಿಯಿಂದ ಸ್ವಾಮೀಜಿಗಳು ಉಚಿತ ಚಿಕಿತ್ಸಾಲಯದ ವ್ಯವಸ್ಥೆ ಕಲ್ಪಿಸಿದ್ದು, ಎಲ್ಲರೂ ಇಂತಹ ಸೇವೆ ಸಲ್ಲಿಸಲು ಸಾಧ್ಯವಿಲ್ಲ. ಮುಂದಿನ ದಿನಗಳಲ್ಲಿ ಸ್ವಾಮೀಜಿಯವರು ಇಂತಹ ಜನಪರ ಕಾರ್ಯಕ್ರಮಗಳನ್ನು ಜನರಿಗೆ ನೀಡುವ ಜೊತೆಗೆ ತಾಲೂಕಿನಲ್ಲಿ ಮಠದ ವತಿಯಿಂದ ಆಸ್ಪತ್ರೆ ನಿರ್ಮಿಸಿ ರೋಗಿಗಳ ಸೇವೆಗೆ ಮುಂದಾಗಲಿ ಎಂದು ಮನವಿ ಮಾಡಿದರು.

ಕಾಂಗ್ರೆಸ್ ಹಿರಿಯ ಮುಖಂಡ ಪಿ.ಸ್ವಾಮಿನಾಥ ಗೌಡ ಮಾತನಾಡಿ, ಗ್ರಾಮೀಣ ರೋಗಿಗಳಿಗೆ ಉಪಯುಕ್ತವಾದ ಕಾರ್ಯಕ್ರಮ ಇದಾಗಿದ್ದು, ಆರೋಗ್ಯ ಸೇವೆ ಎಲ್ಲಾ ಸೇವೆಗಳಿಗಿಂತ ಶ್ರೇಷ್ಠವಾಗಿದೆ. ಮಠದ ವತಿಯಿಂದ ನೀಡಲಾಗುತ್ತಿರುವ ಸೇವೆಯನ್ನು ಸುತ್ತ ಮತ್ತಲ ಗ್ರಾಮದ ಜನತೆ ಉಪಯೋಗಿಸಿಕೊಳ್ಳುವಂತೆ ಕೋರಿದರು.

ವ್ಯಾಸರಾಜ ಮಠದ ಸೇವಕ ಆನಂದ್ ಮಾತನಾಡಿ, ಸೋಸಲೆ ವ್ಯಾಸರಾಜ ಮಠದಿಂದ ಆರಂಭಿಸಿರುವ ಆರೋಗ್ಯ ಸೇವೆ ಸಂಪೂರ್ಣವಾಗಿ ಉಚಿತವಾಗಿದೆ. ಪ್ರಾಥಮಿಕ ಚಿಕಿತ್ಸೆಗೆ ಬೇಕಾದ ಎಲ್ಲಾ ಔಷಧಗಳನ್ನು ಉಚಿತವಾಗಿ ನೀಡಲಾಗುತ್ತದೆ. ರೋಗ ಉಲ್ಬಣವಾಗಿದ್ದಲ್ಲಿ ಮೈಸೂರಿನ ಆಸ್ಪತ್ರೆಗೆ ಕಳುಹಿಸಿ ಕೊಡಲಾಗುತ್ತದೆ. ಅಲ್ಲೂ ಸಹ ನಮ್ಮ ರೆಫರೆನ್ಸ್ ಲೆಟರ್ ಕೊಟ್ಟರೆ ಚಿಕಿತ್ಸಾ ವೆಚ್ಚ ಕಡಿಮೆಯಾಗುತ್ತದೆ. ಮೈಸೂರಿನ ಆಸ್ಪತ್ರೆಯಲ್ಲಿ 1200 ರೂ. ವೆಚ್ಚದ ಸ್ಕ್ಯಾನಿಂಗ್ ಅನ್ನು ನಮ್ಮ ಉಲ್ಲೇಖ ಪತ್ರ ತೋರಿಸಿ ದರೆ 600 ರೂ.ಗಳಿಗೆ ಮಾಡಿಕೊಡಲಾಗುತ್ತದೆ ಎಂದರು.

ಪ್ರತಿ 15 ದಿನಕ್ಕೊಮ್ಮೆ ಶಿಬಿರ ನಡೆಸಿ ಎಲ್ಲಾ ರೀತಿಯ ತಜ್ಞ ವೈದ್ಯರನ್ನು ಕರೆಸಿ ತಪಾಸಣೆ ಮಾಡಿಸುವ ವ್ಯವಸ್ಥೆ ಸಹ ಮಾಡಲಾಗುತ್ತದೆ. ಹೃದಯ, ಕಣ್ಣು, ಮಕ್ಕಳ ತಜ್ಞರು ಹಾಗೂ ಮಾನಸಿಕ ತಜ್ಞರು ಶಿಬಿರದಲ್ಲಿ ಭಾಗವಹಿಸಿ ಚಿಕಿತ್ಸೆ ನೀಡಲಿದ್ದಾರೆ. ಸಂಚಾರಿ ಚಿಕಿತ್ಸಾಲಯವು ಸೋಮವಾರ ಮತ್ತು ಗುರುವಾರ 10.45 ರಿಂದ 11.30 ರವರೆಗೆ ಹೊಸ ತಿರುಮಕೂಡಲು, 11.30 ರಿಂದ 12.30ರವರೆಗೆ ಬಿಲಿಗೆರೆ ಹುಂಡಿ, 12.30 ರಿಂದ 1.30 ರವರೆಗೆ ಡಣಾಯಕನಪುರ, ಮಂಗಳವಾರ 11 ರಿಂದ 12 ಮುಸುವಿನ ಕೊಪ್ಪಲು, 12 ರಿಂದ 1 ಕೆಬ್ಬೇಹುಂಡಿ, ಬುಧವಾರ ಉಕ್ಕಲಗೆರೆ, ಮುಡುಕನಪುರ ಗ್ರಾಮಗಳಲ್ಲಿ ಸಂಚರಿಸಲಿದ್ದು, ಪ್ರತಿ ದಿನ ಹಳೇ ತಿರುಮಕೂಡಲಿನಲ್ಲಿ ಲಭ್ಯವಿರಲಿದ್ದು ಎಲ್ಲರೂ ಇದರ ಸದುಪಯೋಗ ಪಡಿಸಿಕೊಳ್ಳುವಂತೆ ಮನವಿ ಮಾಡಿದರು. ಚೌಡೇಶ್ವರಿ ದೇವಸ್ಥಾನದ ಅರ್ಚಕ ಸೋಮಣ್ಣ, ಸುರೇಶ್, ಟಿ.ಎಂ.ನಾಗಣ್ಣ ಸೇರಿದಂತೆ ಮತ್ತಿತರರಿದ್ದರು.

ಐದಾರು ವರ್ಷಗಳಲ್ಲಿ 100 ಮಂದಿಗೆ ಸಾಗುವಳಿ



ಸುದ್ದಿಗೋಷ್ಠಿಯಲ್ಲಿ ಬಸವರಾಜು ಮಾತನಾಡಿದರು.

ಹೆಚ್.ಡಿ.ಕೋಟೆ, ಜು.8– ಕಳೆದ ಐದಾರು ವರ್ಷಗಳಲ್ಲಿ ತಾಲೂಕಿನಲ್ಲಿ ಕೇವಲ 100 ಮಂದಿಗೆ ಮಾತ್ರ ಸಾಗುವಳಿ ನೀಡಲಾಗಿದ್ದು, ಅರ್ಜಿ ಸಲ್ಲಿಸಿರುವ ಸಂಖ್ಯೆಗೆ ಈ ಪ್ರಮಾಣ ಕಡಿಮೆಯಾಗಿದೆ ಎಂದು ಕರ್ನಾಟಕ ಭೂ ಹಕ್ಕುದಾರರ ವೇದಿಕೆ ಸಂಚಾಲಕ ಜೀವಿಕಾ ಬಸವರಾಜು ತಿಳಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲೂಕಿನಲ್ಲಿ ಭೂ ಹಿಡುವಳಿಗಾಗಿ 11616ಕ್ಕೂ ಹೆಚ್ಚು ಅರ್ಜಿಗಳು ಸಲ್ಲಿಕೆಯಾಗಿವೆ. ಹಲವು ರೈತರು ಕಿಮ್ಮತ್ತನ್ನು ಕಟ್ಟಿದ್ದಾರೆ. ಆದರೆ ಇದುವರೆಗೂ ಭೂ ಹಕ್ಕನ್ನು ನೀಡಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಕಳೆದ 3 ತಲೆಮಾರುಗಳಿಂದ ಉಳುಮೆ ಮಾಡುತ್ತಿರುವ ರೈತರಿಗೆ ಇದುವರೆಗೂ ಭೂಮಿಯ ಮಾಲೀಕನಾಗಲು ಸಾಧ್ಯವಾಗುತ್ತಿಲ್ಲ ಇದರಿಂದ ರೈತ ಜಮೀನುಗಳ ಮೂಲಕ ದೊರೆಯುವ ಫಲವನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ರಿಯಾಯಿತಿ ದರದಲ್ಲಿ ಗೊಬ್ಬರ, ಬಿತ್ತನೆ ಬೀಜ, ಬೆಳೆ ಹಾನಿಯಾದರೆ ಪರಿಹಾರ ಮತ್ತು ಬ್ಯಾಂಕ್‌ಗಳಲ್ಲಿ ಸಾಲ ಸೌಲಭ್ಯ ದೊರೆಯುತ್ತಿಲ್ಲ ಎಂದರು.

ಗೋಷ್ಠಿಯಲ್ಲಿ ರೈತ ಸಂಘದ ತಾಲೂಕು ಅಧ್ಯಕ್ಷ ಮಹದೇವನಾಯಕ, ನಾಗೇಗೌಡ, ಬ್ಯಾಟರಾಯಸ್ವಾಮಿ, ಚಿಕ್ಕಬೋರೇಗೌಡ, ಶಿವರಾಜು, ಮರ್ಷಲಿನ್, ಸುಶೀಲ, ಶಿವಕುಮಾರ್, ಸಿದ್ದರಾಮೇಗೌಡ, ರಾಜು, ಗೋಪಾಲರಾಜು ಇದ್ದರು.

ನಂಜನಗೂಡು ಪತ್ರಕರ್ತರ ಸಂಘಕ್ಕೆ ರಂಗಸ್ವಾಮಿ ಅಧ್ಯಕ್ಷ

ನಂಜನಗೂಡು, ಜು.8– ನಂಜನಗೂಡು ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷರಾಗಿ ಹೆಚ್.ಡಿ.ರಂಗಸ್ವಾಮಿ, ಉಪಾಧ್ಯಕ್ಷರಾಗಿ ವೇಣುಗೋಪಾಲ್, ಕಾರ್ಯದರ್ಶಿಯಾಗಿ ಎನ್.ಪಿ.ದೀಪಕ್ ಹಾಗೂ ಪದಾಧಿಕಾರಿಗಳು ಅವಿರೋಧವಾಗಿ ಆಯ್ಕೆಯಾದರು.

ಮೈಸೂರಿನ ಜಿಲ್ಲಾ ಪತ್ರಕರ್ತರ ಸಂಘ ದಲ್ಲಿ ನಂಜನಗೂಡು ತಾಲೂಕು ಪತ್ರಕರ್ತರ ಸಂಘದ ನೂತನ ಅಧ್ಯಕ್ಷ ಹಾಗೂ ಪಧಾಧಿಕಾರಿಗಳಿಗೆ ಪ್ರಮಾಣ ಪತ್ರವನ್ನು ಜಿಲ್ಲಾಧ್ಯಕ್ಷ ಕೆ.ದೀಪಕ್, ಪ್ರಧಾನ ಕಾರ್ಯದರ್ಶಿ ನಾರಾಯಣ್, ಚುನಾವಣಾಧಿಕಾರಿ ಕಾಶಿನಾಥ್ ವಿತರಿಸಿದರು.

ಜಿಲ್ಲಾಧ್ಯಕ್ಷ ಕೆ.ದೀಪಕ್ ಮಾತನಾಡಿ, ನಂಜನಗೂಡು ತಾಲೂಕು ಪತ್ರಕರ್ತರ ಒಗ್ಗಟ್ಟು ಮತ್ತು ವಿಶ್ವಾಸಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ, ತಾಲೂಕು ಪತ್ರಕರ್ತರ ಸಂಘ ಮತ್ತು ಪತ್ರಕರ್ತರ ಹಿತಾಸಕ್ತಿಯನ್ನು ನೂತನ ಅಧ್ಯಕ್ಷ ಹೆಚ್.ಡಿ.ರಂಗಸ್ವಾಮಿ ಮತ್ತು ಪದಾಧಿಕಾರಿಗಳು ಯಶಸ್ವಿಯಾಗಿ ನಿರ್ವಹಿಸಿಕೊಂಡು ಹೋಗಬೇಕು. ಎಲ್ಲರನ್ನು ಒಟ್ಟಿಗೆ ತೆಗೆದುಕೊಂಡು ಸಂಘದ ಅಭಿವೃದ್ಧಿಗೆ ಶ್ರಮಿಸಬೇಕು. ಜೊತೆಗೆ ಒಕ್ಕೂಟ ವ್ಯವಸ್ಥೆ ಕಾಪಾಡಿಕೊಂಡು ಹೋಗಬೇಕೆಂದು ನೂತನ ಪಧಾಧಿಕಾರಿಗಳಿಗೆ ಕಿವಿಮಾತು ಹೇಳಿದರು.



ನಂಜನಗೂಡು ಪತ್ರಕರ್ತರ ಸಂಘದ ಅಧ್ಯಕ್ಷರು ಸೇರಿದಂತೆ ಪದಾಧಿಕಾರಿಗಳು ಆಯ್ಕೆಯಾದರು.

ಈ ವೇಳೆ ಅಧ್ಯಕ್ಷ ಹೆಚ್.ಡಿ.ರಂಗಸ್ವಾಮಿ, ಉಪಾಧ್ಯಕ್ಷ ಜಿ.ಎಂ.ವೇಣುಗೋಪಾಲ್, ಪ್ರಧಾನ ಕಾರ್ಯದರ್ಶಿ ಎನ್.ಪಿ.ದೀಪಕ್, ಕಾರ್ಯದರ್ಶಿ ಟಿ.ಕೆ.ಬಸವರಾಜು, ಖಜಾಂಚಿ ಎನ್.ಭಾಗ್ಯರಾಜ್, ನಿರ್ದೇಶಕ ರಾಗಿ ಎಂ.ಪ್ರಕಾಶ್, ಪಿ.ಪ್ರತಾಪ್, ಕೆಂಪೇಗೌಡ, ಹುಲ್ಲಹಳ್ಳಿ ಶ್ರೀನಿವಾಸ್, ನಂಜನಗೂಡು ಮಧು, ಎನ್.ಮಹದೇವಸ್ವಾಮಿ, ಕೃಷ್ಣಪ್ಪಗೌಡ ಪ್ರಮಾಣ ಪತ್ರ ಸ್ವೀಕರಿಸಿದರು.

ಬಳಿಕ ನೂತನ ಅಧ್ಯಕ್ಷ ಹೆಚ್.ಡಿ.ರಂಗ ಸ್ವಾಮಿ ಮಾತನಾಡಿ, ನನ್ನನ್ನು ಅಧ್ಯಕ್ಷರನ್ನಾಗಿ ಅವಿರೋಧವಾಗಿ ಆಯ್ಕೆ ಮಾಡಿದ ನಂಜನಗೂಡು ತಾಲೂಕು ಪತ್ರಕರ್ತರ ಸಂಘದ ಎಲ್ಲಾ ಸದಸ್ಯರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ನಿಮ್ಮೆಲ್ಲರ ಸಹಕಾರದಿಂದ ಸಂಘವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುತ್ತೇನೆ ಎಂದರು.

ಸಮಾರಂಭದಲ್ಲಿ ಹಿರಿಯ ಪತ್ರಕರ್ತ ದಿನೇಶ್, ಮಹದೇವ ಪ್ರಸಾದ್, ಸಿ.ಎಂ.ಬಸವರಾಜು, ಚಂದ್ರಶೇಖರ್ ಜಿಲ್ಲಾ ಪತ್ರಕರ್ತರ ಸಂಘದ ಖಜಾಂಚಿ ಸುರೇಶ್, ನಿರ್ದೇಶಕ ಹುಲ್ಲಹಳ್ಳಿ ಮೋಹನ್ ಇತರರಿದ್ದರು.

ಸಹಕಾರ ಬ್ಯಾಂಕ್ ಸ್ಥಾಪನೆಯಿಂದ ಸಂಘದ ಅಭಿವೃದ್ಧಿ

ಶಾಸಕ ಕೆ.ಹರೀಶ್‌ಗೌಡ

ಮೈಸೂರು, ಜು.8– ಸಹಕಾರ ಬ್ಯಾಂಕ್ ಸ್ಥಾಪನೆಯಿಂದ ಸಂಘದ ಆರ್ಥಿಕಾಭಿವೃದ್ಧಿ ಸಾಧ್ಯ ಎಂದು ಶಾಸಕ ಕೆ.ಹರೀಶ್‌ಗೌಡ ತಿಳಿಸಿದರು.

ಮೈಸೂರಿನ ಪಡುವಾರಹಳ್ಳಿಯ ವರಸಿದ್ಧಿ ಶ್ರೀಮಹದೇಶ್ವರಸ್ವಾಮಿ ಕಲ್ಯಾಣ ಮಂಟಪದಲ್ಲಿ ಮೈಸೂರು ನಗರ ಜಿಲ್ಲಾ ವಿದ್ಯುತ್ ದೀಪಾಲಂಕಾರ ಹಾಗೂ ಧ್ವನಿ ವರ್ಧಕ ಮಾಲೀ ಕರ ಸಂಘದ 12–18ನೇ ಮಹಾಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಹಕಾರ ಬ್ಯಾಂಕ್ ಸ್ಥಾಪನೆಯಿಂದ ಸಂಘ ಆರ್ಥಿಕವಾಗಿ ಅಭಿವೃದ್ಧಿಯಾಗಲಿದೆ. ಇದಕ್ಕೆ ನನ್ನ ಸಹಕಾರ ಇರಲಿದೆ. ಯಾವುದೇ ಸಭೇ, ಸಮಾರಂಭ ಹಾಗೂ ಸಮಾವೇಶ ಯಶಸ್ವಿಯಾಗಲು ಧ್ವನಿ ವರ್ಧಕ ಅವಶ್ಯಕ. ನಾಡಹಬ್ಬ ದಸರಾ ಆಕರ್ಷಣೆಗೆ ವಿದ್ಯುತ್ ದೀಪಾಲಂಕಾರ ಪ್ರಮುಖ ಪಾತ್ರ ವಹಿಸು ತ್ತದೆ. ಶ್ರಮ ಜೀವಿಗಳಂತೆ ದುಡಿಯುವ ವಿದ್ಯುತ್ ದೀಪಾಲಂಕಾರ ಹಾಗೂ ಧ್ವನಿವರ್ಧಕ ಮಾಲೀಕರು ಪ್ರಸ್ತುತ ವಿದ್ಯಾ ಮಾನಕ್ಕೆ ತಕ್ಕಂತೆ ಕಾರ್ಯಕ್ರಮಗಳಿಗೆ ದೀಪಾಲಂಕಾರ ಹಾಗೂ ಧ್ವನಿವರ್ಧಕ ಅಳವಡಿಸುವ ಮೂಲಕ ಜನರ ಮೆಚ್ಚುಗೆ ಗಳಿಸುತ್ತಿದ್ದಾರೆ ಎಂದರು.



ಕಾರ್ಯಕ್ರಮವನ್ನು ಶಾಸಕ ಕೆ.ಹರೀಶ್‌ಗೌಡ ಉದ್ಘಾಟಿಸಿದರು.

ಸಂಘದ ಅಧ್ಯಕ್ಷ ಬಿ.ದೇವರಾಜು ಮಾತನಾಡಿ, ಸಂಘದ ಅಭಿವೃದ್ಧಿಗೆ ಸರ್ವ ಸದಸ್ಯರ ಬೆಂಬಲ ಅಗತ್ಯ. ಪ್ರತಿಯೊಬ್ಬರೂ ಸಂಘದ ಸದಸ್ಯತ್ವ ಪಡೆಯುವ ಮೂಲಕ ಸಂಘದ ಅಭಿವೃದ್ಧಿಗೆ ಶ್ರಮಿಸಬೇಕು ಎಂದರು.

ಈ ವೇಳೆ ಗ್ರಾಮ ಅಭ್ಯುದಯ ಟ್ರಸ್ಟ್ ಕಾರ್ಯದರ್ಶಿ ಎಂ.ಭೈರಪ್ಪ, ಸಂಘದ ಗೌರವಾಧ್ಯಕ್ಷ ಪರಶಿವಮೂರ್ತಿ, ಉಪಾಧ್ಯಕ್ಷ ಪ್ರಸಾದ್, ಜಾವೀದ್, ಪ್ರಧಾನ ಕಾರ್ಯದರ್ಶಿ ವೈ.ಎಸ್. ನಾಗೇಶ್ ಪ್ರಸಾದ್, ಸಹಕಾರ್ಯದರ್ಶಿ ರೋಹಿತ್, ಸಂಘಟನಾ ಕಾರ್ಯದರ್ಶಿ ಎಂ.ರಾಜು, ಖಜಾಂಚಿ ಅನ್ಸರ್ ಷರೀಫ್, ನಿರ್ದೇಶಕರಾದ ಜನಾರ್ಧನ್, ಫ್ರಾನ್ಸಿಸ್ ಕುಮಾರ್, ಆರ್.ನಾಗೇಶ್, ಈಜ್ ಅಹಮ್ಮದ್, ಚರಣ್‌ರಾಜ್, ಶಂಭು ನವರತ್ನಕುಮಾರ್, ಅನ್ಸರ್ ಮೌಲಿಸಾಬ್, ಎಂ.ನಾಗೇಶ್, ಶಿವರಾಜು, ಜೆ.ಕೆ.ರಂಗ ನಾಥ್, ಬೋಜಾ, ತಿಮ್ಮು, ಟಿ.ಕೃಷ್ಣ, ನವಾಬ್ ಜಾನ್, ಸುರೇಶ್, ನಾರಾಯಣ್, ವಾಸುಕಿ ನಾಗೇಶ್ ಇನ್ನಿತರರಿದ್ದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ತಿ.ನರಸೀಪುರ, ಜು.8– ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಲ್ಲಿ ಶೇ.60ಕ್ಕಿಂತ ಹೆಚ್ಚು ಅಂಕ ಪಡೆದ ತಾಲೂಕಿನ ಗಾಣಿಗರ ಸಮುದಾಯದ ಪ್ರತಿಭಾನ್ವಿತ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ತಾಲೂಕು ಗಾಣಿಗರ ಸಂಘ ಸೋಸಲೆ ವತಿಯಿಂದ ಪ್ರತಿಭಾ ಪುರಸ್ಕಾರ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ಪ್ರತಿಭಾನ್ವಿತ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಜು.31ರೊಳಗೆ ಅಂಕಪಟ್ಟಿ, ಆಧಾರ್ ಕಾರ್ಡ್ ನಕಲು ಪ್ರತಿಗಳೊಂದಿಗೆ 2 ಪಾಸ್ ಅಳತೆ ಫೋಟೋವನ್ನು ಅರ್ಜಿ ಜೊತೆ ಲಗತ್ತಿಸಿ ಸಂಘದ ಕಚೇರಿಗೆ ತಲುಪಿಸಬೇಕು. ಪ್ರತಿಭಾ ಪುರಸ್ಕಾರ ಸಮಾರಂಭ ಆ.14ರಂದು ಬೆಳಗ್ಗೆ 10 ಗಂಟೆಗೆ ಪಟ್ಟಣದ ದಳವಾಯಿ ಅಗ್ರಹಾರದ ಜ್ಯೋತಿ ನಿಲಯದ ಸಂಘದ ಕಚೇರಿಯಲ್ಲಿ ಏರ್ಪಡಿಸಲಾಗಿದೆ. ಹೆಚ್ಚಿನ ಮಾಹಿತಿಗೆ 9916621138 ಹಾಗೂ 9945382936 ಸಂಪರ್ಕಿಸಬಹುದು.

ಮಡುವಿನಹಳ್ಳಿ ಶಾಲೆ ಎಸ್‌ಡಿಎಂಸಿ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ

ಮಲ್ಕುಂಡಿ, ಜು.8– ಇಲ್ಲಿಗೆ ಸಮೀಪದ ಮಡುವಿನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ನೂತನ ಅಧ್ಯಕ್ಷರಾಗಿ ಎಂ.ಪಿ.ಸತೀಶ್, ಉಪಾಧ್ಯಕ್ಷೆಯಾಗಿ ಮಹೇಶ್ವರಿ ಆಯ್ಕೆಯಾಗಿದ್ದಾರೆ.

ಶಾಲೆ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಎಂ.ಪಿ. ಸತೀಶ್, ಎಂ.ಎಂ.ಲೋಕೇಶ್ ನಾಮಪತ್ರ ಸಲ್ಲಿಸಿದರು. ನಂತರ ನಡೆದ ಚುನಾವಣೆಯಲ್ಲಿ ಸತೀಶ್ 10 ಮತ ಪಡೆದು ಅಧ್ಯಕ್ಷರಾದರೇ, ಲೋಕೇಶ್ 8 ಮತ ಪಡೆದು ಪರಾಭವಗೊಂಡರು. ಉಪಾಧ್ಯಕ್ಷ ಸ್ಥಾನಕ್ಕೆ ಮಹೇಶ್ವರಿ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ, ಮುಖ್ಯಶಿಕ್ಷಕ ಪ್ರಸಾದ್ ಘೋಷಿಸಿದರು.



ಮಡುವಿನಹಳ್ಳಿ ಶಾಲೆ ಅಧ್ಯಕ್ಷರಾಗಿ ಸತೀಶ್, ಉಪಾಧ್ಯಕ್ಷೆಯಾಗಿ ಮಹೇಶ್ವರಿ ಆಯ್ಕೆಯಾದರು.

ನೂತನ ಅಧ್ಯಕ್ಷ ಎಂ.ಪಿ.ಸತೀಶ್ ಮಾತನಾಡಿ, ಪ್ರತಿಯೊಬ್ಬ ಪೋಷಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಿ ಉತ್ತಮ ಶಿಕ್ಷಣ ಕೊಡಿಸಲು ಮುಂದಾಗ ಬೇಕು. ಎಲ್ಲಾ ಸದಸ್ಯರ ಸಹಕಾರದಿಂದ ಶಾಲೆ ಅಭಿವೃದ್ಧಿಗೆ ಶ್ರಮಿಸುವುದಾಗಿ ತಿಳಿಸಿದರು.

ಈ ವೇಳೆ ಸದಸ್ಯರಾದ ರಂಗಸ್ವಾಮಿ, ಮಹದೇವಸ್ವಾಮಿ, ಮಂಜುಳಾ, ಕುಮಾರಿ, ಮಣಿ, ರುದ್ರಸ್ವಾಮಿ, ಬಸವಣ್ಣ, ನಂದಿನಿ, ಶಶಿ, ಸುರೇಶ್, ಲಕ್ಷ್ಮಮ್ಮ, ಶೀಲಾ, ವೆಂಕಟೇಶ, ಮಹೇಶ್, ಪುಟ್ಟಮ್ಮ ಸೇರಿದಂತೆ ಶಿಕ್ಷಕ ವೃಂದದವರು ಹಾಜರಿದ್ದರು.

ರಸ್ತೆಯಲ್ಲಿ ವ್ಹೀಲಿಂಗ್, ಲಾಂಗ್ ಹಿಡಿದು ರೀಲ್ಸ್

ಹುಣಸೂರಲ್ಲಿ ಯುವಕನ ಬಂಧನ



ಹುಣಸೂರು, ಜು.8– ಲಾಂಗ್ ಹಿಡಿದು ರೀಲ್ಸ್ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹರಿಯಬಿಟ್ಟಿದ್ದ ಯುವಕನನ್ನು ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಇಲ್ಲಿನ ಶಬ್ಬೀರ್ ನಗರದ ಕುರ್ಸಾನ್ ಎಂಬಾತನೇ ಲಾಂಗ್ ಬೀಸುತ್ತಾ ರೀಲ್ಸ್ ಮಾಡಿದ ಆರೋಪಿ. ಈತ ರಸ್ತೆಯಲ್ಲಿ ವ್ಹೀಲಿಂಗ್ ಮಾಡುತ್ತಾ ಸಾರ್ವಜನಿಕರಲ್ಲಿ ಭಯ ಹುಟ್ಟಿಸುವಂತೆ ಬೈಕ್ ಓಡಿಸುತ್ತಿದ್ದ. ಈ ಬಗ್ಗೆ ಸಾರ್ವಜನಿಕರು ಪೊಲೀಸರಿಗೆ ಮಾಹಿತಿ ನೀಡಿದ್ದರು.

ಇತ್ತೀಚೆಗೆ ಲಾಂಗ್ ಹಿಡಿದು ಹೀರೋನಂತೆ ಬಿಂಬಿಸಿಕೊಂಡು ರೀಲ್ಸ್ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದ ಕುರ್ಸಾನ್ ವಿರುದ್ಧ ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡು ಆತನನ್ನು ಠಾಣೆಗೆ ಕರೆತಂದು ಎಚ್ಚರಿಕೆ ನೀಡಿ, ಠಾಣಾ ಜಾಮೀನು ಮೇಲೆ ಬಿಡುಗಡೆಗೊಳಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಲಕ್ಷ್ಮೀಪುರ ಡೇರಿಗೆ ಮೋಹನ್ ಅಧ್ಯಕ್ಷ, ವೈರಮುಡಿ ಉಪಾಧ್ಯಕ್ಷ



ಮೋಹನ್



ವೈರಮುಡಿ

ತಿ.ನರಸೀಪುರ, ಜು.8– ತಾಲೂಕಿನ ಲಕ್ಷ್ಮೀಪುರ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಎಂ.ಎನ್. ಮೋಹನ್ ಕುಮಾರ್, ಉಪಾಧ್ಯಕ್ಷರಾಗಿ ವೈರ್‌ಮುಡಿ ಅವಿರೋಧವಾಗಿ ಆಯ್ಕೆಯಾದರು.

ಡೈರಿ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಈ ಹಿಂದಿನ ಅಧ್ಯಕ್ಷ ಸುರೇಶ್, ಉಪಾಧ್ಯಕ್ಷ ಉಮೇಶ್ ಅವರ ರಾಜೀನಾಮೆಯಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಮೋಹನ್ ಕುಮಾರ್, ಉಪಾಧ್ಯಕ್ಷ ಸ್ಥಾನಕ್ಕೆ ವೈರಮುಡಿ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಮಂಜುನಾಥ್ ಘೋಷಿಸಿದರು.

ನೂತನ ಅಧ್ಯಕ್ಷ ಎಂ.ಎನ್.ಮೋಹನ್ ಕುಮಾರ್ ಮಾತನಾಡಿ, ಡೈರಿ ಅಧ್ಯಕ್ಷನಾಗಿ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ. ಸಿಕ್ಕ ಅವಕಾಶ ಸದುಪಯೋಗಪಡಿಸಿಕೊಂಡು ಸಂಘದ ಅಭಿವೃದ್ಧಿಗೆ ಶ್ರಮಿಸುತ್ತೇನೆ. ಡಾ.ಕುರಿಯನ್ ಕಂಡಿದ್ದ ಕನಸು ರೈತರ ಮೂಲಕ ನನಸಾಗಬೇಕು. ಕ್ಷೀರ ಕ್ರಾಂತಿಯಾಗಬೇಕು. ಹೀಗಾಗಿ ಹಾಲು ಉತ್ಪಾದಕರು ಡೈರಿಗೆ ಗುಣಮಟ್ಟದ ಹಾಲು ಪೂರೈಕೆ ಮಾಡುವ ಮೂಲಕ ಸಂಘದ ಅಭಿವೃದ್ಧಿಗೆ ಸಹಕರಿಸಬೇಕು ಎಂದು ಮನವಿ ಮಾಡಿದರು.

ಈ ವೇಳೆ ಸಿಇಓ ಸುಧಾಮಣಿ, ನಿರ್ದೇಶಕರಾದ ಸುರೇಶ್, ದೇವರಾಜು, ಆನಂದ, ಮಹದೇವಮ್ಮ, ವಿಜಯಲಕ್ಷ್ಮಿ, ಕೆಂಪಲಿಂಗಾಚಾರಿ, ಉಮೇಶ್, ಮುಖಂಡರಾದ ಬೋರೇಗೌಡ, ರಾಜು, ವರದರಾಜು, ಉಮೇಶ್, ರವಿ, ಕೃಷ್ಣೇಗೌಡ, ಮಂಜು, ಚಂದ್ರ, ಸುರೇಶ್ ಮತ್ತಿತರರಿದ್ದರು.

ಕೆರೆ ತುಂಬಿಸುವುದು ಸೇರಿದಂತೆ

ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಪ್ರತಿಭಟನೆ

ಹುಣಸೂರು, ಜು.8– ತಾಲೂಕಿನ ಸಿಂಗರಮಾರನಹಳ್ಳಿ ಗ್ರಾಪಂ ವ್ಯಾಪ್ತಿಯ ಕೆರೆಗಳನ್ನು ತುಂಬಿಸುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಕಾರ್ಯಪಾಲಕ ಅಭಿಯಂತರರು, ಹಾರಂಗಿ ಇಲಾಖೆ ಹುಣಸೂರು ವಿಭಾಗ ಕಚೇರಿ ಎದುರು ಸಿಂಗರಮಾರನಹಳ್ಳಿ, ಸೋನಹಳ್ಳಿ, ಗಂಗಡಹೊಸಹಳ್ಳಿ ಗ್ರಾಮಸ್ಥರು ಪ್ರತಿಭಟನೆ ನಡೆಸಲಾಯಿತು.

ತಾಲೂಕಿನ ಸಿಂಗರಮಾರನಹಳ್ಳಿ ಗ್ರಾಮದ ಕೆರೆಗೆ ಸೇರಿದಂತೆ ಗ್ರಾಪಂ ವ್ಯಾಪ್ತಿಯ ಕೆರೆಗಳನ್ನು ಮರದೂರು ಏತ ನೀರಾವರಿ ಯೋಜನೆಯಿಂದ ತುಂಬಿಸಬೇಕು. ಗ್ರಾಮದ ಸಿದ್ದಮ್ಮನಕಟ್ಟೆ, ಊರ ಮುಂದಲ ಕೆರೆ ಒತ್ತುವರಿಯಾಗಿದ್ದು, ಅಳತೆ ಮಾಡಿಸಿ ತೆರವುಗೊಳಿಸಬೇಕು. ಸಾರಿಗೆ ಸೌಲಭ್ಯ ಕಲ್ಪಿಸಬೇಕು. ಗಂಗಡ ಹೊಸಹಳ್ಳಿಯಿಂದ ಸಿಂಗರಮಾರನಹಳ್ಳಿ ವರೆಗಿನ 4 ಕಿಮೀ ರಸ್ತೆ ಅಭಿವೃದ್ಧಿಗೊಳಿಸಬೇಕು. ಗ್ರಾಮದಲ್ಲಿ ಆರೋಗ್ಯ ಉಪಕೇಂದ್ರ ಸ್ಥಾಪಿಸಬೇಕು. ಪಶು ವೈದ್ಯಕೀಯ ಆಸ್ಪತ್ರೆಗೆ ವೈದ್ಯರನ್ನು ನೇಮಿಸಬೇಕು. ಈ ಎಲ್ಲಾ ಬೇಡಿಕೆ ಈಡೇರಿಸದಿದ್ದರೇ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿ, ಮುಂದಿನ ಚುನಾವಣೆಗಳನ್ನು ಬಹಿಷ್ಕರಿಸಲಾಗುವುದು ಎಂದು ಎಚ್ಚರಿಕೆ ನೀಡಿ ಉಪವಿಭಾಗಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.



ಮನವಿ ಸ್ವೀಕರಿಸಿ ಮಾತನಾಡಿದ ಎಸಿ ವಿಜಯ್ ಕುಮಾರ್, ತಮ್ಮ ಮನವಿಯನ್ನು ಸರ್ಕಾರದ ಗಮನಕ್ಕೆ ತರಲಾಗುವುದು ಎಂದರು. ಸತ್ಯ ಎಂಎಎಸ್ ಫೌಂಡೇಶನ್ ಅಧ್ಯಕ್ಷ ಸತ್ಯಪ್ಪ ಮಾತನಾಡಿದರು. ಸಿಂಗರಮಾರನಹಳ್ಳಿ ಗ್ರಾಮಸ್ಥರಾದ ಚಂದ್ರ, ಎಸ್.ಕೆ. ವೆಂಕಟೇಗೌಡ, ಎಸ್.ಎಂ.ಸಿಂಗ್ರೇಗೌಡ, ಸಿ.ರವಿಗೌಡ, ಈಶ್ವರೇಗೌಡ, ಎಸ್.ಜಿ.ರಾಮೇಗೌಡ, ಮಂಜೇಗೌಡ, ಕಾಳೇಗೌಡ, ಜವರನಾಯಕ, ಮಂಚನಾಯಕ, ಮಂಜು, ಸಿದ್ದನಾಯಕ, ಚಿಕ್ಕಶೆಟ್ಟಿ, ಗಜೇಂದ್ರ, ಚಲುವರಾಜು, ಶಿವಕುಮಾರ್ ಸೇರಿದಂತೆ ಗ್ರಾಮಸ್ಥರಿದ್ದರು.

ಶಿಕ್ಷಕರ ಕೊರತೆ ಇರುವ ಶಾಲೆಗಳಿಗೆ

ಶ್ರೀಕ್ಷೇತ್ರ ಧರ್ಮಸ್ಥಳ ಯೋಜನೆಯಿಂದ ಶಿಕ್ಷಕರ ನಿಯೋಜನೆ

ಕ್ಷೇತ್ರ ಶಿಕ್ಷಣಾಧಿಕಾರಿ ಮಹೇಶ್

ನಂಜನಗೂಡು, ಜು.8– ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯವರು ಶಿಕ್ಷಕರ ಕೊರತೆ ಇರುವ ಶಾಲೆಗಳನ್ನು ಗುರ್ತಿಸಿ ಶಿಕ್ಷಕರನ್ನು ನಿಯೋಜಿಸುವ ಮೂಲಕ ಮಕ್ಕಳ ಶೈಕ್ಷಣಿಕ ಪ್ರಗತಿಗೆ ನೆರವಾಗಿದ್ದಾರೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಮಹೇಶ್ ತಿಳಿಸಿದರು.

ಮಂಗಳವಾರ ನಗರದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ಕಚೇರಿಯಲ್ಲಿ ನಡೆದ ಸಮಾರಂಭದಲ್ಲಿ ಸರ್ಕಾರಿ ಶಾಲೆಗಳಿಗೆ ನೇಮಕಗೊಂಡಿರುವ ಗೌರವ ಶಿಕ್ಷಕರಿಗೆ ಮಂಜೂರಾತಿ ಪತ್ರ ವಿತರಿಸಿ ಮಾತನಾಡಿದ ಅವರು, ಜ್ಞಾನದೀಪ ಯೋಜನೆ ಮೂಲಕ ಶಿಕ್ಷಕರನ್ನು ಮುಂಬರುವ ಮಾರ್ಚ್‌ವರೆಗೆ ಆಯ್ದ ಶಾಲೆಗಳಿಗೆ ನಿಯೋಜಿಸುವ ಕಾರ್ಯಕ್ಕೆ ಚಾಲನೆ ನೀಡಲಾಗಿದೆ. ಇನ್ನು ಸರ್ಕಾರಿ ಶಾಲೆಗಳಲ್ಲಿಯೂ ಗುಣಮಟ್ಟದ ಶಿಕ್ಷಣ ಲಭ್ಯವಿದ್ದು, ಸರ್ಕಾರಿ ಶಾಲೆಗಳ ಗುಣಮಟ್ಟ ವೃದ್ಧಿಗೆ ಸರ್ಕಾರದೊಂದಿಗೆ ಸಂಘ ಸಂಸ್ಥೆಗಳು ನೆರವಾಗಬೇಕಿದೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಪತ್ರಕರ್ತರ ಸಂಘದ ಅಧ್ಯಕ್ಷ ರಂಗಸ್ವಾಮಿ, ಶ್ರೀಕ್ಷೇತ್ರ ಧರ್ಮಸ್ಥಳ ಸಂಸ್ಥೆಯವರು ಜನರ ಧಾರ್ಮಿಕ ಶ್ರದ್ಧೆ ಗೌರವಿಸುವ ಜೊತೆಗೆ ಗ್ರಾಮೀಣ ದೇವಾಲಯಗಳ ಜೀರ್ಣೋದ್ಧಾರ, ಕೆರೆ ಕಟ್ಟೆಗಳ ದುರಸ್ಥಿ ಹಾಗೂ ಕೃಷಿ ಚಟುವಟಿಕೆಗಳಿಗೆ ನೆರವಾಗುವ ಮೂಲಕ ಹಳ್ಳಿಗಳ ಉದ್ಧಾರಕ್ಕೆ ಸಹಕಾರ ನೀಡಿದ್ದಾರೆ. ಜೊತೆಗೆ ಕುಡಿತ ಬಿಡಿಸುವ ಶಿಬಿರಗಳನ್ನು ಆಯೋಜಿಸುವ ಮೂಲಕ ಸಾವಿರಾರು ಕುಟುಂಬಗಳ ಪುನಶ್ಚೇತನಕ್ಕೆ ನೆರವಾಗಿದ್ದು, ಇದರೊಂದಿಗೆ ಸರ್ಕಾರಿ ಶಾಲೆಗಳಿಗೆ ಶಿಕ್ಷಕರನ್ನು ನೇಮಿಸುವ ಮೂಲಕ ಮಕ್ಕಳ ಭವಿಷ್ಯಕ್ಕೆ ಬೆಳಕಾಗುತ್ತಿದ್ದಾರೆ. ಜ್ಞಾನದೀಪ ಯೋಜನೆ ಮೂಲಕ ಶಿಕ್ಷಕರಾಗಿ ನೇಮಕವಾಗಿರುವ ಶಿಕ್ಷಕರ ಪಾತ್ರ ಮಹತ್ತರವಾಗಿದ್ದು, ಸರ್ಕಾರಿ ಶಾಲಾ ಮಕ್ಕಳ ಬುದ್ಧಿಶಕ್ತಿ ವೃದ್ಧಿಯೊಂದಿಗೆ ಉತ್ತಮ ಸಂಸ್ಕಾರ ರೂಢಿಸಿಕೊಳ್ಳುವಂತೆ ನೋಡಿಕೊಳ್ಳುವ ಮೂಲಕ ತಮ್ಮ ವೃತ್ತಿ ಶ್ರೇಷ್ಠತೆಯನ್ನು ಕಾಪಾಡಿಕೊಳ್ಳಲು ಶಿಕ್ಷಕರು ಮುಂದಾಗಬೇಕು ಎಂದರು.



ಸರ್ಕಾರಿ ಶಾಲೆಗಳಿಗೆ ನೇಮಕಗೊಂಡಿರುವ ಗೌರವ ಶಿಕ್ಷಕರಿಗೆ ಮಂಜೂರಾತಿ ಪತ್ರ ನೀಡಲಾಯಿತು.

ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ತಾಲೂಕು ಯೋಜನಾಧಿಕಾರಿ ಕೆ.ಧರ್ಮರಾಜ್ ಮಾತನಾಡಿ, ಸರ್ಕಾರಿ ಶಾಲೆಗಳಲ್ಲಿ ಓದುವ ಮಕ್ಕಳ ಶೈಕ್ಷಣಿಕ ಪ್ರಗತಿಗೆ ನೆರವಾಗುವ ಸಲುವಾಗಿ ಎಸ್‌ಕೆಡಿಪಿಆರ್ ಮೂಲಕ ರಾಜ್ಯದಲ್ಲಿ 1 ಸಾವಿರಕ್ಕೂ ಹೆಚ್ಚು ಶಾಲೆಗಳಿಗೆ ಗೌರವ ಶಿಕ್ಷಕರನ್ನು ನಿಯೋಜಿಸಲಾಗಿದ್ದು, ಕಳೆದ ವರ್ಷ ನಂಜನಗೂಡು ತಾಲೂಕಿನ 7 ಶಾಲೆಗಳಿಗೆ ಗೌರವ ಶಿಕ್ಷಕರನ್ನು ಸಂಸ್ಥೆ ಮೂಲಕ ನೇಮಕ ಮಾಡಲಾಗಿತ್ತು. ಈ ಬಾರಿ ಶಿಕ್ಷಣ ಇಲಾಖೆಯವರು ನೀಡಿದ ಮಾಹಿತಿಯನ್ವಯ 15 ಶಾಲೆಗಳಿಗೆ ಗೌರವ ಶಿಕ್ಷಕರನ್ನು ನಿಯೋಜನೆ ಮಾಡಲಾಗಿದೆ ಎಂದರು.

ಈ ವೇಳೆ ಜ್ಞಾನದೀಪ ಯೋಜನೆ ಮೂಲಕ ನೇಮಕಗೊಂಡಿರುವ ಶಿಕ್ಷಕರಿಗೆ ಮಂಜೂರಾತಿ ಪತ್ರ ನೀಡಲಾಯಿತು. ಶಿಕ್ಷಣ ಇಲಾಖೆ ಸಿಆರ್‌ಪಿ ಚಂದ್ರಶೇಖರ್, ನಿವೃತ್ತ ಉಪ ತಹಸೀಲ್ದಾರ್ ಎಸ್.ಎಲ್.ಮೂರ್ತಿ, ಜನ ಜಾಗೃತಿ ಸಮಿತಿ ಸದಸ್ಯರಾದ ಶಿವಯ್ಯ, ಲತಾ ಮೋಹನ್, ಶಶಿಕಲಾ ಸೇರಿದಂತೆ ಶಿಕ್ಷಕರು ಹಾಗೂ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.

ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕರಿಗೆ ಸನ್ಮಾನ



ಟಿ.ಪಿ.ಬೋರೇಗೌಡರನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ, ಜು.8– ಎಂಸಿಡಿಸಿಸಿ ಬ್ಯಾಂಕ್ ನೂತನ ನಿರ್ದೇಶಕ, ತಾಲೂಕಿನ ಕೇತುಪುರ ಪಿಎಸಿಎಸ್ ಅಧ್ಯಕ್ಷ ಟಿ.ಪಿ.ಬೋರೇಗೌಡರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು.

ಸಂಘದ ಕಚೇರಿಯಲ್ಲಿ ನಡೆದ ಸರಳ ಸಮಾರಂಭದಲ್ಲಿ ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕರ ಚುನಾವಣೆಯಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡರ ಬಣದಿಂದ ಸ್ಪರ್ಧಿಸಿ ವಿಜೇತರಾದ ಬೋರೇಗೌಡರನ್ನು ಆಡಳಿತ ಮಂಡಳಿ ಸದಸ್ಯರು ಸನ್ಮಾನಿಸಿದರು.

ನೂತನ ನಿರ್ದೇಶಕ ಟಿ.ಪಿ.ಬೋರೇಗೌಡ ಮಾತನಾಡಿ, ಜಿಲ್ಲಾ ಬ್ಯಾಂಕ್‌ಗೆ ಸ್ಪರ್ಧಿಸು ವಂತೆ ನನಗೆ ನಿರ್ದೇಶನ ನೀಡಿ, ನನ್ನ ಗೆಲುವಿಗೆ ಕಾರಣರಾದ ಶಾಸಕ ಜಿ.ಡಿ.ಹರೀಶ್ ಗೌಡರಿಗೆ ನಾನೂ ಆಭಾರಿಯಾಗಿದ್ದೇನೆ. ಮುಂದಿನ ದಿನಗಳಲ್ಲಿ ಜಿಲ್ಲಾ ಬ್ಯಾಂಕ್‌ನಿಂದ ಬರಬಹುದಾದ ಅನುದಾನವನ್ನು ತಾಲೂಕಿನ ಎಲ್ಲಾ ಸಹಕಾರ ಸಂಘಗಳಿಗೆ ಪ್ರಾಮಾಣಿಕವಾಗಿ ಹಂಚಿಕೆ ಮಾಡುತ್ತೇನೆ. ತಿ.ನರಸೀ ಪುರ ತಾಲೂಕಿಗೆ 32 ಸೊಸೈಟಿಗಳು ಸೇರಲಿದ್ದು, ಪ್ರತಿ ಸೊಸೈಟಿಗೆ ಭೇಟಿ ನೀಡಿ ಅಲ್ಲಿರುವ ಲೋಪದೋಷಗಳನ್ನು ಸರಿಪಡಿಸಿ ಯಾವುದೇ ರಾಜಕೀಯ ಮಾಡದೇ ನ್ಯಾಯ ದೊರಕಿಸಿಕೊಡುತ್ತೇನೆ. ನನ್ನ ಗೆಲುವಿಗೆ ಮಾಜಿ ಶಾಸಕ ಎಂ.ಅಶ್ವಿನ್ ಕುಮಾರ್ ಸಹ ಸಹಕಾರ ನೀಡಿದ್ದು, ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ತಿ.ನರಸೀಪುರ ಕಸಬಾ ಪಿಎಸಿಎಸ್ ಅಧ್ಯಕ್ಷ ಡಣಾಯಕನಪುರ ಮಲ್ಲಣ್ಣ, ಉಪಾಧ್ಯಕ್ಷ ಫಣೀಶ್ ಕುಮಾರ್, ತಾಪಂ ಸದಸ್ಯ ಮೂಗೂರು ಚಂದ್ರು, ಸಂಘದ ಮಾಜಿ ಅಧ್ಯಕ್ಷ ಕೆ.ಕೆಂಪರಾಜು, ನಿರ್ದೇಶಕರಾದ ಎಸ್. ರವಿ, ಎಲ್.ಮಹೇಶ್, ಬಿ.ಯೋಗೇಂದ್ರ, ಕೆ.ಬಿ. ವಿಜಯ ಕುಮಾರ್, ಬಿ.ಆರ್.ಚೆಲುವೇಗೌಡ, ಮಹದೇ ವಯ್ಯ, ಚಾಮನಹಳ್ಳಿ ಸಹಕಾರ ಸಂಘದ ಅಧ್ಯಕ್ಷ ಸತೀಶ್, ಟಿಎಪಿಸಿಎಂಎಸ್ ನಿರ್ದೇಶಕ ಮಹೇಶ್, ಡೈರಿ ನಿರ್ದೇಶಕ ಶ್ರೀಧರ್, ರಾಜೀವ್, ಪಿಎಲ್‌ಡಿ ಬ್ಯಾಂಕ್ ಮಧು, ಸಂಘದ ಕಾರ್ಯದರ್ಶಿ ಬಿ.ಪುಟ್ಟ ಸ್ವಾಮಿ, ಗುಮಾಸ್ತ ಎಸ್.ರಾಜೇಶ್ ಸೇರಿದಂತೆ ಇತರರಿದ್ದರು.

ಹೈದರ್ ಅಲಿ ರಸ್ತೆಯಲ್ಲಿ ಅಗಲೀಕರಣ ಕಾಮಗಾರಿ ಮುಂದುವರಿಕೆ

●ಶಾಸಕ ತನ್ವೀರ್ ಸೇಠ್ ಪರಿಶೀಲನೆ ●ಒಟ್ಟು 30 ಮೀಟರ್ ಅಗಲದಲ್ಲಿ ವಿಸ್ತರಣೆ ●4 ಕೋಟಿ ವೆಚ್ಚದಲ್ಲಿ ಕಾಮಗಾರಿ ●ಸದರಿ ರಸ್ತೆಯಲ್ಲಿ 40 ಮರಗಳ ತೆರವುಗೊಳಿಸಲಾಗಿತ್ತು

ಮೈಸೂರು,ಜು.8(ಪಿಎಂ)– ನಜರ್‌ಬಾದಿನ ಹೈದರ್ ಅಲಿ ರಸ್ತೆಯಲ್ಲಿ ಅಗಲೀಕರಣ ಕಾಮಗಾರಿ ಮುಂದುವರೆದಿದೆ. ಈಗಿರುವ 10 ಮೀಟರ್ ಅಗಲದ ರಸ್ತೆಯನ್ನು ಒಟ್ಟು 30 ಮೀಟರ್‌ಗೆ ವಿಸ್ತರಿಸುವುದು ಸೇರಿದಂತೆ ರಸ್ತೆ ವಿಭಜಕ, ಫುಟ್‌ಪಾತ್ ಹಾಗೂ ಮಳೆ ನೀರು ಚರಂಡಿ ನಿರ್ಮಾಣಕ್ಕೂ 4 ಕೋಟಿ ರೂ. ವೆಚ್ಚದಲ್ಲಿ ಕಾಮಗಾರಿಗೆ ಚಾಲನೆ ನೀಡಲಾಗಿದೆ.

ರಸ್ತೆ ಅಗಲೀಕರಣ ಕಾಮಗಾರಿಗಾಗಿ ಹೈದರ್ ಅಲಿ ರಸ್ತೆಯಲ್ಲಿ ಕಾಳಿಕಾಂಬ ದೇವಸ್ಥಾನದಿಂದ ಎಸ್‌ಪಿ ಕಚೇರಿ ವೃತ್ತದವರೆಗೆ ಕಳೆದ ಏಪ್ರಿಲ್‌ನಲ್ಲಿ 40 ಮರಗಳನ್ನು ಕಡಿದು ನೆಲಕ್ಕುರುಳಿಸಲಾಗಿತ್ತು. ಈ ಕ್ರಮ ಖಂಡಿಸಿ ಪರಿಸರವಾದಿಗಳು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದರು. ಈ ನಡುವೆ ಕಳೆದ ಜೂನ್ 26ರಂದು ಕಾಮಗಾರಿ ಆರಂಭಕ್ಕೆ ಮುಂದಾಗಿದ್ದಾಗ, ಮರಗಳನ್ನು ಕಡಿದಿದ್ದಲ್ಲದೆ, ಗಿಡಗಳನ್ನು ನೆಟ್ಟು ಬೆಳೆಸದೇ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ ಎಂದು ಸ್ಥಳದಲ್ಲೇ ಪರಿಸರವಾದಿಗಳು ಪ್ರತಿಭಟನೆ ನಡೆಸಿದ್ದರು.

ಈ ವೇಳೆ ಹೈದರ್ ಅಲಿ ರಸ್ತೆಯಲ್ಲಿ ಸುಮಾರು 100 ಹಾಗೂ ಬೇರೆಡೆ 300 ಗಿಡಗಳು ಸೇರಿದಂತೆ 400 ಗಿಡಗಳನ್ನು ನೆಟ್ಟು ಬೆಳೆಸುವ ಪಾಲಿಕೆ ಅಧಿಕಾರಿಗಳ ಭರವಸೆ ಮೇರೆಗೆ ಪರಿಸರವಾದಿಗಳು ಪ್ರತಿಭಟನೆ ಕೈಬಿಟ್ಟಿದ್ದರು. ಬಳಿಕ ಮೈಸೂರು ಮಹಾನಗರ ಪಾಲಿಕೆಯು ಕಾಮಗಾರಿಗೆ ಚಾಲನೆ ನೀಡಿತ್ತು. ಇದೀಗ ಕಾಮಗಾರಿ ಭರದಿಂದ ಸಾಗಿದ್ದು, ಸೋಮವಾರ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಸ್ಥಳಕ್ಕೆ ಭೇಟಿ ನೀಡಿ ಕಾಮಗಾರಿಯನ್ನು ಪರಿಶೀಲಿಸಿದರು. ಅಲ್ಲದೇ, ಈ ಸಂಬಂಧ ಪಾಲಿಕೆ ಅಧಿಕಾರಿಗಳಿಂದ ಮಾಹಿತಿ ಪಡೆದರು.


ಮೈಸೂರಿನ ನಜರ್‌ಬಾದಿನ ಹೈದರ್ ಅಲಿ ರಸ್ತೆ ಅಗಲೀಕರಣ ಕಾಮಗಾರಿಯನ್ನು ಶಾಸಕ ತನ್ವೀರ್ ಸೇಠ್ ಸೋಮವಾರ ಪರಿಶೀಲಿಸಿ, ಅಧಿಕಾರಿಗಳಿಂದ ಮಾಹಿತಿ ಪಡೆದರು.

2.5 ಮೀಟರ್ ಅಗಲದ ವಿಭಜಕ ನಿರ್ಮಾಣ: ಹೈದರ್ ಅಲಿ ರಸ್ತೆಯಲ್ಲಿ ಕಾಳಿಕಾಂಬ ದೇವಸ್ಥಾನದಿಂದ ಎಸ್‌ಪಿ ಕಚೇರಿ ವೃತ್ತದವರೆಗೆ (360 ಮೀಟರ್) ರಸ್ತೆ ಅಗಲೀಕರಣ ಕಾಮಗಾರಿ ನಡೆಯುತ್ತಿದೆ. ಈ ಮೊದಲು ಇಲ್ಲಿ ರಸ್ತೆಯು 10 ಮೀಟರ್ ಅಗಲವನ್ನು ಹೊಂದಿತ್ತು ಇದೀಗ ಸಿಡಿಪಿಯಂತೆ ಒಟ್ಟಾರೆ 30 ಮೀಟರ್ ಅಗಲೀಕರಣಗೊಳಿಸಲು ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಜೊತೆಗೆ ರಸ್ತೆ ಮಧ್ಯದಲ್ಲಿ 2.5 ಮೀಟರ್ ಅಗಲದಲ್ಲಿ ರಸ್ತೆ ವಿಭಜಕ ನಿರ್ಮಾಣ ಮಾಡಲಾಗುತ್ತಿದೆ ಎಂದು ಪಾಲಿಕೆ ಅಧಿಕಾರಿಗಳು ಮಾಹಿತಿ ನೀಡಿದರು.

ಅಗಲೀಕರಣದೊಂದಿಗೆ ಮಳೆ ನೀರು ಚರಂಡಿ ಹಾಗೂ ಫುಟ್‌ಪಾತ್ ಸಹ ನಿರ್ಮಿಸಲಾಗುತ್ತಿದೆ. ರಸ್ತೆ ವಿಭಜಕ ಹಾಗೂ ರಸ್ತೆಯ ಎರಡು ಬದಿ ಒಳಗೊಂಡಂತೆ ಮೂರು ಲೇನ್‌ನಲ್ಲಿ ಸಸಿಗಳನ್ನು ನಡೆಲಾಗುವುದು. ಜೊತೆಗೆ ವಿಭಜಕದಲ್ಲಿ ವಿದ್ಯುತ್ ದೀಪಗಳು ಸಹ ಬರಲಿವೆ ಎಂದು ತಿಳಿಸಿದರು.

ಸದರಿ ರಸ್ತೆಯಲ್ಲಿ 40 ಮರಗಳ ತೆರವು ಸಂಬಂಧ ಒಂದು ಮರಕ್ಕೆ 10 ಸಸಿಯಂತೆ 40 ಮರಕ್ಕೆ 400 ಗಿಡಗಳನ್ನು ನೆಟ್ಟು ಬೆಳೆಸುವ ಸಂಬಂಧ ಮೈಸೂರು ಮಹಾನಗರ ಪಾಲಿಕೆಯಿಂದ ಅರಣ್ಯ ಇಲಾಖೆಗೆ ಹಣ ಪಾವತಿ ಮಾಡಲಾಗಿದೆ. ವಿಭಜಕದಲ್ಲಿ ಸಾಧ್ಯವಾದಷ್ಟು ಗಿಡಗಳನ್ನು ನೆಡಲಾಗುವುದು. ಉಳಿದವನ್ನು ಬೇರೆಡೆ ನೆಡಲು ಅರಣ್ಯ ಇಲಾಖೆ ಯೋಜನೆ ಮಾಡಿಕೊಂಡಿದೆ. ಶಾಸಕರ ಎಸ್‌ಎಫ್‌ಸಿ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನದ 4 ಕೋಟಿ ರೂ. ವೆಚ್ಚದಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ ಎಂದು ಹೇಳಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಫಿನಿಕ್ಸ್ (ತ) + ಮಾರ್ಗನ್ (ತ)	2+2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಮಾದೇವ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಸಿತಾರೆ ಜಮೀನ್ ಪರ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕುಲದಲ್ಲಿ ಕೀಳ್ಯಾವುದೋ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾದೇವ (ಕ)	4 ಪ್ರದರ್ಶನಗಳು
ರಾಜಕಮಲ್	
3ಬಿಹೆಚ್‌ಕೆ (ತ)	4 ಪ್ರದರ್ಶನಗಳು
ಸಂಗಂ	
ಪೆನ್‌ಡ್ರೈವ್ (ಕ)	4 ಪ್ರದರ್ಶನಗಳು
ಲಿಡೋ	
ಕುಬೇರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಭಗೀರಥ (ಕ) + ನವಗ್ರಹ (ಕ)	1+3 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	28 ಇಯರ್ಸ್ ಲೇಟರ್ (ಇಂ): ಬೆ.10.40ಕ್ಕೆ, ರಾ.7.55ಕ್ಕೆ, ಡಿಎನ್‌ಎ (ತ): ಮ.1.10ಕ್ಕೆ, ಕುಬೇರಾ (ತೆ): ಸಂ.4.05ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ರಾ.10.25ಕ್ಕೆ.
ಸ್ಕ್ರೀನ್ 2	ಇಲಿಯೋ (3ಡಿ)(ಇಂ): ಬೆ.11.30ಕ್ಕೆ, ಮ.1.45ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ಯುನೈಟೆಡ್ ಕಿಂಗ್‌ಡಮ್ ಆಫ್ ಕೇರಳ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಮಾದೇವ (ಕ): ಬೆ.10.30ಕ್ಕೆ, ರಾ.7.10ಕ್ಕೆ, ಮಾತೊಂದ ಹೇಳುವೆ (ಕ): ಮ.1.15ಕ್ಕೆ, 28 ಇಯರ್ಸ್ ಲೇಟರ್ (ಇಂ): ಸಂ.4.30ಕ್ಕೆ, ವ್ಯಾಸನಸಮೇತಂ

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಎಡಗೈಯೇ ಅಪಘಾತಕ್ಕೆ ಕಾರಣ (ಕ): ಮ.1.45ಕ್ಕೆ, ಸಂ.4.25ಕ್ಕೆ, ಸಂ.6.50ಕ್ಕೆ, ಮಾದೇವ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಮಾದೇವ (ಕ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ.
ಸ್ಕ್ರೀನ್ 3	ಯುದ್ಧಕಾಂಡ 2 (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಹೌಸ್‌ಫುಲ್ 5ಎ (ಹಿಂ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.44ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಕನ್ನಡ ಮಾಧ್ಯಮದಲ್ಲಿ ಓದಿ ಸಾಧನೆ ಮಾಡಿದ ತಮಿಳು ಭಾಷೆಯ ವಿದ್ಯಾರ್ಥಿಗಳಿಗೆ ಪುರಸ್ಕಾರ


ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ತಮಿಳು ಭಾಷೆಯ ವಿದ್ಯಾರ್ಥಿಗಳಿಗೆ ಮೈಸೂರು ತಮಿಳು ಸಂಘದ ವತಿಯಿಂದ ಪುರಸ್ಕಾರ ನೀಡಲಾಯಿತು.

ಮೈಸೂರು, ಜು.8(ಎಂಟಿವೈ)– ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ತಮಿಳು ಭಾಷೆಯ ವಿದ್ಯಾರ್ಥಿಗಳಿಗೆ ಮೈಸೂರು ತಮಿಳು ಸಂಘದ ವತಿಯಿಂದ ಪುರಸ್ಕಾರ ನೀಡಲಾಯಿತು.

ಮೈಸೂರಿನ ಹೆಬ್ಬಾಳು ರಿಂಗ್ ರಸ್ತೆಯಲ್ಲಿರುವ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕನ್ನಡ ಮಾಧ್ಯಮದಲ್ಲಿ ಓದಿರುವ ಪ್ರತಿಭಾನ್ವಿತ ತಮಿಳು ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಇದೇ ವೇಳೆ ಚಾಮರಾಜನಗರದ ಸೈಬರ್ ಕ್ರೈಂ ವಿಭಾಗದ ಮಹೇಶ್ ಮಾತನಾಡಿ, ಇಂದಿನ ಯುವ ಪೀಳಿಗೆ ಮೊಬೈಲ್‌ಗೆ ದಾಸರಾಗಿದ್ದಾರೆ. ಸಾಧನೆ ಮಾಡಲು ಮೊಬೈಲ್‌ನಿಂದ ದೂರವಿರಬೇಕು. ಮೊಬೈಲ್‌ನಿಂದಾಗಿ ಸೈಬರ್ ಅಪರಾಧಗಳು ಹೆಚ್ಚುತ್ತಿವೆ. ಅವುಗಳಲ್ಲಿ ಬರುವ ಹಣದ ಆಮಿಷದ ಜಾಹೀರಾತುಗಳಿಗೆ ಮಾರು ಹೋಗಬಾರದು. ಅವಸರಪಟ್ಟು ಹಣ ತೊಡಗಿಸಿ, ಹಣ ಕಳೆದುಕೊಳ್ಳಬಾರದು ಎಂದು ಸಲಹೆ ನೀಡಿದರು.

ಕಿರುಕೂರು ತಮಿಳು ಸಂಘದ ಅಧ್ಯಕ್ಷ ಅನಿತಾ ಕೃಷ್ಣಮೂರ್ತಿ ಮಾತನಾಡಿ, ನಾವು ಯಾವ ಪ್ರದೇಶದಲ್ಲಿ ವಾಸವಿದ್ದರೂ ಆ ಪ್ರದೇಶಕ್ಕೆ ಆ ಭಾಷೆಗೆ ತಕ್ಕಂತೆ ಹೊಂದಿಕೊಂಡು ಬಾಳ್ವೆ ನಡೆಸಬೇಕು. ಕನ್ನಡ ತಮಿಳು ಮಕ್ಕಳೊಂದಿಗೆ ಅನ್ಯೋನ್ಯವಾಗಿ ಬಾಳಬೇಕು. ಜಾತಿ, ಧರ್ಮ, ಭಾಷೆ, ಎಂಬ ಭೇದ ಭಾವಗಳನ್ನು ಮಾಡದೆ, ಯಾರನ್ನು ನೋಯಿಸದೆ ಮನುಷ್ಯತ್ವದಿಂದ ಬಾಳಬೇಕು ಎಂದರು.

ಕಾರ್ಯಕ್ರಮದಲ್ಲಿ ಮೈಸೂರು ತಮಿಳು ಸಂಘದ ಅಧ್ಯಕ್ಷ ಎಸ್.ಫ್ರಾನ್ಸಿಸ್, ಕಾರ್ಯದರ್ಶಿ ವಿ. ರಘುಪತಿ, ಮೈಸೂರು ಗ್ಲೋಬಲ್ ಡಿಜಿಟಲ್ ಡೆವಲಪ್ಮೆಂಟ್ ಮತ್ತು ಸಲಹೆಗಾರ ರಾಮಕುಮಾರ್, ಪ್ರಿಯ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಸಿಬಿಎಸ್‌ಇ ಮಾದರಿಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ

ಎಸ್‌ಎಸ್‌ಎಲ್‌ಸಿ ಪರೀಕ್ಷಾ ನಿಯಮದಲ್ಲಿ ಬದಲಾವಣೆ ತರಲು ನಿರ್ಧಾರ

ಬೆಂಗಳೂರು, ಜು. 8– ಸಿಬಿಎಸ್‌ಇ ಮಾದರಿಯಲ್ಲೇ ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಡೆಸಲು ಕರ್ನಾಟಕ ಶಿಕ್ಷಣ ಇಲಾಖೆ ಮುಂದಾಗಿದೆ. ಸಿಬಿಎಸ್‌ಇ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳು ಆಂತರಿಕ ಅಂಕಗಳೂ ಸೇರಿ ಒಟ್ಟಾರೆ ಶೇ 33 ಅಂಕ ಪಡೆದರೂ ತೇರ್ಗಡೆಯಾಗುತ್ತಾರೆ. ಪ್ರತಿ ವಿಷಯಕ್ಕೂ 20 ಆಂತರಿಕ ಅಂಕಗಳಿದ್ದು, 80 ಅಂಕಗಳಿಗೆ ಲಿಖಿತ ಪರೀಕ್ಷೆ ನಡೆಸಲಾ ಗುತ್ತದೆ. ಎರಡೂ ಸೇರಿ 100ಕ್ಕೆ ಕನಿಷ್ಠ 33 ಅಂಕ ಪಡೆದವರು ಉತ್ತೀರ್ಣರಾಗುತ್ತಾರೆ.

ಇದೇ ಮಾದರಿಯನ್ನು ಎಸ್‌ಎಸ್‌ಎಲ್‌ಸಿ ಯಲ್ಲೂ ಅಳವಡಿಸಲು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದೆ. ಒಂದು ವೇಳೆ ಸರ್ಕಾರ ಇದಕ್ಕೆ ಒಪ್ಪಿಗೆ ಸೂಚಿಸಿದರೆ, ಕರ್ನಾಟಕ ಪಠ್ಯಕ್ರಮ ಅನುಸರಿಸುವ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಶಾಲೆಗಳ ಮಕ್ಕಳು ಇನ್ನು ಮುಂದೆ ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ (ಸಿಬಿಎಸ್‌ಇ) ಮಾದರಿಯಲ್ಲೇ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಎದುರಿಸಲಿದೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕನ್ನಡ ಸೇರಿ ಪ್ರಥಮ ಭಾಷೆಯನ್ನು 125ಕ್ಕೆ, ಗಣಿತ, ವಿಜ್ಞಾನ, ಸಮಾಜ ವಿಜ್ಞಾನ, ದ್ವಿತೀಯ ಹಾಗೂ ತೃತೀಯ ಭಾಷಾ ವಿಷಯಗಳ ಪರೀಕ್ಷೆಯನ್ನು 100 ಅಂಕಗಳಿಗೆ ನಡೆಸಲಾಗುತ್ತದೆ. ಇದರಲ್ಲಿ ಪ್ರಥಮ ಭಾಷೆ 25 ಹಾಗೂ ಉಳಿದ ಇತರೆ ವಿಷಯಗಳಲ್ಲಿ ತಲಾ 20 ಅಂಕಗಳು ಆಂತರಿಕ ಮೌಲ್ಯಮಾಪನಕ್ಕೆ ನಿಗದಿ ಮಾಡಲಾಗಿದೆ. ಸಿಬಿಎಸ್‌ಇ ಮಾದರಿಯ ಹೊಸ ನಿಯಮ ಜಾರಿಯಾದರೆ ಒಬ್ಬ ವಿದ್ಯಾರ್ಥಿ ಒಂದು ವಿಷಯದಲ್ಲಿ 20 ಆಂತರಿಕ ಅಂಕ ಪಡೆದರೆ, ಲಿಖಿತ ಪರೀಕ್ಷೆಯಲ್ಲಿ 13 ಒಟ್ಟು 33 ಅಂಕ ಬಂದರೂ ಸಾಕು ಆ ವಿಷಯದಲ್ಲಿ ತೇರ್ಗಡೆಯಾಗುತ್ತಾನೆ.

ಪ್ರಥಮ ಭಾಷೆ 125ರ ಬದಲು 100 ಅಂಕಕ್ಕೆ ಇಳಿಸಲು ಪ್ಲಾನ್: ಕನ್ನಡ ಸೇರಿದಂತೆ ಎಸ್‌ಎಸ್‌ಎಲ್‌ಸಿ ಪ್ರಥಮ ಭಾಷಾ ಪರೀಕ್ಷೆಯ ಅಂಕವನ್ನು 125ರ ಬದಲು 100ಕ್ಕೆ ಸೀಮಿತಗೊಳಿಸಲು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ನಿರ್ಧರಿಸಿದೆ. 2026ರ ಮಾರ್ಚ್ ಅಥವಾ ಏಪ್ರಿಲ್‌ನಲ್ಲಿ ನಡೆಯುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಇತರೆ ಐದು ವಿಷಯಗಳಂತೆ ಕನ್ನಡಕ್ಕೂ 125ರ ಬದಲಿಗೆ 100 ಅಂಕಕ್ಕೆ ಇಳಿಸುವ ಚಿಂತನೆಗಳು ನಡೆದಿವೆ.



ಈ ಮೂಲಕ ಒಟ್ಟಾರೆ ಅಂಕಗಳು 625ರಿಂದ 600ಕ್ಕೆ ಇಳಿಯಲಿವೆ.

ನಿವೃತ್ತ ಪ್ರಾಧ್ಯಾಪಕ ಗಣೇಶ್ ಭಟ್ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಪರೀಕ್ಷೆ ಸುಧಾರಣಾ ಸಮಿತಿಯು, ಮುಂಬರುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಒಂದು ಅಂಕದ, ಬಹು ಆಯ್ಕೆಯ ಪ್ರಶ್ನೆಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಅಳವಡಿಸಲು, ಪ್ರತಿ ವಿಭಾಗದಲ್ಲೂ ಹೆಚ್ಚು ಪ್ರಶ್ನೆಗಳನ್ನು ನೀಡಿ, ಯಾವುದಾದರೂ ಎರಡು, ಮೂರು, ನಾಲ್ಕು ಪ್ರಶ್ನೆ ಗಳನ್ನು ಆಯ್ಕೆ ಮಾಡಿಕೊಂಡು ಉತ್ತರ ಬರೆಯುವ ಅವಕಾಶವನ್ನು ವಿದ್ಯಾರ್ಥಿಗಳಿಗೆ ನೀಡಲು ಸಮಿತಿ ಚರ್ಚೆ ನಡೆಸಿದೆ.

ಸಿಬಿಎಸ್‌ಇ ಮಾದರಿಯ ಹೊಸ ನಿಯಮ ಜಾರಿಯಾದರೆ ಒಬ್ಬ ವಿದ್ಯಾರ್ಥಿ ಒಂದು ವಿಷಯದಲ್ಲಿ 20 ಆಂತರಿಕ ಅಂಕ ಪಡೆದರೆ, ಲಿಖಿತ ಪರೀಕ್ಷೆಯಲ್ಲಿ 13 ಬಂದರೂ ತೇರ್ಗಡೆಯಾಗುತ್ತಾನೆ. ಈಗಿರುವ ಎಸ್‌ಎಸ್‌ಎಲ್‌ಸಿ ಪರೀಕ್ಷಾ ನಿಯಮದ ಪ್ರಕಾರ ಒಬ್ಬ ವಿದ್ಯಾರ್ಥಿ ಉತ್ತೀರ್ಣರಾಗಲು ಶೇ 35 ಅಂಕಗಳನ್ನು ಪಡೆಯಬೇಕು. ಖಾಸಗಿ ಶಾಲೆಗಳ ಒಕ್ಕೂಟ ಈ ಹಿಂದೆ ಪತ್ರಿಕಾಗೋಷ್ಠಿ ಮಾಡಿ ಈ ಬಗ್ಗೆ ಒತ್ತಾಯ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದು.

ಒಟ್ಟಿನಲ್ಲಿ ಈ ಹಿಂದಿನಿಂದಲೂ ಪರೀಕ್ಷಾ ವ್ಯವಸ್ಥೆಯಲ್ಲಿ ಬದಲಾವಣೆ ಆಗಬೇಕು ಬೇರೆ ರಾಜ್ಯಗಳಲ್ಲಿ ಇರುವಂತೆ ನಮ್ಮಲ್ಲಿಯೂ ಶೇಕಡಾವಾರು 33 ಪರ್ಸೆಂಟ್ ತರಬೇಕು ಎನ್ನುವ ಅಭಿಪ್ರಾಯ ವ್ಯಕ್ತವಾಗುತ್ತಿದ್ದು ಈಗ ಸರ್ಕಾರಕ್ಕೆ ಶಿಕ್ಷಣ ಇಲಾಖೆ ಪ್ರಸ್ತಾವನೆ ಸಲ್ಲಿಸಿದೆ. ಇನ್ನು ಸರ್ಕಾರ 2026–27 ನೇ ಸಾಲಿಗೆ ಈ ನಿಯಮ ಜಾರಿ ಮಾಡಿ ಆದೇಶ ಹೊರಡಿಸುವ ಸಾಧ್ಯತೆ ಇದೆ.

ಕಾವೇರಿ ಜಲಾನಯನ ಪ್ರದೇಶದ ಅಣೆಕಟ್ಟುಗಳು ಭರ್ತಿ

ತಮಿಳುನಾಡಿಗೆ ಲಕ್ಷಾಂತರ ಕ್ಯುಸೆಕ್ ನೀರು; ತುಂಬಿ ತುಳುಕುತ್ತಿರುವ ಮೆಟ್ಟೂರು ಜಲಾಶಯ



ಮೈಸೂರು, ಜು.8(ಬಿಎಲ್‌ಯು)– ಮಂಡ್ಯದ ಕೃಷ್ಣರಾಜಸಾಗರ ತುಂಬಿ ತುಳುಕುತ್ತಿದ್ದು, ಜಲಾಶಯಕ್ಕೆ ಬರುತ್ತಿರುವ ಕಾವೇರಿ ನೀರನ್ನು ತಮಿಳುನಾಡಿಗೆ ಬಿಡಲಾಗುತ್ತಿದೆ. ಇದರಿಂದ ತಮಿಳುನಾಡಿನ ಮೆಟ್ಟೂರು ಜಲಾಶಯ ಕೂಡ ಭರ್ತಿಯಾಗಿದೆ.

ಕೆಆರ್‌ಎಸ್ ಜಲಾಶಯದ ಗರಿಷ್ಠ ಮಟ್ಟ 124.80 ಅಡಿಗಳಾಗಿದ್ದು, ಇಂದಿನ ಮಟ್ಟ 122.50 ಅಡಿಗಳಾಗಿದೆ. ಜಲಾಶಯಕ್ಕೆ 33,197 ಕ್ಯುಸೆಕ್ ನೀರು ಹರಿದು ಬರುತ್ತಿದ್ದರೆ, ಜಲಾಶಯದಿಂದ 29,126 ಕ್ಯುಸೆಕ್ ನೀರನ್ನು ನದಿಗೆ ಬಿಡಲಾಗುತ್ತಿದೆ.

ಈಗಾಗಲೇ ಲಕ್ಷಾಂತರ ಕ್ಯುಸೆಕ್ ನೀರು ತಮಿಳುನಾಡಿಗೆ ಹರಿದು ಹೋಗುತ್ತಿರುವ ಕಾರಣ ಮೆಟ್ಟೂರು ಜಲಾಶಯ ಕೂಡ ತುಂಬಿ ತುಳುಕುತ್ತಿದೆ. ಮೆಟ್ಟೂರು ಜಲಾಶಯದ ಗರಿಷ್ಠ ಮಟ್ಟ 120 ಅಡಿಗಳಾಗಿದ್ದು, ಇಂದಿನ ಮಟ್ಟ 120 ಅಡಿ.

ಮೆಟ್ಟೂರು ಜಲಾಶಯಕ್ಕೆ ಕೆಆರ್‌ಎಸ್‌ನಿಂದ 36.063 ಕ್ಯುಸೆಕ್ ನೀರು ಹರಿದು ಬರುತ್ತಿದ್ದು, ಮೆಟ್ಟೂರಿನಿಂದ 35,716 ಕ್ಯುಸೆಕ್ ನೀರನ್ನು ಹೊರಗೆ ಬಿಡಲಾಗುತ್ತಿದೆ. ಹೀಗೆ ಜಲಾಶಯದಿಂದ ಬಿಡುತ್ತಿರುವ ನೀರು ತಮಿಳುನಾಡಿನ ಚಿಕ್ಕ ಚಿಕ್ಕ ಅಣೆಕಟ್ಟುಗಳಲ್ಲಿ ಸಂಗ್ರಹವಾಗುತ್ತಿದ್ದು, ಅಲ್ಲಿನ ಕೃಷಿಗೆ ಆಧಾರವಾಗಿದೆ.

ಕರ್ನಾಟಕದಲ್ಲಿ ವರ್ಷಕ್ಕೆ ಎರಡು ಬೆಳೆ ಬೆಳೆದರೆ, ತಮಿಳುನಾಡಿನ ಅಣೆಕಟ್ಟುಗಳಲ್ಲಿ ಸಂಗ್ರಹವಾಗುವ ನೀರಿನಿಂದ ಅಲ್ಲಿನ ರೈತರು ಮೂರು ಬೆಳೆ ಬೆಳೆಯುತ್ತಾರೆ.

ಅಭಿನಂದನೆ


ಹೈದರಾಬಾದ್‌ನಲ್ಲಿ ನಡೆದ ರಾಜ್ಯ ಮಟ್ಟದ 10 ವರ್ಷದೊಳಗಿನ ಜಿಮ್ನಾಸ್ಟಿಕ್ ಸ್ಪರ್ಧೆಯಲ್ಲಿ ಎರಡು ಚಿನ್ನದ ಪದಕ, ಮೂರು ಬೆಳ್ಳಿ ಪದಕ ಹಾಗೂ ಒಂದು ಕಂಚಿನ ಪದಕ ಗೆದ್ದ ಮೈಸೂರು 23ನೇ ವಾರ್ಡಿನ ಭಾರತೀಯ ಜನತಾ ಪಕ್ಷದ 236ರ ಬೂತ್ ಅಧ್ಯಕ್ಷ ನವೀನ್ ಅವರ ಪುತ್ರ ಮಾಸ್ಟರ್ ಅಕ್ಷತ್ ಅವರನ್ನು ಅಭಿನಂದಿಸಿ, ಸನ್ಮಾನಿಸಲಾಯಿತು. ಈ ವೇಳೆ ಮೈಸೂರು ನಗರ ಬಿಜೆಪಿ ಅಧ್ಯಕ್ಷ ಎಲ್. ನಾಗೇಂದ್ರ, ನಗರಪಾಲಿಕೆ ಮಾಜಿ ಸದಸ್ಯರಾದ ಪ್ರಮೀಳಾ ಭರತ್, ಪ್ರಶಾಂತ್ ಗೌಡ, ಮೈಸೂರು ಮುಡಾ ಮಾಜಿ ಸದಸ್ಯ ನವೀನ್ ಕುಮಾರ್, ನಗರ ಬಿಜೆಪಿ ಪ್ರಧಾನ ಕಾರ್ಯದರ್ಶಿ ಬಿ.ಎಂ.ರಘು, ಕೇಬಲ್ ಮಹೇಶ್, ಸಂತೇಪೇಟೆ ಟ್ರೇಡರ್ಸ್ ಅಸೋಸಿಯೇಶನ್ ಕಾರ್ಯದರ್ಶಿ ಪ್ರವೀಣ್ ನವಕಾರ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಬೇಸಿಗೆ ರೇಸ್

7ನೇ ದಿನ, ಬುಧವಾರ, 9–7–2025

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ

I. ಎವಿಟಾ ಪ್ಲೇಟ್ ಡಿII–1200 ಮೀ. ರೇಟೆಡ್ 20 ರಿಂದ 45. ಮ.2.00ಕ್ಕೆ
1. ಕಾಸ್ಮಿಕ್ ಟಚ್ 2. ಪೊಯೋನಿಕ್ಸ್ 3. ಟೈಗರ್ ಕಿಂಗ್

II. ವೈಟ್ ಫೀಲ್ಡ್ ಪ್ಲೇಟ್–1600 ಮೀ. ರೇಟೆಡ್ 00 ರಿಂದ 25. ಮ.2.30ಕ್ಕೆ
1 ದಿ ಏಂಜಲ್ ಪವರ್ 2. ಮಿರಾಕಲ್ ಹನಿ 3. ವಂದನ್

III. ಎವಿಟಾ ಪ್ಲೇಟ್ ಡಿI–1200 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1 ಕ್ರಿಯೆಟೀವ್ ಗರ್ಲ್ 2 ಬ್ಯೂಟಿಫುಲ್ ಬ್ಲೂಮ್ 3. ಮೇಬರಿ

IV. ಹಾರಂಗಿ ಡ್ಯಾಮ್ ಪ್ಲೇಟ್–1200 ಮೀ. ರೇಟೆಡ್ 40 ರಿಂದ 65. ಮ.3.30ಕ್ಕೆ
1. ಟಾಸ್‌ಕಾನ್ 2. ಸಿಯೋಲ್ ಫಾರ್ ಬುಲೆಟ್ 3. ಚಾಯ್ಸ್

V. ಶ್ರೀ ಕನ್‌ವರ್ ಸಿಂಗ್ ಸೈನಿ ನಂಬರ್‌ದಾರ್ ಮೆಮೋರಿಯಲ್ ಕೋಲ್ಟ್ಸ್ ಟ್ರೆಯಲ್ ಸ್ಟೇಕ್ಸ್–1400 ಮೀ. 3 ವರ್ಷ (ಟರ್ಮ್ಸ್). ಸಂ.4.00ಕ್ಕೆ
1. ಪೋರ್‌ಟೀಸ್ 2. ಗೋಲ್ಡ್ ಎಂಪೈರ್ 3. ಎಲ್ರೇ

VI. ರೆಡ್ ರೂಪಸ್ ಪ್ಲೇಟ್ –1800 ಮೀ. ರೇಟೆಡ್ 60 ಮತ್ತು ಮೇಲ್ವರ್ಗ. ಸಂ.4.30ಕ್ಕೆ
1. ಮ್ಯಾಗ್ನಟಿಕ್ 2. ಟಿಗ್ನ್‌ನೆಲ್ಲೊ 3. ಚಾಟ್

VII. ತಲಕಾವೇರಿ ಪ್ಲೇಟ್–1400 ಮೀ. ರೇಟೆಡ್ 40 ರಿಂದ 65. ಸಂ.5.00ಕ್ಕೆ
1. ರೆಡ್ ಫಾಲ್ಕನ್ 2. ಸ್ವಾಗತಂ 3. ನ್ಯಾಚುರಲ್ ಟೋನಾಡೊ

ದಿನದ ಅತ್ಯುತ್ತಮ............	: ಮ್ಯಾಗ್ನಟಿಕ್
ಡಬ್ಬಲ್............	: ಕ್ರಿಯೆಟಿವ್ ಗರ್ಲ್, ಟಾಸ್‌ಕಾನ್
ಜಾಕ್‌ಪಾಟ್............	: 3, 4, 5, 6 ಮತ್ತು 7
ಮಿನಿ ಜಾಕ್‌ಪಾಟ್............	: 4, 5, 6 ಮತ್ತು 7
I ಟ್ರಿಬಲ್............	: 2, 3 ಮತ್ತು 4
II ಟ್ರಿಬಲ್............	: 5, 6 ಮತ್ತು 7
ಎಕ್ಸ್‌ಆಕ್ಟ್............	: 1 ರಿಂದ 7

ಟಿಪ್‌ಸ್ಟರ್ ಪಿಜೆಸಿ

ಮಡಿಕೇರಿಯಲ್ಲಿ 'ಕಾಫಿ ಕಪ್ ಟೇಸ್ಟ್' ಸಂವಾದ; ಆಸ್ಟ್ರೇಲಿಯಾ ಡೆಪ್ಯೂಟಿ ಕೌನ್ಸಿಲ್ ಜನರಲ್‌ಗೆ ಕೊಡಗಿನ 'ಷೇಡ್ ಕಾಫಿ' ಸುವಾಸನೆ ಪರಿಚಯ

ಮಡಿಕೇರಿ, ಜು.8– ಗುಣಮಟ್ಟ ಹಾಗೂ ಸುವಾಸನೆ ಹೊಂದಿರುವ ಕೊಡಗಿನ ಕಾಫಿಗೆ, ಜಾಗತಿಕ ಮಾರುಕಟ್ಟೆಯಲ್ಲಿ ತನ್ನದೇ ಆದ ಸ್ಥಾನ ಹೊಂದಿದೆ. ಇದೀಗ ಆಸ್ಟ್ರೇಲಿಯಾದಲ್ಲೂ ಮಾರುಕಟ್ಟೆ ಸೃಷ್ಟಿಸುವ ನಿಟ್ಟಿನಲ್ಲಿ ಪ್ರಯತ್ನ ನಡೆದಿದೆ.

ಈ ನಿಟ್ಟಿನಲ್ಲಿ ಜಿಲ್ಲೆಯ ಸುಮಾರು 120 ಕಾಫಿ ಬೆಳೆಗಾರರನ್ನೊಳಗೊಂಡ ಬಯೋಟ ಕೂರ್ಗ್ ಫಾರ್ಮಿಂಗ್ ಪ್ರೊಡ್ಯೂಸರ್ ಕಂಪನಿಯಿಂದ ನಗರದ ಹೊರವಲಯದ ಬಿಗ್ ಕಪ್ ಹೋಟೆಲ್‌ನಲ್ಲಿ 'ಕಾಫಿ ಕಪ್ ಟೇಸ್ಟ್ ಹಾಗೂ ಸಂವಾದ' ಕಾರ್ಯಕ್ರಮದಲ್ಲಿ ವೇದಿಕೆ ಸೃಷ್ಟಿಸಲಾಗಿತ್ತು.

ಹದವಾದ ನೆರಳಿನಲ್ಲಿ ಬೆಳೆಯುವ ಕೊಡಗಿನ 'ಷೇಡ್ ಕಾಫಿ' ಸುವಾಸನೆ ಮತ್ತು ಸ್ವಾದವನ್ನು ವಿಶ್ವಸ್ತರದಲ್ಲಿ ಎಲ್ಲೆಡೆ ಪರಿಚಯಿಸುವ ವ್ಯಾಪಕ ಪ್ರಯತ್ನಗಳ ನಡುವೆ, ದೂರದ ಆಸ್ಟ್ರೇಲಿಯಾದಲ್ಲಿ ಮಾರುಕಟ್ಟೆಯನ್ನು ದೊರಕಿಸಿಕೊಳ್ಳುವ ದೂರದೃಷ್ಟಿಯ ಚಿಂತನೆಯೊಂದಿಗೆ ಆಯೋಜಿಸಿದ್ದ ಸಂವಾದದಲ್ಲಿ, ಬೆಂಗಳೂರಿನಲ್ಲಿರುವ ಆಸ್ಟ್ರೇಲಿಯಾದ ಡೆಪ್ಯೂಟಿ ಕೌನ್ಸಿಲ್ ಜನರಲ್‌ಗೆ ಸ್ಥಳೀಯ ಕಾಫಿಯನ್ನು ಪರಿಚಯಿಸುವ ವಿನೂತನ ಕಾರ್ಯಕ್ರಮವನ್ನೂ ಏರ್ಪಡಿಸಲಾಗಿತ್ತು.

ಬಯೋಟ ಕೂರ್ಗ್ ಫಾರ್ಮರ್ ಪ್ರೊಡ್ಯೂಸರ್ ಕಂಪೆನಿ ಸಂಘಟನೆಯ ಪದಾಧಿಕಾರಿಗಳು ಹಾಗೂ ಸದಸ್ಯರು ತಮ್ಮ ತೋಟಗಳಲ್ಲಿ ಬೆಳೆದ 'ಷೇಡ್ ರೋಬಸ್ಟಾ' ಮತ್ತು 'ಅರೇಬಿಕಾ ಕಾಫಿ'ಯ ಸ್ವಾದವನ್ನು ಆಸ್ಟೇಲಿಯಾದ ಡೆಪ್ಯೂಟಿ ಕೌನ್ಸಿಲ್ ಜನರಲ್ ಸ್ಟೀವನ್ ಕನೋಲಿ ಮತ್ತು ಸ್ಟೆಫಿ ಚೆರಿಯನ್‌ಗೆ ಸೊಗಸಾಗಿ ಪರಿಚಯಿಸಲಾಯಿತು. ಟೇಬಲ್‌ನಲ್ಲಿ ಚೊಕ್ಕವಾಗಿ ಜೋಡಿಸಿದ್ದ ಹನ್ನೆರಡು ಕಪ್‌ಗಳಲ್ಲಿದ್ದ ವಿವಿಧ ಸ್ವಾದ ಮತ್ತು ಸುವಾಸನೆಯ ಕಾಫಿ ಹುಡಿಯ ಪರಿಮಳವನ್ನು ಪರಿಚಯಿಸಿದ ಬಳಿಕ ಅದರ ಸ್ವಾದವನ್ನು ಸವಿಯುವ ಅವಕಾಶ ಕಲ್ಪಿಸಲಾಗಿತ್ತು.


ಬಯೋಟ ಕೂರ್ಗ್ ಫಾರ್ಮಿಂಗ್ ಪ್ರೊಡ್ಯೂಸರ್ ಕಂಪನಿಯಿಂದ ನಡೆದ ಕಾಫಿ ಕಪ್ ಟೇಸ್ಟ್ ಮತ್ತು ಸಂವಾದ ಕಾರ್ಯಕ್ರಮ

ಬಯೋಟ ಸಂಸ್ಥೆಯ ಸಿಇಒ ಕೆ.ಕೆ.ವಿಶ್ವನಾಥ್ ಅವರು, ಆಸ್ಟ್ರೇಲಿಯಾದಲ್ಲಿ ಕಾಫಿಯನ್ನು ಮೊದಲಿನಿಂದಲೂ ಬಳಸಲಾಗುತ್ತಿದೆ. ಆದರೆ ಕಾಫಿಯನ್ನು ಬ್ರಿಟನ್ ಮೊದಲಾದ ರಾಷ್ಟ್ರಗಳ ಮಾರುಕಟ್ಟೆಗಳಿಂದ ಆಮದು ಮಾಡಿಕೊಳ್ಳುತ್ತಿತ್ತು. ಇದೀಗ ನೇರವಾಗಿ ಬೇಡಿಕೆಯುಳ್ಳ ಕೊಡಗಿನ ಷೇಡ್ ಕಾಫಿಯನ್ನು ಆಸ್ಟ್ರೇಲಿಯಾದ ಬೆಂಗಳೂರಿನಲ್ಲಿರುವ ಡೆಪ್ಯೂಟಿ ಕೌನ್ಸಿಲ್ ಜನರಲ್‌ಗೆ ಪರಿಚಯಿಸಲಾಗಿದೆ. ಇವರ ಮೂಲಕ ಆಸ್ಟ್ರೇಲಿಯಾದ ಕಾಫಿ ಉದ್ಯಮಿಗಳ ಸಂಪರ್ಕವನ್ನು ಸಾಧಿಸುವ ಚಿಂತನೆ ಇದೆ. ಇದರಿಂದ ಕೊಡಗಿನ ಕಾಫಿಗೆ ಆಸ್ಟ್ರೇಲಿಯಾದಲ್ಲಿ ಮಾರುಕಟ್ಟೆ ಕಂಡುಕೊಳ್ಳುವ ವಿಶ್ವಾಸ ಹೊಂದಲಾಗಿದೆ ಎಂದು ಸ್ಪಷ್ಟಪಡಿಸಿದರು.

ಇದೇ ವೇಳೆ ಆಸ್ಟ್ರೇಲಿಯಾದಲ್ಲಿ ನಡೆಯುವ ಕಾಫಿ ಮಾರುಕಟ್ಟೆಯ ಕಾರ್ಯಕ್ರಮಗಳು ಹಾಗೂ ಪ್ರದರ್ಶನಗಳಲ್ಲಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸಿ, ಸೂಕ್ತ ಮಾರ್ಗದರ್ಶನ ನೀಡಿದ್ದಲ್ಲಿ ಕೊಡಗಿನ ಅತ್ಯುತ್ಕೃಷ್ಟ ಕಾಫಿಯ ಹೆಜ್ಜೆ ಗುರುತುಗಳನ್ನು ಆಸ್ಟ್ರೇಲಿಯಾದಲ್ಲಿ ಮೂಡಿಸಲು ಸಾಧ್ಯ ಎನ್ನುವ ಆಶಾಭಾವನೆಯನ್ನು ಬಯೋಟ ಪದಾಧಿಕಾರಿಗಳು ವ್ಯಕ್ತಪಡಿಸಿದರು. ವಿಶಿಷ್ಟ ಕಾರ್ಯಕ್ರಮದಲ್ಲಿ ಬಯೋಟ ಕೂರ್ಗ್ ಫಾರ್ಮರ್ ಪ್ರೊಡ್ಯೂಸರ್ ಕಂಪೆನಿಯ ನಿರ್ದೇಶಕರು, ಸದಸ್ಯರು ಪಾಲ್ಗೊಂಡಿದ್ದರು.

ಕಾಫಿ ತೋಟಗಳಿಗೆ ಭೇಟಿ: ಆಸ್ಟ್ರೇಲಿಯಾದ ಡೆಪ್ಯೂಟಿ ಕೌನ್ಸಿಲ್ ಜನರಲ್ ಸ್ಟೀವನ್ ಕನೋಲಿ ಮತ್ತು ಸ್ಟೆಫಿ ಚೆರಿಯನ್ ಅವರನ್ನು ಕೊಡಗಿನ ಕಾಫಿ ತೋಟಗಳಿಗೆ ಕರೆದೊಯ್ದು, ಅಲ್ಲಿ ಷೇಡ್ ಕಾಫಿಯನ್ನು ಉತ್ಪಾದಿಸುವ ವಿಧಾನಗಳ ಬಗ್ಗೆ ಬಯೋಟ ಪದಾಧಿಕಾರಿಗಳು ಮಾಹಿತಿ ನೀಡಿದರು.

ನೇರ ಫೋನ್ ಇನ್ ಕಾರ್ಯಕ್ರಮ

ಮೈಸೂರು, ಜು.8–ತಾಳೆ ಬೆಳೆ ಯೋಜನೆ ಸೌಲಭ್ಯಗಳು ಹಾಗೂ ತೋಟಗಾರಿಕೆ ಇಲಾಖೆಯಲ್ಲಿರುವ ಇತರೆ ಅವಕಾಶಗಳು ಕುರಿತು ಮೈಸೂರು ಜಿಲ್ಲೆಯ ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಮಂಜುನಾಥ ಅವರ ಜೊತೆ ನೇರ ಸಂದರ್ಶನ ಫೋನ್–ಇನ್ ಕಾರ್ಯಕ್ರಮವನ್ನು ಮೈಸೂರಿನ ಜೆಎಸ್‌ಎಸ್ ರೇಡಿಯೋ 91.2FM ಕೇಂದ್ರವು ನಾಳೆ (ಜು.9) ಬುಧವಾರ ಬೆಳಗ್ಗೆ 11:30ರಿಂದ 12:30ರವರೆಗೆ ಆಯೋಜಿಸಲಾಗಿದ್ದು, ರೈತರು, ಸಾರ್ವಜನಿಕರು ಈ ಕುರಿತು ಯಾವುದೇ ಪ್ರಶ್ನೆಗಳು, ಸಲಹೆಗಳು ಇದ್ದಲ್ಲಿ ಕರೆ ಮಾಡಿ ನೇರವಾಗಿ ಇಲಾಖೆ ಉಪನಿರ್ದೇಶಕರ ಜೊತೆ ಮಾತನಾಡಬಹುದು. ನೀವು ಕರೆಮಾಡಬಹುದಾದ ನಿಲಯದ ದೂ.ಸಂಖ್ಯೆ: 8296725912, 0821–2546563. ಜೆಎಸ್‌ಎಸ್ ರೇಡಿಯೋವನ್ನು ಪ್ಲೇ ಸ್ಟೋರ್‌ನಲ್ಲಿ ಲಭ್ಯವಿರುವ ಆ್ಯಪ್ ಮೂಲಕವೂ ವಿಶ್ವದ ಯಾವುದೇ ಮೂಲೆಯಲ್ಲಾದರೂ ಆಲಿಸಬಹುದು. ಆ್ಯಪ್ ಲಿಂಕ್: https://play.google.com/store/apps/details-id=com.atc.jss


ವಿಧಾನ ಪರಿಷತ್ ಸದಸ್ಯರಾದ
ಸಿ.ಎನ್.ಮಂಜೇಗೌಡ
ರವರಿಗೆ
ಹುಟ್ಟುಹಬ್ಬದ ಶುಭಾಶಯಗಳು
ಶುಭಕೋರುವವರು : ಪೈ. ದಿನೇಶ್ ಗೌಡ.ಸಿ ಜೆ.ಡಿ.ಎಸ್. ಯುವ ಮುಖಂಡರು ಸುರೇಶ್ ಧರ್ಮ, ಜ್ವಾಲಾಮುಖಿ ಎಂಟರ್‌ಪ್ರೈಸಸ್